ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

12 ನವೆಂಬರ್ 2014 ಪುಟ 20 ರೂ. 15/-




ಮೂಢನಂಬಿಕೆ ಬಸವಧರ್ಮಕ್ಕೆ ವಿರುದ್ಧ




ಪ್ರೀಂ ಕುಣಿಕೆಯಲ್ಲಿ

ಹಲ್ಕಿರಿ'ಗೌಡ




ಮೂರುಸಾವಿರ ಮಠ

ಹತ್ತು ಕೋಟಿಗೆ ಪೀಠ ಮಾರಾಟ




ಗಿಲಿಗಿಲಿಯ ಗೂಂಡಾಗಿರಿ ಪುರಾಣ



ಮಂಡ್ಯ

ಕಟದಾಸ ಕ್ಲೇಶವನ್ನ



ತುಮಕೂರು


KSRTC ಕಾಮಾಯಣ



ಕರಾವಳಿ

ನಿಗಮ ಮಂಡಳಿ ಗುದುಮುರಿಗೆ

ಶಿಕ್ಷಣದಲ್ಲಿ ಅಸಮಾನತೆ ಹೆಚ್ಚಿಸಲಿರುವ ಕಾಂಗ್ರೆಸ್ ಸರ್ಕಾರವ್ರ



ಡಾ.ವಾಸು ಎಚ್.ವಿ.

ಮೇಲ್ನೋಟಕ್ಕೆ ಇಂದು ಕರ್ನಾಟಕದಲ್ಲಿ ಇರುವ ಸರ್ಕಾರ ಪ್ರಗತಿಪರವಾದ ಸರ್ಕಾರ; 'ಅಹಿಂದ ಸರ್ಕಾರ'. ಕೇಂದ್ರದಲ್ಲಿರುವುದು ಕಾರ್ಪೊರೇಟ್-ಕೋಮುವಾದಿಗಳ ಸರ್ಕಾರ. ಎರಡನೆಯದ್ದರ ಬಗ್ಗೆ ಸಂದೇಹವಿಲ್ಲ. ಆದರೆ ರಾಜ್ಯ ಸರ್ಕಾರದ ಪ್ರಗತಿಪರತೆಯ ಬಗ್ಗೆ ಅಷ್ಟೇ ಖಚಿತವಾಗಿ ಹೇಳಲು ಸಾಧ್ಯವಿಲ್ಲ, ಒಂದನ್ನಂತೂ ಹೇಳಬಹುದು. ಈ ಜಾಗದಲ್ಲಿ ಯಡಿಯೂರಪ್ಪ, ಈಶ್ವರಪ್ಪ, ಕುಮಾರಸ್ವಾಮಿ ಅಥವಾ ಕಾಂಗ್ರೆಸ್‌ನ ಬೇರೆ ನಾಯಕರಿದ್ದರೆ ಆಗುತ್ತಿದ್ದ ಕೆಲವು ಅಪಾಯಗಳು ಸಿದ್ದರಾಮಯ್ಯನವರಿಂದ ಆಗುವುದಿಲ್ಲ. ಹಾಗಿದ್ದರೂ, ಈ ಸರ್ಕಾರವೂ ವಿವಿಧ ಸಮುದಾಯಗಳ ನಡುವೆ ಅಸಮಾನತೆ ಹೆಚ್ಚಿಸುತ್ತಿರುವುದರಲ್ಲಿ ಸಂಶಯವೇ ಇಲ್ಲ. ದಲಿತ ಸಮುದಾಯಕ್ಕೆ ಸೇರಿದ, ದಮನಿತ ಸಮುದಾಯಗಳಿಗೆ ಒಳಿತು ಮಾಡಲೆಂದೇ ಇರುವ ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿರುವ ಎಚ್.ಆಂಜನೇಯ ರವರ ಉಸ್ತುವಾರಿಯಲ್ಲಿಯೂ ಈ ಅಸಮಾನತೆ ಹೆಚ್ಚಿಸುವ ಕೆಲಸ ನಡೆಯುತ್ತಿದೆ.


ಇದಕ್ಕೆ ಇಂತಹ ಜನಪ್ರತಿನಿಧಿಗಳ ಸಹಜ ಧೋರಣೆ ಮತ್ತು ಕಾಂಗ್ರೆಸ್ ಪಕ್ಷದ ನೀತಿಯು ಕಾರಣವಾಗಿರುವಂತೆಯೇ ಯಥಾಸ್ಥಿತಿಯನ್ನು ಕಾಪಾಡಲು ಕಟಿಬದ್ಧರಾದ ಅಧಿಕಾರ ಶಾಹಿಯ ಜನವಿರೋಧಿತನವೂ ಕಾರಣವಾಗಿದೆ. ಅಧಿಕಾರ ಶಾಹಿಯ ಕುಟಿಲ ಹಾಗೂ ಕುಶಲ ಕಾರಸ್ಥಾನದ ಪರಿಯನ್ನು ಬಲ್ಲವರೇ ಬಲ್ಲರು. ಸ್ವತಃ ಈ ಅಂಕಣಕಾರನೂ ಸಾಕ್ಷಿಯಾಗಿದ್ದ ಪ್ರಕರಣವೊಂದನ್ನು ಇಲ್ಲಿ ಉದಾಹರಿಸುವುದು ಮೇಲಿನ ಮಾತುಗಳಿಗೆ ಸಾಕ್ಷಿಯನ್ನೊದಗಿಸಬಲ್ಲದು.

ಈ ಘಟನೆ ನಡೆದಿದ್ದು ಇದೇ ವರ್ಷ ಫೆಬ್ರವರಿ 20ರಂದು, ವಿಧಾನಸೌಧದಲ್ಲಿ, ಆರೋಗ್ಯ ಇಲಾಖೆಯಡಿ ಕ್ಷಯರೋಗ ನಿಯಂತ್ರಣ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿ ತಮಗೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ ವೇತನವನ್ನು ನೀಡಬೇಕೆಂದು ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟಿಸುತ್ತಿದ್ದರು. ಆ ಕುರಿತು ಚರ್ಚಿಸಲು ಆರೋಗ್ಯ ಸಚಿವ ಯು.ಟಿ.ಖಾದರ್‌ರನ್ನು ಫೆ.19ರಂದು ಭೇಟಿಯಾಗಿದ್ದೆವು. ಅವರು ಮಾರನೆಯ ದಿನ ಅಧಿವೇಶನ ನಡೆಯುತ್ತಿದ್ದ ಸಭಾಂಗಣದ ಹತ್ತಿರಕ್ಕೇ ಬಂದರೆ, ಅಲ್ಲೇ ಇಲಾಖೆಯ ಕಾರ್ಯದರ್ಶಿಗಳ ಜೊತೆ ಸೇರಿ ಚರ್ಚಿಸೋಣವೆಂದು ಹೇಳಿದರು. ಅದರಂತೆ ಮರುದಿನ ಇಲಾಖೆಯ ಕಾರ್ಯದರ್ಶಿ ಶಿವಶೈಲಂ, ಸಚಿವ ಖಾದರ್ ಮತ್ತು ಸಂಘದ ಪ್ರತಿನಿಧಿಗಳು ಅಧಿವೇಶನ ನಡೆಯುತ್ತಿದ್ದ ಸಭಾಂಗಣದ ಪಕ್ಕದಲ್ಲೇ ಇದ್ದ ಕೊಠಡಿಯಲ್ಲಿ ಸಭೆ ಸೇರಿದೆವು. ಅಲ್ಲಿಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಆಂಜನೇಯ ಅವರು ಬಂದರು. ಅವರಿಗೆ ತಲೆ ಬಿಸಿಯಾಗಿತ್ತು. ಪ್ರತಿಭಟನೆಯಲ್ಲಿ ಭಾಗಿಯಾಗುವ ಅಹಿಂದ ವಿದ್ಯಾರ್ಥಿಗಳಿಗೆ (ಸರ್ಕಾರೀ ಹಾಸ್ಟೆಲ್ ಇರುವುದು ಈ ವಿದ್ಯಾರ್ಥಿಗಳಿಗೆ ಮಾತ್ರ) ಹಾಸ್ಟೆಲ್ ಸೌಲಭ್ಯ ನೀಡುವುದಿಲ್ಲವೆಂಬ ನಿಯಮದ ಕುರಿತು ಅಧಿವೇಶನದಲ್ಲಿ ಚರ್ಚೆ ನಡೆಯುತ್ತಿತ್ತು.

ಮಂತ್ರಿಗಳ ಪಾತ್ರವಿಲ್ಲದೇ ಅಧಿಕಾರಿಗಳು ರೂಪಿಸಿ ಕಳಿಸಿದ್ದ ನಿಯಮವದು. ಅದನ್ನು ಸಮರ್ಥಿಸಿಕೊಳ್ಳಲಾಗದೇ ಆಂಜನೇಯ ಅವರು ತಲೆಕೆಡಿಸಿಕೊಂಡು ಒದ್ದಾಡುತ್ತಿದ್ದರು. ಆ ಸಮಸ್ಯೆಯನ್ನು ಹೊತ್ತುಕೊಂಡೇ ತಮ್ಮ ಸಂಪುಟ ಸಹೋದ್ಯೋಗಿಯೂ ಭಾಗಿಯಾಗಿದ್ದ, ನಾವುಗಳೂ ಇದ್ದ ಜಾಗಕ್ಕೆ ಅವರು ಬಂದರು. ಅವರ ಮುಖದಲ್ಲಿ ಕಾಣುತ್ತಿದ್ದ ಆತಂಕವನ್ನು ಗುರುತಿಸಿದ ಸಚಿವರು ಸಮಸ್ಯೆ ಏನೆಂದು ಕೇಳಿದರು. 'ಸ್ಟ್ರೈಕ್ ಮಾಡಿದ್ರೆ ಹಾಸ್ಟೆಲ್ ಕೊಡಲ್ಲ ಅಂತ ಅದೇನೋ ನಿಯಮ ಮಾಡಿದಾರೆ, ಅದರ ಬಗ್ಗೆ ಬೆಳಗ್ಗೆಯಿಂದ ಒಂದೇ ಸಮನೆ ಕೂಗಾಟ. ಏನು ಮಾಡೋದು?' ಉತ್ತರಿಸಿದರು. ಈ ಚರ್ಚೆಯನ್ನು ಅಷ್ಟು ಹೊತ್ತಿಗೆ ಗಮನಿಸಿದ್ದ ಹಿರಿಯ ಐಎಎಸ್ ಅಧಿಕಾರಿ ಶಿವಶೈಲಂ ಕೂಡಲೇ ಆಂಜನೇಯರಿಗೆ ಹೇಳಿದರು, 'ನೀವು ತಪ್ಪು ತಿಳಿಯೋದಿಲ್ಲ ಅಂದ್ರೆ ನಾನು ಒಂದು ಮಾತು ಹೇಳ್ತೀನಿ ಸಾರ್. ಈ ವಿಚಾರದಲ್ಲಿ ಸರ್ಕಾರದ ಕಡೆಯಿಂದ ತಪ್ಪಾಗಿದೆ'. ನಮಗೆ ಅಧಿಕಾರಿಯ ಮಾತುಗಳ ಬಗ್ಗೆ ಖುಷಿಯಾಯ್ತು. ಅವರು ಮುಂದುವರೆಸಿದರು, 'ಸ್ಟ್ರೈಕ್ ಮಾಡಿದ್ರೆ ಹಾಸ್ಟೆಲ್ ಕೊಡಲ್ಲ ಅಂತ ಹೇಳಬಾರ್ದು ಸರ್. If any student is involved in an unlawful activity, he will be removed from the hostel (ಯಾವುದೇ ವಿದ್ಯಾರ್ಥಿ ಕಾನೂನು ವಿರೋಧಿ ಚಟುವಟಿಕೆಯಲ್ಲಿ ಭಾಗವಹಿಸಿದ್ದರೆ, ಆತನನ್ನು ಹಾಸ್ಟೆಲ್‌ನಿಂದ ತೆಗೆದು ಹಾಕಲಾಗುವುದು) ಅಂತ ಬರಬೇಕು ಅಷ್ಟೇ. ಅದಕ್ಕೆ ಯಾರ ವಿರೋಧವೂ ಬರುವುದಿಲ್ಲ; And what is unlawful activity? Anything including a protest without a permission can be unlawful activity. (ಯಾವುದು ಕಾನೂನು ವಿರೋಧಿ ಚಟುವಟಿಕೆ? ಅನುಮತಿಯಿಲ್ಲದೆ ಮಾಡುವ ಪ್ರತಿಭಟನೆಯೂ ಸೇರಿದಂತೆ ಎಲ್ಲವೂ ಕಾನೂನು ವಿರೋಧಿ ಚಟುವಟಿಕೆಯೇ..) ನಿಮ್ಗೆ ಯಾವಾಗ ಇದನ್ನು ಹೇಗೆ ಬೇಕೋ ಅದನ್ನು ಬಳಸಬೇಕು'.

ಆಂಜನೇಯ ಅವರು ಇದನ್ನು ಮನಸಾರೆ ಮೆಚ್ಚಿಕೊಂಡರೋ ಇಲ್ವೋ ಗೊತ್ತಿಲ್ಲ, ಆದರೆ 'ಪರ್ವಾಗಿಲ್ಲ ಸಾಹೇಬ್ರೇ, ಒಳ್ಳೇ ಸಲಹೆ ಕೊಟ್ರಿ' ಅಂದರು. 'ಅದಕ್ಕೇ ಸಾರ್, ನಮ್ಮಂಥರವರನ್ನು ಜೊತೇಲಿಟ್ಟುಕೊಳ್ಳಬೇಕು' ಶಿವಶೈಲಂ ಅವರ ಉವಾಚ. ಈ ವಿಚಾರದ ಕುರಿತು ಅಂದು ನಡೆದದ್ದು ಕೇವಲ ಒಂದು ಪ್ರಾಸಂಗಿಕ ಮಾತುಕತೆ ಯಷ್ಟೇನಾ? ಅದಕ್ಕೆ ಅಷ್ಟು ಮಹತ್ವ ಕೊಡಬಾರದಾ? ಮುಂದಿನ ಬೆಳವಣಿಗೆ ಏನಾಯಿತೆಂಬುದನ್ನು ನೋಡಿ ಅದನ್ನು ನಿರ್ಧರಿಸಬೇಕು.

ಈ ಮಾತುಕತೆ ನಡೆದ ಕೆಲವು ತಿಂಗಳುಗಳ ನಂತರ ಸಚಿವ ಆಂಜನೇಯ ಅವರ ಇಲಾಖೆಗೂ ಸಂಬಂಧಪಡುವ ಒಂದು ಆದೇಶವನ್ನು ಸರ್ಕಾರವು ಹೊರಡಿಸಿದೆ. ಇದುವರೆಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮತ್ತು ಪ.ಜಾತಿ ಹಾಗೂ ಪ.ಪಂಗಡಗಳ ವಿದ್ಯಾರ್ಥಿಗಳ ಕಾಲೇಜು ಬೋಧನಾ




ಶಿವಶೈಲಂ

ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳನ್ನು ಸರ್ಕಾರವು ನೇರವಾಗಿ ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡುತ್ತಿತ್ತು. ಅದನ್ನು ಬಿಜೆಪಿ ಸರ್ಕಾರವು ಬದಲಿಸಿತು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ತಾವೇ ಮೊದಲು ಹಣ ಕಟ್ಟಬೇಕು, ಅದನ್ನು ಸರ್ಕಾರವು ನಂತರ ವಿದ್ಯಾರ್ಥಿಗಳಿಗೆ ಮರುಪಾವತಿ ಮಾಡುತ್ತದೆ ಎಂದು ಆ ಆದೇಶದಲ್ಲಿ ಹೇಳಲಾಗಿತ್ತು. ಒಂದು ವೇಳೆ ಸರ್ಕಾರ ಎಲ್ಲರಿಗೂ ಮರುಪಾವತಿ ಮಾಡುವುದಾದರೆ, ತಾನೇ ಏಕೆ ನೇರವಾಗಿ ಹಣ ಕಟ್ಟಬಾರದು. ಅಲ್ಲೇ ಅಸಲಿ ಸತ್ಯ ಇರುವುದು. ಮರುಪಾವತಿಗೆ ಸರ್ಕಾರ ಹಲವು ನಿಬಂಧನೆಗಳನ್ನು ಹಾಕಿದೆ. ಎಷ್ಟು ನಿಬಂಧನೆಗಳಿವೆ ಎಂದರೆ, ಸರ್ಕಾರ ಒಬ್ಬೇ ಒಬ್ಬ ವಿದ್ಯಾರ್ಥಿಗೂ ಮರುಪಾವತಿ ಮಾಡದೇ ಇರಬಹುದು! ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಯಾರಾದರೂ ಏನು ನಿರೀಕ್ಷಿಸಬಹುದು? ಬಿಜೆಪಿ ಸರ್ಕಾರದ ಆದೇಶವನ್ನು ಅದು ಹಿಂಪಡೆಯುತ್ತದೆ ಎಂದು ಅಲ್ಲವೇ?

ಕಾಂಗ್ರೆಸ್ ಸರ್ಕಾರವು ಇದನ್ನು ಪ.ಜಾತಿ, ಪ.ಪಂಗಡದವರಿಗೂ ವಿಸ್ತರಿಸಿತು!! ಜೊತೆಗೆ ಮರುಪಾವತಿಗೆ ಇನ್ನಷ್ಟು ಷರತ್ತುಗಳನ್ನು ಸೇರಿಸಿತು. ಅದರಲ್ಲಿ ಒಂದು ಹೀಗಿದೆ. Therefore if, the academic performance is not satisfactory or absents frequently and unauthorizedly from the classes, or participates in strikes or involves in any unlawful activities such students shall be rejected or the benefit if already sanctioned, shall be cancelled" ಶಿವಶೈಲಂ ಅಂದು ವಿಧಾನಸೌಧದಲ್ಲಿ ಹೇಳಿದ ಮಾತು ಜಾರಿಯಾಗಿದೆ. ಸ್ವತಃ ತಾವೇ ವಿದ್ಯಾರ್ಥಿ ಚಳವಳಿಗಳಲ್ಲಿ ಭಾಗವಹಿಸಿದ್ದಾಗಿ ಹೇಳಿಕೊಳ್ಳುವ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಇರುವ ಸರ್ಕಾರವೊಂದು ಈ ರೀತಿಯ ಆದೇಶವನ್ನು ಹೊರಡಿಸುತ್ತದೆ. ಆದೇಶ ಹೊರಡಿಸುವ ಸ್ಥಾನದಲ್ಲಿ ಶಿವಶೈಲಂ ಇರದಿರಬಹುದು; ಆದರೆ ಶಿವಶೈಲಂ ಮನಸ್ಥಿತಿಯ ಅಧಿಕಾರಿಯಂತೂ ಇದ್ದಿರುತ್ತಾರೆ.

ಇಂತಹ ಅಧಿಕಾರಶಾಹಿ ಮನಸ್ಥಿತಿಯೇ ಸರ್ಕಾರಗಳನ್ನು ನಡೆಸುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರು 2007ರಲ್ಲಿ ಒಂದು ಪ್ರತಿಭಟನೆ ನಡೆಸಿದಾಗ ಒಬ್ಬ ಅಧಿಕಾರಿ ಹೀಗೆ ಹೇಳಿದ್ದರು 'ಈಗ ನೀವು ಪ್ರತಿಭಟನೆ ಮಾಡುವ ಹಾಗಿಲ್ಲ, ಏಕೆಂದರೆ ಈಗ ಪ್ರಜಾಪ್ರಭುತ್ವವಿಲ್ಲ; ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದೆ'. ಇದೇ ಅರ್ಥದ ಮಾತನ್ನು ಇದೇ ಶಿವಶೈಲಂ ಒಂದು ವಾರದ ಕೆಳಗೆ ಹಿರಿಯ ಲೇಖಕ ಪ್ರೊ.ಎಚ್.ಎಲ್.ಕೇಶವಮೂರ್ತಿ ಮತ್ತು ರೈತನಾಯಕರಾದ ಸುನಂದಾ ಜಯರಾಂ ಹಾಗೂ ಕೆ.ಬೋರಯ್ಯನವರ ನಿಯೋಗಕ್ಕೆ ಹೇಳಿದ್ದಾರೆ. ಶಿವಶೈಲಂ ಒಂದು ಮನಸ್ಥಿತಿಯ ಪ್ರತೀಕ. ಆ ಮನಸ್ಥಿತಿಯು ಅಸಮಾನ ಸಮಾಜದ ಯಥಾಸ್ಥಿತಿಯನ್ನು, ಶ್ರೇಣೀಕೃತ ಸಮಾಜದ ಯಥಾಸ್ಥಿತಿಯನ್ನು ಮತ್ತು ಕಾರ್ಪೊರೇಟ್ ಅಭಿವೃದ್ಧಿಯ ಬೆಳವಣಿಗೆಯನ್ನು ಸಾಧಿಸಲು ತಮ್ಮ ಕುಶಲತೆ ಹಾಗೂ ಕುಟಿಲತೆಯನ್ನು ಶಕ್ತಿಮೀರಿ ಧಾರೆಯೆರೆಯುವ ಮನಸ್ಥಿತಿ.

ಅವರಿರುವುದೇ ಹೀಗೆ, ಹಾಳಾಗಲಿ ಎಂದುಕೊಳ್ಳೋಣ. ಆದರೆ ಸಮಾಜ ಕಲ್ಯಾಣ ಸಚಿವ ಆಂಜನೇಯರಿಗೇನಾಗಿದೆ? ವಿಧಾನಸಭಾ ಅಧಿವೇಶನದಲ್ಲೂ ಚರ್ಚೆಯಾದ ಸಂಗತಿಯ ಬಗ್ಗೆ ಸಿದ್ದರಾಮಯ್ಯನವರು ಏಕೆ ಗಮನಹರಿಸಿಲ್ಲ? ಇರಲಿ, ಇದು ಪ್ರಜಾತಂತ್ರದ ಬಹುಮುಖ್ಯ ಗುಣಲಕ್ಷಣಗಳಲ್ಲೊಂದಾದ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರತಿಭಟನೆಯ ಹಕ್ಕಿನ ಸಂಗತಿಯಾಯಿತು. ದಮನಿತ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವರೆಸುವುದೇ ದುಸ್ತರವಾಗಲಿದೆ. ಏಕೆಂದರೆ, ಶುಲ್ಕ ಮರುಪಾವತಿಯ ಮೋಸದ ಮೂಲಕ ಅವರೂ ಶುಲ್ಕ ಕಟ್ಟುವಂತೆ ಸರ್ಕಾರ ಮಾಡುತ್ತಿದೆಯಷ್ಟೇ ಅಲ್ಲ, ಸದರಿ ಶುಲ್ಕಗಳನ್ನು ಹಿಂದಿನ ವರ್ಷಗಳಿಗಿಂತ ಎರಡು ಪಟ್ಟು ಹೆಚ್ಚಿಸಲಾಗಿದೆ.

ಅಧಿಕಾರಶಾಹಿಯ ಇನ್ನೊಂದು ತಂತ್ರವೂ ಕೆಲಸ ಮಾಡಿದೆ. ಕೆಲವು ಕಡೆ ಹೆಣ್ಣು ಮಕ್ಕಳಿಗೆ ಶುಲ್ಕ ಸಂಗ್ರಹಿಸಿಲ್ಲ; ಕೆಲವು ಕಡೆ ಮಾಡಿದ್ದಾರೆ. ಈ ಆದೇಶವನ್ನು ಕೆಲವು ಕಾಲೇಜುಗಳಿಗೆ ಜಾರಿ ಮಾಡಲಾಗಿದೆ, ಕೆಲವು ಕಾಲೇಜುಗಳಿಗೆ ಮಾಡಿಲ್ಲ, ಕೆಲವು ಕೋರ್ಸ್‌ಗಳಿಗೆ 3 ಪಟ್ಟು ಹೆಚ್ಚಿಸಲಾಗಿದೆ; ಕೆಲವು ಕೋರ್ಸ್‌ಗಳಿಗೆ ಸ್ವಲ್ಪವೇ ಪ್ರಮಾಣದ ಹೆಚ್ಚಳ ಮಾಡಲಾಗಿದೆ. ಇದು ಮೇಲ್ನೋಟಕ್ಕೆ ಅರಾಜಕ ಮತ್ತು ಅವ್ಯವಸ್ಥಿತ ಕ್ರಮವೆಂದು ಕಂಡುಬರುತ್ತದೆ. ಆದರೆ ಒಳ ಹುನ್ನಾರವೇನೆಂದರೆ, ಒಂದೇ ಸಾರಿ ಎಲ್ಲಾ ವಿದ್ಯಾರ್ಥಿಗಳು ಬೀದಿಗಿಳಿಯುವುದನ್ನು ತಪ್ಪಿಸುವ ಕುತಂತ್ರವಾಗಿದೆ. ಏಕೆಂದರೆ, ಹಲವು ದಶಕಗಳಿಂದ ದಮನಿತ ಸಮುದಾಯಗಳು ವಿದ್ಯಾಭ್ಯಾಸವನ್ನು ನಡೆಸಲು ಆಸರೆಯಾಗಿದ್ದ ಈ ಶುಲ್ಕ ವಿನಾಯಿತಿಯನ್ನು ಒಂದೇ ಏಟಿಗೆ ಕಿತ್ತುಕೊಳ್ಳುವ

ಸಮಾನ ಶಿಕ್ಷಣ ಮಾಲಿಕೆ -

ಆದೇಶವನ್ನು ವಿರೋಧವಿಲ್ಲದೇ ಜಾರಿ ಮಾ... ಉಪಾಯವನ್ನು ಹೆಣೆಯಲಾಗಿದೆ.

ಕರ್ನಾಟಕದ ಶಿಕ್ಷಣ ನೀತಿಯ ಮಟ್ಟಿಗೆ ಇನ್ನೊ... ದೊಡ್ಡ ಬದಲಾವಣೆ ಪ್ರಾಥಮಿಕ ಶಿಕ್ಷಣ ಇಲಾ... ವತಿಯಿಂದ ನಡೆಯುತ್ತಿದೆ. ಅದು ಖಾಸಗಿ ಶಿಕ್ಷಣ ಸಂ... ಶುಲ್ಕ ನೀತಿಯ ಕುರಿತಾದ್ದು. 1983ರ ಕರ್ನಾಟಕ ... ಕಾಯ್ದೆಯ ಪ್ರಕಾರ ಅವರು ಹೇಗೆಂದರೆ ಹಾಗೆ ಶುಲ... ಕಟ್ಟಿಸಿಕೊಳ್ಳುವಂತಿಲ್ಲ. ನಿರ್ದಿಷ್ಟ ಸೂತ್ರದನ್ವಯ ... ನಡೆಸಲು (ಗಮನಿಸಿ: ಶಾಲೆಯ ಮೂಲ ಸೌಕರ್ಯ... ನಿರ್ಮಾಣಕ್ಕಲ್ಲ, ಕಟ್ಟಡ ನಿರ್ಮಾಣಕ್ಕಲ್ಲ, ಯಾವುದೇ ನಿ... ಹೆಚ್ಚುವರಿ ಸೌಲಭ್ಯವನ್ನು ನೀಡಲೂ ಅಲ್ಲ) ಬೇಕಾಗು... ಶುಲ್ಕವನ್ನು ಮಾತ್ರ ಕಟ್ಟಿಸಿಕೊಳ್ಳುವಂತೆ ಆದೇಶವಿ... ಸೂತ್ರವನ್ನು ಅನ್ವಯಿಸುವುದೂ ಖಾಸಗಿ ಸಂಸ್ಥೆ... ಬದಲಿಗೆ, ಸರ್ಕಾರದ ಒಂದು ಸಮಿತಿ. ಆದರೆ ... ದಾಟಿಯೂ ಹಲವು ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿ ... ಹೆಸರಿನಲ್ಲಿ 'ಸ್ವಯಂಪ್ರೇರಣೆ'ಯಿಂದ ಪೋ... ಕಟ್ಟುತ್ತಿದ್ದಾರೆಂದು ಬಿಂಬಿಸಿ ವಸೂಲಿ ಮಾಡುತ್ತಿದ್ದ...

ಈಗ ಈ ಅಭಿವೃದ್ಧಿ ಶುಲ್ಕಕ್ಕೆ ಸರ್ಕಾರವೇ ... ಮಾನ್ಯತೆ ಕೊಡಲು ಹೊರಟಿದೆ ಮತ್ತು ಹೆ... ಸೌಲಭ್ಯಗಳನ್ನು ಕೊಟ್ಟಲ್ಲಿ, ಪೋಷಕರ ಒಪ್ಪಿಗೆಯ ... ಎಷ್ಟು ಬೇಕಾದರೂ ಹಣವನ್ನು ಖಾಸಗಿ ಸಂ... ಅಧಿಕೃತವಾಗಿಯೇ ಕಟ್ಟಿಸಿಕೊಳ್ಳಬಹುದು. ಇಂತಹದ... ಪ್ರಸ್ತಾಪವನ್ನು ಸರ್ಕಾರ ಸಿದ್ಧ ಮಾಡಿಟ್ಟದೆ. ... ಸಾರ್ವಜನಿಕರ ಒಪ್ಪಿಗೆ ಪಡೆಯಲು ಜನರ ಮುಂದಿಡ... ಅದನ್ನು ಕೇವಲ ತನ್ನ ವೆಬ್‌ಸೈಟ್ (www.sch... ducation.kar.nic.in)ನಲ್ಲಿ ಮಾತ್ರ ಹಾಕಿ ಯ... ತಿಳಿಯದಂತೆ ಜಾರಿ ಮಾಡಲು ಹೊರಟಿದೆ. ಇಲ... ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿಂದಿನ ... ಉಮಾಶಂಕರ್ ಮತ್ತು ಇತರ ಅಧಿಕಾರಿಗಳ ಕೈವಾ...

ಇವೆರಡೂ ಆದೇಶಗಳು ಕರ್ನಾಟಕದ ಶಿಕ್ಷಣ ... ವ್ಯಾಪಾರೀಕರಣವನ್ನು ಗಮನಾರ್ಹವಾಗಿ ಸಾ... ಶಕ್ತವಾಗುತ್ತವೆ. ಆದರೆ ಶಿಕ್ಷಣ ಸಚಿವ ಕಿಮ್ಮನೆ ರ... ಅವರು ನಾವು ಸಮಾನ ಶಿಕ್ಷಣ ನೀತಿಯನ್ನು ... ತರಲು ಸಮಿತಿಯೊಂದನ್ನು ರಚಿಸುತ್ತೇವೆಂದು ... ಕೊಟ್ಟಿದ್ದಾರೆ. ಸಮಾನ ಶಿಕ್ಷಣ ನೀತಿಯಿಂದ ಗಾವುದ... ಸಾಗಲು ಕರ್ನಾಟಕ ಸರ್ಕಾರವು ಆದೇಶದ ... ಆದೇಶವನ್ನು ಹೊರಡಿಸುತ್ತಿದೆ. 1986ರ ಹೊಸ... ನೀತಿಯ ಪರಿಣಾಮವಾಗಿ ದೇಶದ ಹಲವೆಡೆ ಪ್ರಾ... ಶಿಕ್ಷಣದಲ್ಲಿ ಅತಿಥಿ ಶಿಕ್ಷಕರು, ಸಮಾಂತರ ಶಿಕ್ಷಕರು ... teachers) ಇತ್ಯಾದಿ ಜಾರಿಗೆ ಬಂದಿದ್ದರೂ, ಕ... ಸರ್ಕಾರವು ಮಾತ್ರ ಅವನ್ನು ಜಾರಿ ಮಾಡಿರಲಿಲ್ಲ... ಅವೆಲ್ಲವನ್ನೂ ಹಾಳುಗೆಡವಿದ ಅಪಖ್ಯಾತಿಯನ್ನು ... ಕೊಳ್ಳುವ ಅವಕಾಶ ಈ ಸರ್ಕಾರ ಪಡೆದುಕೊ... ತಪ್ಪುಗಳನ್ನು ಶಿವಶೈಲಂ ಮತ್ತು ಉಮಾಶಂಕರ್ ... ಅಧಿಕಾರಿಗಳ ತಲೆ ಮೇಲೆ ಹಾಕಿ ಸರ್ಕಾರ... ತೊಳೆದುಕೊಳ್ಳಲಾಗದು.

ಕರ್ನಾಟಕದ ಶಿಕ್ಷಣ ಕ್ಷೇತ್ರದ ಇತಿಹಾಸದಲ್ಲಿ ... ಅಪಾಯಕಾರಿ ಬೆಳವಣಿಗೆಗಳು ನಡೆಯುತ್ತಿದ್ದಾಗ, ... ಪ್ರಜ್ಞಾವಂತರೂ ಸುಮ್ಮನೆ ಕೂತಿದ್ದರು ಎಂಬ ... ಯನ್ನು ನಾವಂತೂ ಹೊತ್ತುಕೊಳ್ಳುವುದು ಬೇಡ ...

ಲ್ಲಿನ ಮುಂದೆಯೂ ಕಾಳಜಿ ತೋರಿದ ತರುಣಿ



• ಗೌರಿ ಲಂಕೇಶ್
editorlankesh@gmail.com

ವೇಳೆಗೆ ಆಗಿನ್ನೂ ವಯಸ್ಸು 19. ಆಗತಾನೇ ಯರ್ ಡೆಕೋರೇಷನ್ ಕೆಲಸವನ್ನು ಪ್ರಾರಂಭಿಸಿದ್ದ ನ್ನು ಸಂಪರ್ಕಿಸಿದವನು 47 ವರ್ಷ ವಯಸ್ಸಿನ ಜಾ ಸರ್ಬಂದಿ. ಮಾಜಿ ಗುಪ್ತದಳದ ಯಾಗಿದ್ದ ಸರ್ಬಂದಿ ಆಕೆಯನ್ನು ಹಲವು ಬಾರಿ ಗೆ ಕರೆಸಿಕೊಂಡು ತನ್ನ ಕಚೇರಿಯನ್ನು ನವೀಕರಿಸುವ ನ್ನು ಆಕೆಗೆ ವಹಿಸಿದ್ದ. ಕೆಲಸದ ಮೇಲೆ ಆಕೆ ಆವನ ಗೆ ಒಮ್ಮೆ ಹೋದಾಗ ಅವಘಡವೊಂದು ಸಿತು. ಆ ಯುವತಿ ಸರ್ಬಂದಿಯ ಕಚೇರಿಯಿಂದ ಹೋದಳು. ಒಳಗೆ ಆತನ ಶವ ಬಿದ್ದಿತ್ತು.

ಾಲೆ ಆರೋಪದ ಮೇಲೆ ಪೊಲೀಸರು ಆ ತಿಯನ್ನು ಬಂಧಿಸಿದರು. ವಿಚಾರಣೆಯ ವೇಳೆ ದಿ ತನ್ನ ಮೇಲೆ ಅತ್ಯಾಚಾರ ಎಸಗಲು ಯತ್ನಿಸಿದ್ದರಿಂದ ಕ್ಷಣೆಗೆ ಅವನನ್ನು ಕೊಲೆ ಮಾಡಿದೆ ಎಂದು ಯುವತಿ ಳು. ಆದರೆ ನ್ಯಾಯಾಲಯ ಆಕೆಯನ್ನು ನಂಬಲಿಲ್ಲ. ಗಲ್ಲು ಶಿಕ್ಷೆಯನ್ನು ವಿಧಿಸಿತು. ಕಳೆದ ಭಾನುವಾರ ನ್ನು ಗಲ್ಲಿಗೇರಿಸಲಾಯಿತು.

ಯುವತಿಯ ಹೆಸರು ರೆಹಾನೆ ಜಬ್ಬಾರಿ.

ಕೆ ಇರಾನ್ ದೇಶದವಳು. ಆಕೆಯನ್ನು ಗಲ್ಲಿಗೇರಿಸಿದ ಆಕೆ ಬರೆದಿದ್ದ ಪತ್ರವನ್ನು ಜೈಲ್ ಅಧಿಕಾರಿಗಳು ತಾಯಿಗೆ ಹಸ್ತಾಂತರಿಸಿದರು. ಆಕೆಯ ಬದುಕು ಯವಾಗಿದ್ದರೂ, ತನಗೆ ಅನ್ಯಾಯವಾಗಿದೆ ಎಂಬ ಕಾಡುತ್ತಿದ್ದರೂ, ಕೊನೆಯ ಕ್ಷಣದ ತನಕ ಇತರರಿಗೆ ಗುವ ಆಶಯವನ್ನು ಹೊಂದಿದ್ದ ಆಕೆಯ ಪತ್ರ ಟ್ಟುವಂತಿದೆ. ರೆಹಾನೆ ಬರೆದ ಅಂತಿಮ ಪತ್ರ :

ಪ್ರೀತಿಯ ಶೆಲ್ಲೆ

ವತ್ತು ನನಗೆ ಶಿಕ್ಷೆ ವಿಧಿಸುವ ದಿನ ಎಂದು ಯಿತು. ನಾನು ನನ್ನ ಬದುಕಿನ ಕೊನೆಯ ಪುಟವನ್ನು ದ್ದೇನೆ ಎಂದು ನೀನೇ ನನಗೆ ಯಾಕೆ ಹೇಳಲಿಲ್ಲ ನೋವು ನನಗಿದೆ. ನನಗೆ ಹೇಳಬೇಕೆಂದು ನಿನಗೆ ಲ್ಲವೇ? ಕೊನೆಯ ಬಾರಿಗೆ ನಿನ್ನ ಮತ್ತು ಅಪ್ಪನ ಮುತ್ತಿಡುವ ಅವಕಾಶದಿಂದ ನಾನೀಗ ವಂಚಿತಳಾ .

ತಂತ್ರವಾಗಿ ಬದುಕಲು ಜಗತ್ತು ನನಗೆ ಹತ್ತೊಂಬತ್ತು ಳನ್ನು ಕೊಟ್ಟಿತು. ಆ ಅನಿಷ್ಟ ರಾತ್ರಿಯೇ ನನ್ನ ಮಾಗಬೇಕಿತ್ತು, ನನ್ನ ಶವವನ್ನು ನಗರದ ಯಾವುದೋ ಲ್ಲಿ ಬಿಸಾಡಿರುತ್ತಿದ್ದರು. ಕೆಲವು ದಿನಗಳ ನಂತರ ಸರು ಬಂದು ನಿನ್ನನ್ನು ಕರೆದುಕೊಂಡು ಹೋಗಿ ಯಾರದ್ದು ಎಂದು ದೃಢಪಡಿಸಿಕೊಳ್ಳುತ್ತಿದ್ದರು. ಆಗ ಮೇಲೆ ಅತ್ಯಾಚಾರವೂ ನಡೆದಿತ್ತು ಎಂಬುದು ನಿನಗೆ ಗುತ್ತಿತ್ತು. ನಮ್ಮ ಬಳಿ ಕೊಲೆಗಡುಕನಷ್ಟು ಆಸ್ತಿಯಾಗಲಿ, ವವಾಗಲಿ ಇಲ್ಲದಿರುವುದರಿಂದ ನನ್ನನ್ನು ಕೊಲೆ ದ್ದು ಯಾರು ಎಂಬುದು ಬಹಿರಂಗವಾಗುತ್ತಲೇ ಲ್ಲ. ನೀನು ದುಃಖದಲ್ಲಿ ಮತ್ತು ಅವಮಾನದಲ್ಲಿ ವರ್ಷಗಳ ಕಾಲ ನರಳುತ್ತಿದ್ದೆ. ಆದರೆ ಹಲವು ಗಳ ನಂತರ ನೀನೂ ಸಾವನ್ನಪ್ಪುತ್ತಿದ್ದೆ. ಅಲ್ಲಿಗೆ ಎಲ್ಲವೂ ಗೊಳ್ಳುತ್ತಿತ್ತು.

ದರೆ ಆ ಒಂದು ಹೊಡೆತದಿಂದ ಇಡೀ ಕತೆಯೇ ಬದಲಾಯಿತು. ಪರಿಣಾಮವಾಗಿ ನನ್ನ ದೇಹವನ್ನು ಅದೆಲ್ಲೋ ಬಿಸಾಡಲಾಗಲಿಲ್ಲ, ಬದಲಾಗಿ ಜೈಲೆಂಬ ಸಮಾಧಿಗೆ ದೂಡಲಾಯಿತು. ಆದರೂ ಸಾವು ಬದುಕಿನ ಅಂತ್ಯವಲ್ಲ ಎಂದು ನಿನಗೆ ಚೆನ್ನಾಗಿ ಗೊತ್ತು.

ನಾವು ಈ ಜಗತ್ತಿಗೆ ಬರುವುದೇ ಅನುಭವವನ್ನು ಪಡೆಯಲು ಮತ್ತು ಪಾಠವನ್ನು ಕಲಿಯಲು ಎಂದು ನೀನು ನನಗೆ ಹೇಳಿದ್ದೆ. ಜೊತೆಗೆ ನ್ಯಾಯಕ್ಕಾಗಿ ನಾವು ಈ ಜಗತ್ತಿನಲ್ಲಿ ಹೋರಾಡಬೇಕು ಎಂಬುದನ್ನೂ ನಾನು ಅರ್ಥಮಾಡಿಕೊಂಡಿದ್ದೆ. ಅವತ್ತು ನನ್ನನ್ನು ಚಾಟಿಯಿಂದ ಬಾರಿಸುತ್ತಿದ್ದದ್ದನ್ನು ಒಬ್ಬ ವಾಹನ ಚಾಲಕ ಪ್ರತಿಭಟಿಸಿದನೆಂದೂ, ಆಗ ಆ



ಚಾಲಕನ ಮೇಲೆಯೇ ಚಾಟಿಯನ್ನು ಬೀಸಿದ್ದರಿಂದ ಅತನ ಬುರುಡೆ ಒಡೆದು ಅವನು ಸತ್ತೇಹೋದನೆಂದೂ ನೀನು ನನಗೆ ಹೇಳಿದೆ. ಅದರಿಂದ ನಾನು ಕಲಿತದ್ದೇನೆಂದರೆ ನಾವು ಪ್ರಾಣ ಕಳೆದುಕೊಂಡರೂ ಪರವಾಗಿಲ್ಲ ನಾನು ನಂಬಿರುವ ಮೌಲ್ಯಗಳನ್ನು ಮಾತ್ರ ಕಳೆದುಕೊಳ್ಳಕೂಡದೆಂದು.

ನಾನು ಶಾಲೆಗೆ ಹೋಗುತ್ತಿದ್ದಾಗ ಎಂತಹ ಸಮಸ್ಯೆ ಎದುರಾದರೂ ನಾನು ಧೃತಿಗೆಡಬಾರದೆಂದು ನೀನು ಹೇಳುತ್ತಿದ್ದೆ. ಆದರೆ ನನ್ನ ಮೇಲೆ ಆತ ದಾಳಿ ಮಾಡಿದಾಗ ನಿನ್ನ ನೀತಿಪಾಠ ನನ್ನ ನೆರವಿಗೆ ಬರಲಿಲ್ಲ. ನ್ಯಾಯಾಲಯದಲ್ಲೂ ನನ್ನನ್ನು ಓರ್ವ ನಿರ್ದಯಿ ಕೊಲೆಗಡುಕಿ ಎಂದೂ, ಕ್ರೂರ ಮಹಿಳೆ ಎಂದೂ ಚಿತ್ರಿಸಲಾಯಿತು. ಆದರೆ ನಾನು ಕಣ್ಣೀರಿಡಲಿಲ್ಲ, ಯಾರನ್ನೂ ಬೇಡಲಿಲ್ಲ. ಯಾಕೆಂದರೆ ನನಗೆ ನ್ಯಾಯ ವ್ಯವಸ್ಥೆಯಲ್ಲಿ ನಂಬಿಕೆ ಇತ್ತು.

ಜಿರಳೆಗಳನ್ನು ಕೊಲ್ಲುವ ಬದಲಾಗಿ ಅವುಗಳ ಮೀಸೆ ಹಿಡಿದು ಹೊರ ಬಿಸಾಕುತ್ತಿದ್ದ ನನ್ನ ಮೇಲೆ ಪೂರ್ವಾಲೋಚಿತ ಕೊಲೆಗಡುಕಿ ಎಂಬ ಆರೋಪ ಹೊರಿಸಿದರು. ಜಿರಳೆಗಳ ಬಗೆಗಿನ ನನ್ನ ವರ್ತನೆಯನ್ನು ಹುಡುಗ ಬುದ್ಧಿ ಎಂದು ತೀರ್ಮಾನಿಸಿದ ನ್ಯಾಯಾಧೀಶರಿಗೆ ಆ ಕೊಲೆ ನಡೆದ ದಿನ ನಾನು ನನ್ನ ಉಗುರುಗಳಿಗೆ ನೈಲ್ ಪಾಲಿಷ್ ಹಾಕಿಕೊಂಡಿದ್ದ ಯುವತಿ ಎಂಬುದು ಕಾಣಿಸಲೇ ಇಲ್ಲ.

ಈ ಪುರುಷಪ್ರಧಾನ ವ್ಯವಸ್ಥೆಯಲ್ಲಿ ನನಗೆ ನ್ಯಾಯ ಸಿಗುತ್ತದೆ ಎಂದು ನಂಬಿದ್ದೇ ಹುಚ್ಚುತನ. ಈ ದೇಶವನ್ನು ಪ್ರೀತಿಸುವುದು ನೀನು ನನಗೆ ಕಲಿಸಿದೆ. ಆದರೆ ಈ ದೇಶಕ್ಕೆ ನಾನು ಬೇಕಿಲ್ಲ. ನನ್ನ ಮೇಲೆ ನ್ಯಾಯಾಲಯದಲ್ಲಿ ದಾಳಿ ನಡೆಯುತ್ತಿದ್ದಾಗ, ನನ್ನನ್ನು ಅಸಹ್ಯವಾಗಿ ಚಿತ್ರಿಸುತ್ತಿದ್ದಾಗ, ನನ್ನ ಬಗ್ಗೆ ಅಶ್ಲೀಲ ಪದಗಳನ್ನು ಬಳಸುತ್ತಿದ್ದಾಗ, ನಾನು ದುಃಖದಿಂದ ರೋದಿಸುತ್ತಿದ್ದಾಗ ಈ ದೇಶದ ಯಾರೊಬ್ಬರೂ ನನ್ನ ಪರ ನಿಲ್ಲಲಿಲ್ಲ. ನಾನು ಎಲ್ಲ ಸೌಂದರ್ಯವನ್ನು ಕಳೆದುಕೊಳ್ಳಬೇಕೆಂದು ನಿರ್ಧರಿಸಿ ತನ್ನ ತಲೆಯನ್ನು ಬೋಳಿಸಿಕೊಂಡಾಗ ನನಗೆ ಸಿಕ್ಕ ಪ್ರತಿಫಲ: 11 ದಿನಗಳ ಒಂಟಿ ಸೆರೆವಾಸ.

ಪ್ರೀತಿಯ ಶೆಲ್ಲೆ ಇದನ್ನು ಕೇಳಿ ಅಳಬೇಡ. ನನ್ನನ್ನು ಪೊಲೀಸರು ಬಂಧಿಸಿದ ದಿನ ಓರ್ವ ಅವಿವಾಹಿತ ಪೊಲೀಸ್ ಅಧಿಕಾರಿ ನನ್ನ ಉದ್ದನೆಯ ಉಗುರುಗಳನ್ನು ಲೇವಡಿ ಮಾಡಿದ. ಆಗ ನನಗೆ ಸೌಂದರ್ಯದ ನಿಜ ಅರ್ಥ ಗೊತ್ತಾಯಿತು. ಸೌಂದರ್ಯ ಇರುವುದು ನಮ್ಮ ರೂಪದಲ್ಲಿ ಅಲ್ಲ, ಬದಲಾಗಿ ನಮ್ಮ ಚಿಂತನೆಯಲ್ಲಿ, ಆಶಯಗಳಲ್ಲಿ, ಕೈಬರಹದಲ್ಲಿ, ಕಣ್ಣಲ್ಲಿ, ದನಿಯಲ್ಲಿ.

ಪ್ರೀತಿಯ ಅಮ್ಮ, ನನ್ನ ಸಿದ್ಧಾಂತ ಈಗ ಬದಲಾಗಿದೆ ಆದರೆ ಅದಕ್ಕೆ ಕಾರಣ ನೀನಲ್ಲ. ನನ್ನ ಈ ಪದಗಳು ನಿರಂತರ. ಆದ್ದರಿಂದ ನಿನಗೆ ಅರಿವಿಲ್ಲದೆ, ನಿನ್ನ ಅನುಪಸ್ಥಿತಿಯಲ್ಲಿ ನನ್ನನ್ನು ಗಲ್ಲಿಗೇರಿಸಿದ ನಂತರ ನನ್ನ ಈ ಬರಹಗಳನ್ನೆಲ್ಲ ನಿನಗೆ ಕೊಡಲು ಒಬ್ಬರಿಗೆ ಹಸ್ತಾಂತರಿಸಿದ್ದೇನೆ. ನನ್ನ ಈ ಕೈಬರಹಗಳನ್ನು ನಾನು ನನ್ನ ಕಡೆಯ ಆಸ್ತಿಯಾಗಿ ನಿನಗೆ ಬಿಟ್ಟುಹೋಗುತ್ತಿದ್ದೇನೆ.

ಆದರೆ ನಾನು ಸಾಯುವ ಮುನ್ನ ನಿನ್ನಿಂದ ನನಗೆ ಒಂದು ನೆರವು ಬೇಕಾಗಿದೆ. ಇದನ್ನು ನೀನು ನಿನ್ನ ಕೈಲಾಗಿದ್ದನ್ನೆಲ್ಲ ಮಾಡಿ ಸಾಧಿಸಬೇಕಿದೆ. ಈ ದೇಶದಿಂದ, ಈ ಜಗತ್ತಿನಿಂದ ನನಗೆ ಬೇಕಿರುವುದು ಇದೊಂದೆ. ನನಗೋಸ್ಕರ ನೀನು ಇದನ್ನು ಮಾಡಲೇಬೇಕಿದೆ.

ಇದು ನನ್ನ ಕೊನೆಯ ಇಚ್ಛೆ. ನನ್ನ ಈ ಇಚ್ಛೆಯನ್ನು ಕೇಳಿ ನೀನು ದಯವಿಟ್ಟು ಅಳಬೇಡ. ನೀನು ನ್ಯಾಯಾಲಯಕ್ಕೆ ಹೋಗಿ ನನ್ನ ಈ ಇಚ್ಛೆಯನ್ನು ವಿವರಿಸಬೇಕು. ಇದರಿಂದ ನಿನಗೆ ನೋವಾಗುತ್ತದೆ ಎಂದು ನನಗೆ ಗೊತ್ತು. ಈ ಹಿಂದೆ ನನ್ನನ್ನು ಉಳಿಸಬೇಕೆಂದು ನೀನು ಬೇಡಿದಾಗ ನಾನು ಅದನ್ನು ವಿರೋಧಿಸಿದ್ದೆ. ಯಾವುದೇ ಕಾರಣಕ್ಕೂ ನೀನು ನನ್ನ ಪರವಾಗಿ ಯಾರ ಮುಂದೆಯೂ ಬೇಡಕೂಡದು ಎಂದು ನಾನು ಹೇಳಿದ್ದೆ. ಆದರೆ ನನ್ನ ಈ ಕೊನೆಯ ಇಚ್ಛೆಯನ್ನು ಪೂರೈಸಲು ನೀನು ಯಾರ ಮುಂದೆ ಬೇಡಿದರೂ ನನ್ನ ಅಭ್ಯಂತರವಿಲ್ಲ.

ನನ್ನ ಪ್ರೀತಿಯ ಅಮ್ಮ ಶೆಲ್ಲೆ ನನ್ನ ಜೀವನದಲ್ಲಿ ಎಲ್ಲಕ್ಕಿಂತ ಮುಖ್ಯವಾಗಿದ್ದ ಶೆಲ್ಲೋ, ಮಣ್ಣಿನಡಿ ಕೊಳೆಯಲು ನಾನು ಬಯಸುವುದಿಲ್ಲ. ನನ್ನ ಕಣ್ಣುಗಳು ಮತ್ತು ಈ ನನ್ನ ಹೃದಯ ಧೂಳಾಗುವುದು ನನಗೆ ಬೇಡ. ಆದ್ದರಿಂದ ನನ್ನನ್ನು ಗಲ್ಲಿಗೇರಿಸಿದ ಮರುಕ್ಷಣವೇ ನನ್ನ ಹೃದಯ, ಮೂತ್ರಪಿಂಡ, ಕಣ್ಣು, ಮೂಳೆ, ಇತ್ಯಾದಿ ಭಾಗಗಳನ್ನು ತೆಗೆದು ಅವುಗಳ ಅವಶ್ಯಕತೆ ಇರುವ ಜನರಿಗೆ ಉಡುಗೊರೆಯಾಗಿ ಕೊಡಬೇಕೆಂದು ಬೇಡಿಕೊ. ನನ್ನ ದೇಹದ ಭಾಗಗಳನ್ನು ಸ್ವೀಕರಿಸುವವರಿಗೆ ನನ್ನ ಹೆಸರೂ ಗೊತ್ತಾಗುವುದು ಬೇಡ. ಅವರಿಂದ ನಾನು ಏನನ್ನೂ ನಿರೀಕ್ಷಿಸುವುದಿಲ್ಲ, ಪ್ರಾರ್ಥನೆಗಳನ್ನು ಕೂಡ.

ನನ್ನ ಹೃದಯದ ಆಳದಿಂದ ಹೇಳುತ್ತಿದ್ದೇನೆ ಅಮ್ಮ, ನನಗೆ ಸಮಾಧಿಯೂ ಬೇಡ, ನೀನು ಅದರ ಮುಂದು ಕೂತು ದುಃಖಿಸುವುದೂ ಬೇಡ. ನನಗಾಗಿ ನೀನು ಕಪ್ಪು ಉಡುಪನ್ನು ಧರಿಸುವುದೇ ಬೇಡ. ನನ್ನ ಕಷ್ಟದ ದಿನಗಳನ್ನು ಮರೆಯಲು ನೀನು ನಿನ್ನ ಕೈಲಾದಷ್ಟು ಪ್ರಯತ್ನಿಸು. ಗಾಳಿಯಲ್ಲಿ ತೇಲಿ ಹೋಗಲು ನನ್ನನ್ನು ಬಿಟ್ಟುಬಿಡು.

ಈ ಜಗತ್ತು ನಮ್ಮನ್ನು ಪ್ರೀತಿಸಲಿಲ್ಲ, ನನಗಾದದ್ದು ಈ ಜಗತ್ತಿಗೆ ಬೇಕಿರಲಿಲ್ಲ. ನಾನೀಗ ವಿಧಿಗೆ ಶರಣಾಗಿ ಸಾವನ್ನು ಅಪ್ಪುತ್ತೇನೆ. ಯಾಕೆಂದರೆ ದೇವರ ನ್ಯಾಯಾಲಯದಲ್ಲಿ ನನಗೆ ಅನ್ಯಾಯ ಮಾಡಿದ ಪೊಲೀಸರ ವಿರುದ್ಧ ನ್ಯಾಯಾಧೀಶರ ವಿರುದ್ಧ ದೂರು ಸಲ್ಲಿಸುತ್ತೇನೆ. ನಾನು ಬದುಕಿದ್ದಾಗ ನನ್ನ ಮೇಲೆ ದಾಳಿ ಮಾಡಿದ ಸುಪ್ರೀಂಕೋರ್ಟಿನ ನ್ಯಾಯಮೂರ್ತಿಗಳನ್ನೂ ದೇವರ ಮುಂದೆಯೇ ವಿಚಾರಣೆಗೆ ಒಳಪಡಿಸುತ್ತೇನೆ.

ಅಜ್ಞಾನದಿಂದಲೋ, ಸುಳ್ಳುಗಳಿಂದಲೋ ನನ್ನ ಹಕ್ಕುಗಳನ್ನು ದಮನ ಮಾಡಿದ ಎಲ್ಲರನ್ನೂ, ಕೆಲವೊಮ್ಮೆ ಮೇಲೆ ಕಾಣಿಸುತ್ತಿರುವುದೇ ಸತ್ಯವಲ್ಲ ಎಂದು ಅರ್ಥಮಾಡಿಕೊಳ್ಳದಿದ್ದವರನ್ನೂ ನಾನು ಸೃಷ್ಟಿಕರ್ತನ ಆಸ್ಥಾನದಲ್ಲೇ ಎದುರಿಸುತ್ತೇನೆ.

ಮೆದುಹೃದಯದ ಶೆಲ್ಲೆ ಇನ್ನೊಂದು. ಲೋಕದಲ್ಲಿ ನಾನು ಮತ್ತು ನೀನು ಫಿರ್ಯಾದಿದಾರರಾಗಿರುತ್ತೇವೆ ಮತ್ತು ಯಾರು ಈ ಜಗತ್ತಿನಲ್ಲಿ ನನ್ನ ವಿರುದ್ಧ ಆರೋಪಿಸಿದ್ದರೋ ಅವರೇ ಆರೋಪಿ ಸ್ಥಾನದಲ್ಲಿ ನಿಂತಿರುತ್ತಾರೆ. ದೇವರು ಏನು ಬಯಸುತ್ತಾನೆ ಎಂಬುದನ್ನು ನೋಡೋಣ. ಸಾಯುವ ಕೊನೆಯ ಕ್ಷಣದವರೆಗೂ ನಿನ್ನನ್ನು ಅಪ್ಪಿಕೊಂಡಿರಲು ಆಶಿಸುತ್ತೇನೆ. ಐ ಲವ್ ಯು."


ಗಲ್ಲಿಗೇರಿದಾಗ ರೆಹಾನೆ ಜಬ್ಬಾರಿಯ ವಯಸ್ಸು ಕೇವಲ 26. ■

ೋದಿಯ ಮೂರ್ಖ ಭಾಷಣ

ಇತ್ತೀಚೆಗೆ ಮುಂಬೈಯಲ್ಲಿ ರಿಲಯನ್ಸ್ ಮಾಲೀಕತ್ವದ ಆಸ್ಪತ್ರೆಯೊಂದನ್ನು ಟಿಸುತ್ತಾ ಮೋದಿ ಮಹಾಶಯರು ಪ್ರಾಚೀನ ಹಿಂದೂಗಳಿಗೆ - ಭಾರತದ ಸಮಯದಲ್ಲಿ ಮಾತ್ರವಲ್ಲ ಅದಕ್ಕಿಂತಲೂ ಹಿಂದಿನ ಕಾಲದಲ್ಲಿ ಸ ಆಧುನಿಕ ವಿಜ್ಞಾನಗಳಾದ 'ಅನುವಂಶಿಕ ವಿಜ್ಞಾನ' ಮತ್ತು 'ಪ್ಲಾಸ್ಟಿಕ್ ' ಗೊತ್ತಿತ್ತು ಎಂದು ಘೋಷಿಸಿದ್ದಾರೆ.

ಒಂದಾನೊಂದು ಕಾಲದಲ್ಲೇ ನಮ್ಮ ದೇಶ ವಿಜ್ಞಾನದಲ್ಲಿ ತುಂಬಾ ಮುಂದುವರಿದಿತ್ತು ಎಂಬುದರ ಬಗ್ಗೆ ನಮಗೆ ಹೆಮ್ಮೆ ಇರಬೇಕು. ನಾವೆಲ್ಲರೂ ಭಾರತದ ಕರ್ಣನ ಬಗ್ಗೆ ಓದಿರುತ್ತೇವೆ. ಕರ್ಣ ತನ್ನ ತಾಯಿಯ ಗರ್ಭದಿಂದ ಲ್ಲ ಎಂದು ಮಹಾಭಾರತ ಹೇಳುತ್ತದೆ. ಅದರ ಬಗ್ಗೆ ಸ್ವಲ್ಪ ಯೋಚಿಸಿದರೆ ಕಾಲದಲ್ಲೇ ಅನುವಂಶಿಕ ವಿಜ್ಞಾನ ನಮ್ಮವರಿಗೆ ಗೊತ್ತಿದ್ದರಿಂದ ಆತ ಯಿಯ ಗರ್ಭದ ಆಚೆ ಜನಿಸಲು ಸಾಧ್ಯವಾಯಿತು ಎಂದು ನಮಗೆ ಗುತ್ತದೆ" ಎಂದಿದ್ದಾರೆ ಮೋದಿ.

ಷ್ಟೇ ಅಲ್ಲದೆ, "ನಾವು ಗಣೇಶನನ್ನು ಪೂಜಿಸುತ್ತೇವೆ. ಆ ಕಾಲದಲ್ಲೇ ಸರ್ಜನ್‌ಗಳಿದ್ದಿದ್ದರಿಂದ ಒಂದು ಆನೆಯ ತಲೆಯನ್ನು ಮಾನವನ ಜೋಡಿಸಲಾಗಿತ್ತು" ಎಂದೂ ಮೋದಿ ಹೇಳಿದ್ದಾರೆ. ಜೊತೆಗೆ "ಅಂತರಿಕ್ಷ ದಲ್ಲೂ ನಮ್ಮ ಪೂರ್ವಿಕರು ಅಮೋಘ ಸಾಧನೆಗಳನ್ನು ಮಾಡಿದ್ದರು. ರು ವರ್ಷಗಳ ಹಿಂದೆ ಆರ್ಯಭಟ್ಟ ತರಹದವರು ಹೇಳಿದ್ದು ಇವತ್ತು ಗುತ್ತಿದೆ" ಎಂದೂ ಪ್ರಾಷಣಾದಿದ್ದಾರೆ ಮೋದಿ ಸಾಹೇಬರು. ಮೋದಿಯ ಸ್'ದ ಬಗ್ಗೆ ಅವರ ತಂಡಕ್ಕೆ ಅದೆಷ್ಟು ಹೆಮ್ಮೆ ಎಂದರೆ ಅವರ ಈ ಷ್ಟ ಹೇಳಿಕೆಗಳನ್ನೂ ವೆಬ್‌ಸೈಟಿನಲ್ಲಿ ದಾಖಲಿಸಿದ್ದಾರೆ.





ಮೋದಿಯ ಈ ಹೇಳಿಕೆಗಳಿಗೂ, ದೀನಾ ನಾಥ್ ಬತ್ರಾ ಎಂಬ ಹಿಂದೂತ್ವವಾಗಿ ಬರೆದಿರುವ ಪುಸ್ತಕಗಳಿಗೂ ಸಾಮ್ಯತೆಗಳಿವೆ. ಮೋದಿ ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಇದೇ ಬತ್ರಾ ಬರೆದಿರುವ 'ತೇಜೋಮಯ ಭಾರತ' ಎಂಬ ಸರಣಿ ಪುಸ್ತಕಗಳನ್ನು ಶಾಲಾಬಾಲಕರಿಗೆ ಕಡ್ಡಾಯ ಮಾಡಿದ್ದ. ಅಂತಹ ಒಂದು ಪುಸ್ತಕದಲ್ಲಿ ಬತ್ರಾ ಹೀಗೆ ಬರೆದಿದ್ದಾನೆ: "ಇವತ್ತು ಅಮೆರಿಕ ಅನುವಂಶಿಕ ವಿಜ್ಞಾನದ ಕೀರ್ತಿ ತನ್ನದು ಎಂದು ಹೇಳುತ್ತಿದೆ. ಆದರೆ ವಾಸ್ತವವಾಗಿ ಡಾ. ಬಾಲಕೃಷ್ಣ ಗಣಪತ್ ಮತಾಪುರ್ಕರ್ ಎಂಬುವವರು ಅಮೆರಿಕ ಈ ವಿಜ್ಞಾನದ ಮೇಲೆ ಹಕ್ಕು ಸ್ಥಾಪಿಸುವ ಮುನ್ನವೇ ಮಾನವನ ದೇಹದ ಭಾಗಗಳನ್ನು ಸೃಷ್ಟಿಸುವ ಸ್ವಾಮ್ಯತೆಯನ್ನು ಪಡೆದಿದ್ದರು. ಈ ವಿಜ್ಞಾನ ಹೊಸದೇನಲ್ಲ ಎಂದರೆ ನಿಮಗೆ ಅಚ್ಚರಿಯಾಗಬಹುದು. ಮಾತ್ರವಲ್ಲ ಇದಕ್ಕೆ ಮತಾಪುರ್ಕರ್ ಅವರು ಸ್ಫೂರ್ತಿ ಪಡೆದದ್ದು ಮಹಾಭಾರತದಿಂದಲೇ. ಸೂರ್ಯನಷ್ಟೇ ಪ್ರಖರವಾಗಿದ್ದ ಮಗನನ್ನು ಕುಂತಿ ಪಡೆದಳು. ಎರಡು ವರ್ಷಗಳಿಂದ ಗರ್ಭ ಧರಿಸಲು ಯತ್ನಿಸುತ್ತಿದ್ದ ಗಾಂಧಾರಿಗೆ ಈ ಸುದ್ದಿ ಗೊತ್ತಾಗುತ್ತಿದ್ದಂತೆ ಗರ್ಭಪಾತವಾಯಿತು. ಆಕೆಯ ಗರ್ಭದಿಂದ ಮಾಂಸದ ಗಡ್ಡೆ ಹೊರಬಿದ್ದಿತು. ಆಗ ರಿಷಿ ದ್ವೈಪಯಾನ ವ್ಯಾಸನಿಗೆ ಬರಹೇಳಲಾಯಿತು. ಆತ ಮಾಂಸದ ಗಡ್ಡೆಯನ್ನು ಪರೀಕ್ಷಿಸಿ, ಅದನ್ನು ಹಲವು ಮೂಲಿಕೆಗಳೊಂದಿಗೆ ಒಂದು ಶೀತಲ ಹಂಡೆಯಲ್ಲಿಟ್ಟ. ಆಮೇಲೆ ಅದನ್ನು ನೂರು ಭಾಗಗಳಾಗಿ ವಿಂಗಡಿಸಿ, ತುಪ್ಪದಿಂದ ತುಂಬಿದ್ದ ಪ್ರತ್ಯೇಕ ಹಂಡೆಗಳಲ್ಲಿ ಇಟ್ಟ. ಎರಡು ವರ್ಷಗಳ ನಂತರ ಆ ಹಂಡೆಗಳಿಂದ ನೂರು ಕೌರವರು ಜನಿಸಿದರು. ಇದು ಮತಾಪುರ್ಕರ್ ಅವರಿಗೆ ಗೊತ್ತಾದಾಗ ಇದು ಹೊಸ ವಿಜ್ಞಾನವಲ್ಲ, ಬದಲಾಗಿ ಸಾವಿರಾರು ವರ್ಷಗಳ ಹಿಂದೆಯೇ ಇದನ್ನು ಭಾರತದಲ್ಲೇ ಸಂಶೋಧಿಸಲಾಗಿತ್ತು ಎಂದು ಅರ್ಥವಾಯಿತು."


ಅಂದಹಾಗೆ ಬತ್ರಾನ ಈ ಪುಸ್ತಕವನ್ನು ಪ್ರಶಂಸಿಸಿ ಸ್ವತಃ ಮೋದಿಯೇ ಮುನ್ನುಡಿ ಬರೆದಿದ್ದಾನೆ!!


ಮೋದಿ ಈ ಭಾಷಣವನ್ನು ಅಮೆರಿಕದ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ಮಾಡಲಿಲ್ಲ, ಬದಲಾಗಿ ಭಟ್ಟಂಗಿ ಮಾಧ್ಯಮದವರೇ ಇರುವ ಭಾರತದಲ್ಲಿ ಮಾಡಿದ್ದಾರೆ. ಹಾಗೊಮ್ಮೆ ಮೋದಿ ಇಂತಹ ಅವಿವೇಕಿ ಭಾಷಣವನ್ನು ವಿದೇಶದಲ್ಲಿ ಮಾಡಿದ್ದರೆ ಭಾರತವನ್ನು 'ಅಭಿವೃದ್ಧಿ ಹೊಂದುತ್ತಿರುವ ದೇಶ' ಎಂದು ಕರೆಯುವ ಬದಲು 'ಮೂರ್ಖ ನಾಯಕನನ್ನು ಹೊಂದಿರುವ ದೇಶ' ಎಂದು ಮೂದಲಿಸುತ್ತಿದ್ದರು.


ಹಿಂದೆಂದೋ ಭಾರತ ಮಾತೆ ಪುಣ್ಯ ಮಾಡಿದ್ದಿರಬೇಕು! ■


ವಿಜಯಕುಮಾರ್ ಶೆಟ್ಟಿ


ಶಾರದಾ ಶೆಟ್ಟಿ


ಗೋಪಾಲ್ ಪೂಜಾರಿ


ಜೆ.ಡಿ.ನಾಯ್ಕ


ಗೋಪಾಲ್ ಭಂಡಾರಿ


ಭೀಮಣ್ಣ ಟಿ.ನಾಯ್ಕ

ಕರಾವಳಿ

ನಿಗಮ-ಮಂಡಳಿ ಗದ್ದುಗೆ ಗುದುಮುರಿಗೆ ಕ್ಲೈಮಾಕ್ಸ್!

ಕರಾವಳಿಯ ಆಡಳಿತಾರೂಢ ಕಾಂಗ್ರೆಸ್ ಲಗಾಟಿ ಹೊಡೆಯುತ್ತಿದೆ! 'ಮಂತ್ರಿ -ಶಾಸಕರ ದೊಡ್ಡ ದಂಡಿದ್ದರೂ ಬಿಜೆಪಿಯ ಮೂರೇ ಮೂರು ಸಂಸದರ ಸೋಗಲಾಡಿ ರಾಜಕಾರಣ ಎದುರಿಸಲಾಗದೇ ಮುಗ್ಗರಿಸುತ್ತಿದೆ. ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಕಳೆಯುತ್ತ ಬಂದರೂ ಜನರ ಋಣ ತೀರಿಸಬೇಕೆಂಬ ಕನಿಷ್ಠ ಬದ್ಧತೆ-ನಿಯತ್ತು-ಪ್ರಾಮಾಣಿಕತೆ ಕಾಂಗ್ರೆಸ್‌ನ ಮುಂಚೂಣಿ ಮುಂದಾಳು ಗಳಿಗಿಲ್ಲವಾಗಿದೆ. ನಿದ್ದುಂಡಿ ಜಾಯಮಾನದ ಆಸ್ಕರ್, ರಮಾನಾಥ ರೈ, ಆರ್.ವಿ. ದೇಶಪಾಂಡೆ, ಸೊರಕೆಗಳ ಕೈಲಿರುವ ಅಧಿಕಾರವೇ ಕಾಂಗ್ರೆಸ್‌ಗೆ ಗಂಡಾಂತರಕಾರಿ ಆಗಿದೆ!

ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡದ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ತಂತಮ್ಮ ಜಿಲ್ಲೆಯ ಬೇಕು-ಬೇಡಗಳ ಅರಿವೇ ಇಲ್ಲ. ಅಧಿಕಾರ ಬಲದಿಂದ ಹಾರಾಡುತ್ತಿರುವ ರಮಾನಾಥ ರೈ, ವಿನಯಕುಮಾರ್ ಸೊರಕೆ ಮತ್ತು ಆರ್.ವಿ. ದೇಶಪಾಂಡೆಗೆ ಜನರ ಕಷ್ಟ-ಸುಖ ಅರ್ಥವಾಗುತ್ತಿಲ್ಲ! ಬಿಜೆಪಿಗಳ ಆರ್ಭಟದ ಮತಾಂಧ ಮತ್ತು ಮೋಸದ ಮಸಲತ್ತಿಗೆ ಸಡ್ಡು ಹೊಡೆದು ಕಾಂಗ್ರೆಸ್ ಕಟ್ಟುವ ಸ್ಟ್ರೇಟಜಿ ಮಾಡಲು ಈ ಜನ್ಮದಲ್ಲಿ ಈ ಮೂರೂ ಮಂತ್ರಿ ಮಹಾಶಯರಿಂದ ಸಾಧ್ಯವೇ ಇಲ್ಲವಾಗಿದೆ. ಹಾಗಂತ ನಿಷ್ಠಾವಂತ ಕಾಂಗ್ರೆಸಿಗರೇ ಅಲವತ್ತುಕೊಳ್ಳುತ್ತಿದ್ದಾರೆ. ಅತ್ತ ಕಾಂಗ್ರೆಸ್ ಹಣಿಯಲು ಬಿಜೆಪಿಗರು ಮೋದಿ ಮುಖವಾಡ ಹಾಕಿಕೊಂಡು ಮಂಕುಬೂದಿ ಎರಚುತ್ತಲೇ ಇದ್ದಾರೆ.

ಕರಾವಳಿ ಉದ್ದಗಲಕ್ಕಿರುವ ಕಾಂಗ್ರೆಸ್ ಶಾಸಕರಲ್ಲಿ ಮಂತ್ರಿಗಿರಿ ಮತ್ತು ನಿಗಮ-ಮಂಡಳಿ ಪೀಠಕ್ಕೆ ಪೈಪೋಟಿ ಬಿರುಸಾಗಿ ನಡೆದಿದೆ. ಸಮಾಜಮುಖಿ ಯೋಚನೆ-ಯೋಜನೆಗಳೇ ಇಲ್ಲದ ಈ ಎಮ್ಮೆಲ್ಲೆಗಳು ಎದುರಾಳಿಗಳಿಗೆ ಬತ್ತಿ ಇಡುವ ಲೆಕ್ಕಾಚಾರದಲ್ಲೇ ದಿನವಿಡೀ ಮುಳುಗಿರುತ್ತಾರೆ. ಉಡುಪಿಯ ಪ್ರಮೋದ್ ಮಧ್ವರಾಜ್, ಕಾಪುದ ವಿನಯ ಕುಮಾರ್ ಸೊರಕೆ, ಬೈಂದೂರಿನ ಗೋಪಾಲ ಪೂಜಾರಿ, ಬಂಟ್ವಾಳದ ರಮಾನಾಥ ರೈ, ಕುಮಟಾದ ಶಾರದಾ ಶೆಟ್ಟಿ, ಭಟ್ಕಳದ ಮಂಕಾಳು ವೈದ್ಯ, ಹಳಿಯಾಳದ ದೇಶಪಾಂಡೆ ವಗೈರೆಗಳಲ್ಲಿ ಶಾಸಕರಾಗುವ ಮೊದಲಿದ್ದ ನಯ-ವಿನಯ ಮಾಯವಾಗಿ ಅಹಂಕಾರ-ಅಧಿಕ ಪ್ರಸಂಗ ತುಂಬಿಕೊಂಡಿದೆ. ಬಿಜೆಪಿಯ ದೋಖಾ ಸಂಸದರಾದ ಶೋಭಾ ಕರಂದ್ಲಾಜೆ, ನಳಿನ್ ಕುಮಾರ್ ಕಟೀಲ್ ಮತ್ತು ಅನಂತಕುಮಾರ್ ಹೆಗಡೆ ಜನರ ಕೈಗೆ ಸಿಗದೆ ಹಸಿಹಸೀ ಸುಳ್ಳು ಹೇಳುತ್ತ ಬೇಳೆಬೇಯಿಸಿಕೊಳ್ಳುತ್ತಿದ್ದಾರೆ. ಇದು ಕಂಡೂಕಾಣದಂತೆ ಹಾಯಾಗಿ ಮೇಯುವುದೇ ಕಾಂಗ್ರೆಸ್ ಕಿಂಗ್‌ಗಳ ದೊಡ್ಡ ದೌರ್ಬಲ್ಯ!

ಖಾಲಿ ಬರಡು ರಾಜಕಾರಣದಲ್ಲಿ ಕರಾವಳಿ ಕಾಂಗ್ರೆಸಿಗರು ಯಾವಾಗಲೂ ನಿಸ್ಸೀಮರು. ಈಗಂತೂ ಈ ಕರ್ಮಗೇಡಿಗಳು ನಿಗಮ-ಮಂಡಳಿ ಪೀಠಾಧಿಕಾರ ಹಂಚಿಕೆಯ ಬಿಸಿ ಏರಿಸಿಕೊಂಡು ಅಂಡಲೆಯುತ್ತಿದ್ದಾರೆ. ಮಂತ್ರಿಗಳಿಗೆ ತಂತಮ್ಮ ಗುಲಾಮರಿಗೆ-ಏಜೆಂಟರಿಗೆ ಗೂಟದ ಕಾರು ಕೊಡಿಸುವ ದರ್ದಾದರೆ, ಶಾಸಕರಿಗೆ ತಾವೇ ಪೊಗದಸ್ತಾದ ನಿಗಮ-ಮಂಡಳಿ ಪಾರುಪತ್ಯಗಾರರಾಗುವ ತೆವಲು; ಇದು ಸಾಧ್ಯವಾಗದಿದ್ದರೆ ತಮ್ಮ ಅನುಯಾಯಿಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರ, ನಿಗಮ-ಮಂಡಳಿ ಸದಸ್ಯತ್ವ ಕೊಡಿಸಿ ಮೀಸೆ ತಿರುವುವ ಹಂಬಲ. ನಿಗಮ-ಮಂಡಳಿಗೆ ಹಗಲುಕನಸು ಕಾಣುತ್ತಿರುವ ಎರಡನೇ ದರ್ಜೆ ಪುಢಾರಿಗಳಿಗಂತೂ ನಿದ್ದೆಯೇ ಬೀಳುತ್ತಿಲ್ಲ! ಬುಟ್ಟಿಯಿಂದ ಹಾವು ಬಿಡುವ ಹಾವಾಡಿಗರ ಸ್ಟೈಲ್‌ನಲ್ಲಿ ಸಿದ್ದು-ಪರಮ್ "... ಇಂದು ನಿಗಮ-ಮಂಡಳಿ ಪೀಠಾಧಿಪತಿಗಳ ಹೆಸರು ರಿಲೀಸ್.... ಇಲ್ಲಲ್ಲ... ನಾಳೆ ಅಥವಾ ನಾಡಿದ್ದು ಗ್ಯಾರಂಟಿ....." ಎಂದ್ಹೇಳುತ್ತಿರುವುದು ಕರಾವಳಿಯ ಹಿರಿ-ಮರಿ ಮುಂದಾಳುಗಳ ಬಿಪಿ ಏರಿಸುತ್ತಿದೆ!!

ಅವಿಭಜಿತ ದಕ್ಷಿಣ ಕನ್ನಡ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಸಂದರ್ಭ ಬಂದಾಗ ಲಾಗಾಯ್ತಿನಿಂದಲೂ ಮೊಯ್ಲಿ-ಪೂಜಾರಿ-ಆಸ್ಕರ್ ಎಂಬ ಸೆಟ್ ದೋಸೆಯದೇ ಅಂತಿಮ ವಾಣಿ. ಈ ತ್ರಿಮೂರ್ತಿಗಳೇ ಕಾಂಗ್ರೆಸ್ ದುರ್ಬಲಗೊಳಿಸಿದ ಕಿತ್ತಿವರಸೆ ವೀರರು. ಆದರೂ ಇವತ್ತಿಗೂ ಇವರದೇ ಅಳ್ವಿಕೆ ಜಿಲ್ಲಾ ಕಾಂಗ್ರೆಸ್‌ನಲ್ಲಿ. ಸುರತ್ಕಲ್‌ನ ಮಾಜಿ ಶಾಸಕ ವಿಜಯಕುಮಾರ್ ಶೆಟ್ಟಿಗೆ ಕರಾವಳಿ ಅಭಿವೃದ್ಧಿ ನಿಗಮದ ಗದ್ದುಗೆ ಕೊಡಿಸಲು ಜನಾರ್ದನ ಪೂಜಾರಿ ಕಸರತ್ತು ಮಾಡುತ್ತಿದ್ದಾರೆ. ಜಿಪಂ ಮಾಜಿ ಅಧ್ಯಕ್ಷೆ ಮಮತಾ ಗಟ್ಟಿ ಎಂಬ ಹೆಂಗುಸ ಪರವೂ ಪೂಜಾರಿ ಲಾಬಿ ಮಾಡುತ್ತಿದ್ದಾರೆ. ಮೊಯ್ಲಿ ಮಹಾತ್ಮನ ಆಸಕ್ತಿ ಕಾರ್ಕಳದ ಮಾಜಿ ಶಾಸಕ ಗೋಪಾಲ ಭಂಡಾರಿ ಬಗ್ಗೆಯಷ್ಟೇ.

ಈ ಗೋಪಾಲ ಭಂಡಾರಿ ಜನಪ್ರತಿನಿಧಿ ಅಥವಾ ಯಾವುದೇ ನಿಗಮ-ಮಂಡಳಿಗೆ ಯೋಗ್ಯನಾದ ಜನಪರ ರಾಜಕಾರಣಿ. ಎರಡೆರಡು ಬಾರಿ ಶಾಸಕನಾಗಿದ್ದಾಗಲೂ ಈತ ಅಧಿಕಾರದ ಮದ ತಿಂದೂ ಏರಿಸಿಕೊಳ್ಳದೇ ಜನರ ನಡುವೇ ಬದುಕಿದಾತ. ಸಿಕ್ಕ ಅಧಿಕಾರ ಸ್ವಾರ್ಥಕ್ಕೆಂದೂ ಬಳಸಿಕೊಳ್ಳದೇ ಸಮಾಜಮುಖಿಯಾಗಿ ಚಿಂತಿಸುವ ಅಪರೂಪದ ಜನನಾಯಕ. ಈ ಮೆರಿಟ್ ನೋಡಿ ಮೊಯ್ಲಿ ಭಂಡಾರಿಗೆ ಸಪೋರ್ಟ್ ಮಾಡುತ್ತಿಲ್ಲ. ಕಾರ್ಕಳದಿಂದ ಮಗನನ್ನು ಎಮ್ಮೆಲ್ಲೆ ಮಾಡುವ ರಹಸ್ಯ ಕಾರ್ಯಸೂಚಿ ಹಾಕಿಕೊಂಡಿರುವ ಮೊಯ್ಲಿ ಭಂಡಾರಿಯನ್ನು ಬದಿಗೆ ಸರಿಸಲು ನಿಗಮವೊಂದರ ಅಧ್ಯಕ್ಷನಾಗಿಸುವ ಕರಾಮತ್ತು ಮಾಡುತ್ತಿದ್ದಾರೆ. ಕುಲೋದ್ಧಾರಕ ಹರ್ಷನಿಗೆ ಎಂಪಿ ಟಿಕೆಟ್ ಕೊಡಿಸಲು ವಿಫಲನಾಗಿರುವ ಮೊಯ್ಲಿ ಶಾಸಕನಾಗಿಯಾದರೂ ಆತನನ್ನು ಮಾಡಲೇಬೇಕೆಂಬ ಹಟಕ್ಕೆ ಬಿದ್ದಿದ್ದಾರೆ.

ಕೊನೆ ಗಳಿಗೆಯಲ್ಲಿ ಆಸ್ಕರ್ ಮಾಡಿದ ಪವಾಡದಿಂದ ಸಿದ್ದು ಕ್ಯಾಬಿನೆಟ್ ಸೇರುವ ಭಾಗ್ಯದಿಂದ ವಂಚಿತನಾದ ಬೈಂದೂರಿನ ಗೋಪಾಲ ಪೂಜಾರಿ ಎಂಬ 'ಹೊಟೇಲ್ ದೊರೆ' ಈಗ ನಿಗಮ-ಮಂಡಳಿಯ ಯಜಮಾನನಾಗಲು ಹವಣಿಸುತ್ತಿದ್ದಾರೆ. ಸ್ವ-ಜಾತಿ ಪಿಕಮತ್ತು ಮಂತ್ರಿ ಸೊರಕೆಗೆ ಸರಿ-ಸಮಾನವಾದ ಮಂಡಳಿ ಬಾಸ್‌ಗಿರಿಗಾಗಿ ಆತ ತಿಪ್ಪರಲಾಗ ಹಾಕುತ್ತಿರುವುದು ಮೋಜಾಗಿದೆ. ಆಸ್ಕರ್ ಈ ಬಾರಿ ತನ್ನ ಕೈಬಿಡಲಾರರೆಂಬುದು ಆತನ ನಿರೀಕ್ಷೆ, ಪಾಪ! ಉಡುಪಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಎ. ಗಫೂರ್‌ಗೆ ದೇವಪಿತ್ರ ಆಸ್ಕರ್ ಈ ಬಾರಿಯಾದರೂ ಇನಾಮು ಕೊಡಲೇಬೇಕಾಗಿದೆ. ಎಮ್ಮೆಲ್ಸಿ ಗಿರಿಗಾಗಿ ಪ್ರಯತ್ನಿಸಿದ್ದ ಗಫೂರ್‌ಗೆ ಆಸ್ಕರ್ ನೆರವಿಗೆ ಬಂದಿರಲಿಲ್ಲ. ಬದಲಿಗೆ ಕ್ರಿಶ್ಚಿಯನ್ ಲಾಬಿಯ ಫಾದರ್ಸ್-ಬಿಷಪ್ಸ್‌ಗಳ ಮತ್ತು ಬಲಾಢ್ಯ ಎನ್‌ಆರ್‌ಐ ಕುಲಾಸೊ ಎಂಬಾತನ ಒತ್ತಡಕ್ಕೆ ಮಣಿದಿದ್ದ ಆಸ್ಕರ್ ನಾಲಾಯಕ್ ಐವಾನ್ ಡಿಸೋಜಾಗೆ ಎಮ್ಮೆಲ್ಸಿ ಮಾಡಿದ್ದರು. ಹೇಗೇ ನೋಡಿದರೂ ಈ ಗಫೂರ್ ಸಾಹೇಬ್ ಗುಂಡಾಗುಂಡಿ ಆಸಾಮಿ ಐವಾನ್‌ಗಿಂತ ಬೆಟರ್. ತನ್ನ ಸೇವೆ ಮಾಡಿದ ಋಣಕ್ಕಾದರೂ ಈ ಬಾರಿ ಆಸ್ಕರ್ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷತೆ ಗಫೂರ್‌ಗೆ ಕೊಡುತ್ತಾರೆಂಬುದು ಕರಾವಳಿ ಕಾಂಗ್ರೆಸಿಗರ ಅಂಬೋಣ.

ಮಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲೆ ಇಬ್ಬಿಬ್ಬರು ಸಾಬಿ ಸಾಹೇಬರು ಕಣ್ಣಿಟ್ಟಿದ್ದಾರೆ. ಇಬ್ರಾಹಿಂ ಕೋಡಿಜಾಲ್‌ಗೆ ಜಿಲ್ಲಾ ಮಂತ್ರಿ ರೈ ಮತ್ತು ಮಾಜಿ ಕೇಂದ್ರ ಮಂತ್ರಿ ಮೊಯ್ಲಿ ಕೃಪಾಕಟಾಕ್ಷವಿದ್ದರೆ, ಮುಹ್ಮದ್ ಬದ್ರುದ್ದೀನ್‌ಗೆ ಪೂಜಾರಿ ಪ್ರಭಾವ ಬೆಂಗಾವಲಾಗಿದೆ. ಈ ಗೂಟದ ಕಾರಿನ ಆಕಾಂಕ್ಷಿಗಳ ಗುದುಮುರಿಗೆಗಿಂತ ಕುತೂಹಲಕರ ಕಸರತ್ತೆಂದರೆ ದಿವಂಗತ ಭೂಗತ ದೊರೆ ಅಮರ್ ಆಳ್ವ ಮಡದಿ ಕೃಪಾ ಆಳ್ವರದ್ದು. ಈಕೆಗೆ ನೇರಾನೇರ ಕೆಪಿಸಿಸಿ ಅಧ್ಯಕ್ಷ ಪರಮ್‌ರ ಸಹಾಯಹಸ್ತ ಸಿಕ್ಕಿದೆ! ಕಳೆದ ಬಾರಿಯ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಮಂಗಳೂರು ಉತ್ತರ ಅಥವಾ ಪುತ್ತೂರು ಟಿಕೆಟ್‌ಗಾಗಿ ಕೃಪಾ ಕಟಿಪಿಟಿ ನಡೆಸಿದ್ದರು. ಎಲ್ಲಾದರೂ ಒಂದು ಕಡೆ ಟಿಕೆಟ್ ಕೊಡುವ ಭರವಸೆ ಪರಮ್ ಆಕೆಗೆ ಕೊಟ್ಟಿದ್ದರು. ಆದರೆ 'ಪ್ರತಿಫಲ' ಪರಮ್‌ರಿಂದ ಸಿಗದೇ ಕೆರಳಿದ್ದ ಕೃಪಾ ಈಗ ನಿಗಮ-ಮಂಡಳಿ ಗದ್ದುಗೆಗಾಗಿ ಒತ್ತಾಯಿಸುತ್ತಿದ್ದಾರೆಂಬುದು ಕರಾವಳಿ ಕಾಂಗ್ರೆಸ್ಸಿಗರ ಮಾತು.

ಪ್ರತಿ ಜಿಲ್ಲೆಗೆ ಎರಡರಂತೆ ನಿಗಮ ಅಥವಾ ಮಂಡಳಿ ಕಾರನ್ನು ಹಂಚುವ ಸೂತ್ರ ಕೆಪಿಸಿಸಿ ಸಿದ್ಧಪಡಿಸಿದೆ. ಆದರೆ ಉತ್ತರ ಕನ್ನಡ ಎಂಬ ರಾಜಕೀಯ ಸಾಮಾಜಿಕ ನಿರ್ಲಕ್ಷಿತ ಜಿಲ್ಲೆಯಲ್ಲಿ ಒಂದು ಡಜನ್‌ಗಿಂತ ಹೆಚ್ಚು ತೆವಲುದಾರರು ಅಧಿಕಾರಕ್ಕಾಗಿ ತುಂಡುಗುಪ್ಪಳ ಹೊಡೆಯುತ್ತಿದ್ದಾರೆ. ಇದರಲ್ಲಿ ಎದ್ದು ಕಾಣುತ್ತಿರುವುದು ಅನಿವಾಸಿ ಉತ್ತರ ಕನ್ನಡಿಗ (ಸಪ್ಲೈರ್ ಮಾಣಿ ಬಿರುದಾಂಕಿತ) ಉಮೇಶ್ ಭಟ್ಟ, ಡಿಸ್‌ಮಿಸ್ಡ್ ಜಡ್ಜ್ ಮುಜಾಮಿಲ್ ಖಾಜಿಯಾ, 'ದೋ ನಂಬರ್ ದಂಧೆದಾರ (ಶಾಸಕ) ಮಂಕಾಳು ವೈದ್ಯ ಮತ್ತು ಜಗಳ ಗಂಟಿ (ಮಾಜಿ ಎಮ್ಮೆಲ್ಲೆ) ಜೆ.ಡಿ. ನಾಯ್ಕ್ ಎಂಬ ಚಂಡಪ್ರಚಂಡ ಚತುಷ್ಟಯರು! ಎಸ್ಸೆಂ ಕೃಷ್ಣ ಯುಗದಲ್ಲಿ ಬೆಂಗಳೂರು ಮೆಟ್ರೋ ಕಾರ್ಪೊರೇಷನ್ ಗದ್ದುಗೆ ಹೊಡೆದುಕೊಂಡಿದ್ದ ಉಮೇಶ್ ಭಟ್ಟ ಈ ಬಾರಿ ಮಾಜಿ ಕೇಂದ್ರ ಮಂತ್ರಿ ಮಲ್ಲಿಕಾರ್ಜುನ ಖರ್ಗೆ, ಮಂತ್ರಿ ದಿನೇಶ್ ಗುಂಡೂರಾವ್ ಮೂಲಕ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಅಧಿಕಾರಸ್ಥರ ಬೇಕು ಬೇಡಗಳನ್ನು ಅರ್ಥಮಾಡಿಕೊಂಡು ಸರಬರಾಜು ಮಾಡುವ ಮೂಲಕವೇ ರಾಜಕಾರಣದಲ್ಲಿ ಪ್ರವರ್ಧಮಾನಕ್ಕೆ ಬಂದಿರುವ ಉಮ್ಮಾಣಿ ಭಟ್ಟ ಒಂದು ಬಾರಿ ಅಚಾನಕ್ ಅಂಕೋಲಾ ಕ್ಷೇತ್ರದ ಎಮ್ಮೆಲ್ಲೆಯೂ ಆಗಿದ್ದರು. ಆ ನಂತರ ಆತನನ್ನು ಜಿಲ್ಲೆಯ ಜನ ತಮ್ಮವನೆಂದು ನಂಬಿಕೆ ಇಟ್ಟದ್ದೇ ಇಲ್ಲ. ಆತನ ನಿಗೂಢ ದಂಧೆಗಳೇ ಇವತ್ತಿಗೂ ಜಿಲ್ಲೆಯಲ್ಲಿ ರಂಗು-ರಂಗಿನ ಸುದ್ದಿಗಳನ್ನೆಬ್ಬಿಸುತ್ತಿದೆ. ಈ ಉಮ್ಮಾಣಿ ಭಟ್ಟ ಈ ಬಾರಿಯೂ ಒಂದು ಗೂಟದ ಕಾರು ಪಡೆಯುವ ಛಾನ್ಸ್ ಹೆಚ್ಚಾಗಿದೆ. ಆತನ 'ತಾಕತ್ತೇ' ಅಂಥದ್ದು!!

ಭಟ್ಕಳ ನವಾಯಿತರ ಸರ್ವಶಕ್ತ ಧಾರ್ಮಿಕ ಸಂಸ್ಥೆ 'ತಂಜೀಮ್' ಅಧ್ಯಕ್ಷ ಮುಜಾಮಿಲ್. ಖಾಜಿಯಾ ರಾಜ್ಯ ಮಟ್ಟದ ಮುಸ್ಲಿಮ್ ಲೀಡರ್‌ಗಳಿಗೆಲ್ಲ ಅನ್ಯೋನ್ಯ ಸಖ. ಯೋಜನಾ ಮಂಡಳಿ ಉಪಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಮಂತ್ರಿ ಖಮರುಲ್ ಇಸ್ಲಾಂ, ರೋಷನ್ ಬೇಗ್ ಮುಂತಾದವರು ಮುಜಾಮಿಲ್‌ಗೆ ಮೈನಾರಿಟಿ ಕಮಿಷನ್ ಕಾರು ಕೊಡಿಸಲು ಕಟಿಪಿಟಿ ನಡೆಸಿದ್ದಾರೆ. ಒಂದು ಹಂತದಲ್ಲಿ ತಾನೇ ನಿಗಮ ಒಂದರ ಯಜಮಾನನಾಗಲು ಯೋಚಿಸಿ ಮಂತ್ರಿ ದೇಶಪಾಂಡೆಯಿಂದಲೂ 'ಓಕೆ' ಮಾಡಿಸಿಕೊಂಡಿದ್ದ ಭಟ್ಕಳ ಕಾಂಗ್ರೆಸ್ ಸಹ ಶಾಸಕ (ಪಕ್ಷೇತರ ಎಮ್ಮೆಲ್ಲೆ) ಮಂಕಾಳು ವೈದ್ಯ ದೂ(ದು)ರಾಲೋಚನೆ ಹಾಕಿ ಮುಜಾಮಿಲ್‌ಗೆ ನೆರವಾಗುತ್ತಿದ್ದಾರೆ. ಭಟ್ಕಳದ ಬಹುಸಂಖ್ಯಾತ ದೀವರ ಎದುರು ಹಾಕಿಕೊಂಡಿರುವ ಈ ಮೀನುಗಾರ ಪೋರ ಮುಂದೆ ಕಾಂಗ್ರೆಸ್ ಕ್ಯಾಂಡಿಡೇಟಾದರೆ ನಿರ್ಣಾಯಕವಾಗಿರುವ ಮುಸ್ಲಿಮರ ಓಟ್ ಬ್ಯಾಂಕ್ ತನಗೆ ಮೀಸಲಾಗಿರಲೆಂಬ ಮುಂದಾಲೋಚನೆಯಿಂದ ಮುಜಾಮಿಲ್ ಪರ ನಿಂತಿದ್ದಾರೆ. ಇದಕ್ಕೆ ದೇಶಪಾಂಡೆಯೂ ಬಹುತೇಕ ಸಮ್ಮತಿಸಿದ್ದಾರೆ. ಹೀಗಾಗಿ ಮುಜಾಮಿಲ್‌ಗೆ ಒಂದು ಸರ್ಕಾರಿ ಕಾರಿನಲ್ಲಿ ಓಡಾಡುವ ಅವಕಾಶ ಹೆಚ್ಚಾಗಿದೆ!

ಉತ್ತರ ಕನ್ನಡ ಜಿಲ್ಲೆಯ ಮಟ್ಟಿಗೆ ದೇಶಪಾಂಡೆಯ ಇಷ್ಟಾನಿಷ್ಟವೇ ಅಧಿಕಾರ ಹಂಚಿಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಈಗಂತೂ ಆತನ ಎದುರಾಳಿ ಮ್ಯಾಗಿ ನೇಪಥ್ಯಕ್ಕೆ ಸರಿದಿರುವುದರಿಂದ ದೇಶಪಾಂಡೆಯದು 'ಒಕ್ಕೈ' ರಾಜಕಾರಣ! ದೇಶಪಾಂಡೆ ಮೀರಿ ರಂಗೀಲಾ ಇಮೇಜು ಬೆಂಗಳೂರಲ್ಲಿ ಬೆಳೆಸಿಕೊಂಡಿರುವುದು ಉಮ್ಮಾಣಿ ಭಟ್ಟ ಒಬ್ಬನೇ. ಜಿಲ್ಲೆಯಲ್ಲಿ ಉಮ್ಮಾಣಿಯಿಂದ ದೇಶಪಾಂಡೆಗೆ ಯಾವುದೇ ಡೇಂಜರ್ ಎಂಬುದಿಲ್ಲ. ಹೀಗಾಗಿ ಆತ ಉಮ್ಮಾಣಿಗೆ ಅಡ್ಡಗಾಲು ಹಾಕುತ್ತಿಲ್ಲ. ದೇಶಪಾಂಡೆ ಕೃಪೆಯಿಲ್ಲದಿದ್ದರೂ ತಾನೊಂದು ಸರ್ಕಾರಿ ಕಾರು ತರುವೆನೆಂದು ಮಾಜಿ ಶಾಸಕ ಜೆ.ಡಿ. ನಾಯ್ಕ್ ಹೇಳಿಕೊಂಡು ತಿರುಗುತ್ತಿದ್ದಾರೆ. ಆತನಿಗೆ ಎಐಸಿಸಿ ಪವರ್ ಬ್ರೋಕರ್ ಆಸ್ಕರಣ್ಣನ ಸಖ್ಯವಿದೆ. ಜತೆಗೆ ಈಡಿಗರ ಲಾಬಿ ಬೆಂಬಲ ಇದೆ. ಮಂತ್ರಿ ಸೊರಕೆ ಮತ್ತು ಸ್ಪೀಕರ್ ಕಾಗೋಡು ತಿಮ್ಮಪ್ಪ ಸ್ವ-ಜಾತಿಯ ಜೆ.ಡಿ.ನಾಯ್ಕ್ ಬಗ್ಗೆ ಒಂಥರಾ ಕರುಣೆ ತೋರುತ್ತಿದ್ದಾರೆ.

ಭಟ್ಕಳ ಕಾಂಗ್ರೆಸ್‌ಗೆ ಪಕ್ಷೇತರ ಶಾಸಕ ಮಂಕಾಳು ಸೇರಿಕೊಂಡಿರುವುದರಿಂದ ಮುಂದಿನ ಬಾರಿ ಅಸೆಂಬ್ಲಿ ಟಿಕೆಟ್ಟೂ ಜೆಡಿಗೆ ಸಿಗುವುದು ಖಾತ್ರಿಯಿಲ್ಲ. ಹೀಗಾಗಿ ನೊಂದು ಹತಾಶನಾಗಿರುವ ಆತನಿಗೆ ಮಂಡಳಿ ದೊರೆತನವಾದರೂ ಕೊಟ್ಟು ಪುನರ್ವಸತಿ ಕಲ್ಪಿಸಬೇಕೆಂಬುದು ಈಡಿಗ ಬಳಗದ ಒತ್ತಾಯ! ದೇಶಪಾಂಡೆಯ ನಂಬಿಕೆ ದ್ರೋಹದಿಂದ ಕಳೆದ ಸಲ ಶಿರಸಿ ಅಸೆಂಬ್ಲಿ ಟಿಕೆಟ್‌ನಿಂದ ವಂಚಿತನಾಗಿದ್ದ ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕ ಕೆಪಿಸಿಸಿಯಲ್ಲಿ ಒಂದು ಲೆವೆಲ್‌ನ ಪರಿಗಣನೆ ದೇಶಪಾಂಡೆಯೂ ದೀವರ ಆಕ್ರೋಶದಿಂದ ಬಚಾ ಈ ಭೀಮಣ್ಣನನ್ನು ನಿಗಮ ಅಥವಾ ಮಂಡ ಪ್ರತಿಷ್ಠಾಪಿಸಲು ನಿರ್ಧರಿಸಿಯೂ ಇದ್ದರು. ಆದರೆ ನಿಗಮ-ಮಂಡಳಿಗಾಗಿ ಪವರ್‌ಫುಲ್ ಡಿಸಿಸಿ ಪಟ್ಟ ಭೀಮಣ್ಣ ರೆಡಿಯಿಲ್ಲ; ಅಷ್ಟೇ ಅಲ್ಲ, ಮುಂದಿನ ಇಲೆಕ್ಷನ್‌ನಲ್ಲಿ ಶಿರಸಿಯಿಂದ ಸ್ಪರ್ಧಿಸುವ ಅಥವಾ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಎಲೆ ಕಣಕ್ಕಿಳಿಯುವ ಆಯ್ಕೆ ಮುಕ್ತವಾಗಿಟ್ಟುಕೊಳ್ಳುವ ಭೀಮಣ್ಣನದು. ಹೀಗಾಗಿ ಆತ ನಿಗಮ-ಮಂಡಳಿ ತಿರಸ್ಕರಿಸಿದ್ದಾರೆ.

ಕುಮಟಾದ ಆರ್.ಎಚ್. ನಾಯ್ಕ್ ಈಡಿಗರ ದಲ್ಲಿ ತಾನೇ ಅರ್ಹನೆಂದು ಬೊಬ್ಬೆ ಹೊಡೆಯ ಆತನಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿ ಬೆಂಬಲವಿದೆ. ಹರಿಯನ್ನು ಉತ್ತರ ಕನ್ನಡ ಲೋ ಕ್ಷೇತ್ರದಿಂದ ಕಾಂಗ್ರೆಸ್ ಹುರಿಯಾಳಾಗಿಸಬೇಕೆಂದ ಲಾಬಿ ಮಾಡಿದ ದೀವರಲ್ಲಿ ಈ ಆರ್.ಎಚ್. ನಾ ಒಬ್ಬರು. ಆದರೆ ದೀವರ ಲೀಡರಾಗಿ ಬಂದರೆ ಬ್ರಾ ಮತ್ತಿತರ ದೊಡ್ಡ ಜಾತಿ ತಿರುಗಿ ಬೀಳುತ್ತಾರೆಂಬ ಹಾಕಿದ ಹರಿಪ್ರಸಾದ್ ಉತ್ತರ ಕನ್ನಡ ಉಸಾಬ ದೂರಾಗಿದ್ದರು. ಉತ್ತರ ಕನ್ನಡದ ದೀವರ ರಾ ಉಳಿದೆಲ್ಲಾ ಜಾತಿಗಳಲ್ಲಿ ಒಂಥರಾ ಅಪಥ್ಯ ಎಂಬ ಆರ್.ಎಚ್.ನಾಯ್ಕ್ ಪರ ಹರಿ ಹಟ ಹಿಡಿದೇನೂ ಅಲ್ಲದೆ ಈಡಿಗರ, ಕೋಟಾದಲ್ಲಿ ಶಿವಮೊಗ್ಗ ದಕ್ಷಿಣ ಘಟಾನುಘಟಿಗಳೇ ಇರುವುದರಿಂದ ಆರ್.ಎಚ್ ಪರಿಗಣನೆಗೆ ಬರುವುದೂ ಕಷ್ಟ.

ದೇಶಪಾಂಡೆ ಲಿಸ್ಟ್‌ನಲ್ಲಿ ಕುಮಟಾದ ಹೊನ್ನಪ್ಪ ಅಂಕೋಲಾದ ರಮಾನಂದ ನಾಯಕ, ಶಿರಸಿಯ ಭಾಗ್ವತ್, ಕುಮಟಾದ ಎಲ್.ವಿ. ಶಾನಭಾಗ್ ವ ಚೇಲಾಗಳ ಹೆಸರಿದೆ. ಆದರೆ ಇವರಿಗೆಲ್ಲ ಯಾವು ನಿಗಮ-ಮಂಡಳಿ-ಸಹಕಾರಿ ಸಂಸ್ಥೆಯಲ್ಲಿ ಸದಸ್ಯತ್ವ-ಸಿ ಹೊರತು ಗೂಟದ ಕಾರಿನ ಸೌಭಾಗ್ಯ ಸಾಧ್ಯವಿಲ್ಲ ಖುದ್ದು ಅವರಿಗೆ ಗೊತ್ತಿರುವ ದೇಶಪಾಂಡೆ ತ ಎಲ್.ವಿ. ಶಾನಭಾಗ್ ಕುಮಟಾದಲ್ಲಿ ದೇಶ ಕಲೆಕ್ಷನ್ ಏಜೆಂಟ್. ಚೀಲ ಹಿಡಿದುಕೊಂಡು ಕಚೇರಿಗಳಿಂದ ಎತ್ತುವಳಿ ಮಾಡುವ ಎಲ್.ವಿ. ಶಾ ನಿಗಮ-ಮಂಡಳಿ ಯಾವ ಲೆಕ್ಕವೂ ಅಲ್ಲ. ದೇಶ ಕೋಶಾಧ್ಯಕತೆಯಷ್ಟು ಸಂಪದ್ಭರಿತವೂ ಅಲ್ಲ ಅ ಮಂಡಳಿಗಳು.

ಶಾಸಕರ ಕೋಟಾದಲ್ಲಿ ಕುಮಟಾದ ಶಾಸ ಶೆಟ್ಟಿ ಸಾರಿಗೆ ಅಥವಾ ಗೃಹ ಮಂಡಳಿ ಬೇರ ಆಟ ಆಡುತ್ತಿದ್ದಾರೆ. ಇದಕ್ಕೆ ಸಾಕ್ಷಾತ್ ದೇಶ ತೊಡಕಾಗಿದ್ದಾರೆ. ಶಾರದಾ ಮತ್ತಾಕೆಯ 'ಡಿಫ್ಯಾಕ್ಟೊ ರವಿಕುಮಾರ್ ಶೆಟ್ಟಿ ಕಂಡರೆ ದೇಶಪಾಂಡೆ ಶಾಪ ಹಾಕುತ್ತಿದ್ದಾರೆ. ಈಕೆ ಮ್ಯಾಗಿ ಶಿಷ್ಯೆ. ಕಾಂಗ್ರೆಸ್‌ನಲ್ಲಿ ಮುಗಿದಿರುವುದರಿಂದ ಶಾರ ರವಿಶೆಟ್ಟಿ ಹೊಸ ವರಸೆ ಶುರು ಹಚ್ಚಿಕೊಂಡಿದ್ದಾರೆ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕುಮಟಾ ಕ್ಷೇತ್ರದ ಬ ಬ್ರಾಹ್ಮಣ ಸಮೂಹದ ಮತ ಗಿಟ್ಟಿಸುವ ಯೋ ಈ ನಿಗಮ-ಮಂಡಳಿ ಪೀಠ ಪ್ರಧಾನ ಬಳಸಿಕೊಳ್ಳುತ್ತಿದ್ದಾರೆ. ಡಾ. ಜಿ.ಜಿ. ಹೆಗಡೆ ಎಂಬ ಯಾವುದಾದರೂ ನಿಗಮದ ಅಧ್ಯಕ್ಷತೆ ಕೊ ದೇಶಪಾಂಡೆಯಲ್ಲಿ ಅಮ್ಮ-ಮಗ ಚೌಕಾಸಿ ಕೆಪಿಸಿಸಿ ಅಧ್ಯಕ್ಷ ಪರಮ್‌ಗೆ ದೇಶಪಾಂಡೆ " ಬೇಡ-ಜಿಜಿ ಹೆಗ್ಡೆಗೂ ಬೇಡ..." ಎಂದು ಮಾಡಿದ್ದಾರೆ. ಭೂನ್ಯಾಯ ಮಂಡಳಿ ಅ ಅಯೋಗ್ಯವಾದ ಈ ಜಿಜಿ ಹೆಗ್ಡೆಗೆ ನಿಗವ ಕೊಡಿಸಿದರೆ ತಮಗೆ ಹ್ಯೆಗರ ಮತ ಸಾ ದಕ್ಕುತ್ತದೆಂಬ ಅಮ್ಮ-ಮಗನ ಲೆಕ್ಕಾಚಾರವೇ ಮೋ

ಕರಾವಳಿ ಕಾಂಗ್ರೆಸ್‌ನ ನಿಗಮ-ಮಂಡಳಿ ಗಮನಿಸಿದರೆ ಮಾಜಿ ಶಾಸಕರಾದ ವಿಜಯಕುಮಾ ಉಮೇಶ್ ಭಟ್ಟ, ಕೃಪಾ ಆಳ್ವರಿಗೆ ಒಂದೊಂ ಕಾರಿನ ಕೊಡುಗೆ ಸಿಗುವ ಸಾಧ್ಯತೆ ಗೋ ಉಳಿದವರ ಅದೃಷ್ಟ ಸಾಕ್ಷಾತ್ ಸಿದ್ದು-ಪರಮ್ ಈಗ ಏನಿದ್ದರೂ ಲಾಬಿಯ ಲಾಭ ನಷ್ಟದ ಲೆಕ್ಕ

ಚಟದಾಸನಾಗಿದ್ದ ಕೇಶವನ ಬರ್ಬರ ಕೊಲೆ



ಕೇಶವ

...ಫ್ತಾ ಹಣ ಕೊಡಲಿಲ್ಲವೆಂದು ಮಾರ್ವಾಡಿ ...ನ ಬೆನ್ನಿಗೆ ರೌಡಿಯೊಬ್ಬ ಚಾಕು ಹಾಕಿದ ಪ್ರಕರಣದ ...ದ ಮಂಡ್ಯ ಜನ ಹೊರಬರುವ ಮುನ್ನವೇ ಪುಡಿ ... ಅಟ್ಟಹಾಸಕ್ಕೆ ಮಂಡ್ಯದಲ್ಲಿ ಮತ್ತೊಮ್ಮೆ ನೆತ್ತರು ...

...ದ 6-7 ವರ್ಷಗಳಿಂದ ರೌಡಿಗಳ ಆರ್ಭಟವಿಲ್ಲದೆ, ... ಚೆಲ್ಲದೆ ಶಾಂತವಾಗಿದ್ದ ಮಂಡ್ಯದಲ್ಲಿ ಕಳೆದ ...ಬರ್ 1 ರಂದು ಚಂದಗಾಲು ಬಸವ ಎಂಬ ...ಜಿನ ರೌಡಿಯೊಬ್ಬ ನಕ್ಷತ್ರ ಗೋಲ್ಡ್ ಜ್ಯೂವೆಲರಿಯ ...ಡಿ ಮಹೇಂದ್ರ 5 ಲಕ್ಷ ಹಫ್ತಾ ಕೊಡಲಿಲ್ಲವೆಂಬ ಕಾರಣಕ್ಕೆ ಆತನ ಅಕ್ಕನ ಮಗ ಹರ್ಷದ್ ಮೆಹ್ತಾನ ...ನ್ನ ಶಿಷ್ಯರಿಂದ ಚಾಕು ಹಾಕಿಸಿ ನೆತ್ತರು ಹರಿಸಿದ್ದ. ...ತಿಂಗಳು ಕಳೆಯುವಷ್ಟರಲ್ಲಿಯೇ ಮಂಡ್ಯದಲ್ಲಿ ಮತ್ತೆ ...ಹರಿದಿದೆ.

...ಡ್ಯ ನಗರದ ಸ್ವರ್ಣಸಂದ್ರ ಬಡಾವಣೆಯ ದುಡ್ಡಿನ ...ಶವನ ಗ್ಯಾಂಗಿಗೂ ಅದೇ ಸ್ವರ್ಣಸಂದ್ರದ ಸಂತೋಷ್ ...ಸ್ ಬತಾಸ್ ಎಂಬಾತನ ಗ್ಯಾಂಗಿಗೂ ನಡೆಯುತ್ತಿದ್ದ ...ಲ್ಲಿ ಮೊದಲ ಬಲಿಯಾಗಿ ಕೇಶವ ಗೋಣು ... ಕೇಶವನ ಹತ್ಯೆಯೊಂದಿಗೆ ಈ ಕದನಕ್ಕೆ ತಾತ್ಕಾಲಿಕ ... ಬಿದ್ದಿದೆಯಾದರೂ ಮಂಡ್ಯ ಪೊಲೀಸರು ...ಕೊಳ್ಳದಿದ್ದರೆ ಮಂಡ್ಯದಲ್ಲಿ ಮತ್ತೆ ಭೂಗತಲೋಕದ ... ಹೆಚ್ಚಾಗಬಹುದು.

...ಕ್ಟೋಬರ್ 17ರಂದು ಬೆಳಗಿನ ಜಾವ ಬೇವಿನಹಳ್ಳಿ ... ವಿಷಕಂಠ ಎಂಬುವರ ಜಮೀನಿನ ಬಳಿ ಇರುವ ...ಯಲ್ಲಿ ಸಿಕ್ಕ ಶವದ ಕತ್ತನ್ನು ಸೀಳಲಾಗಿತ್ತು. ಎದೆ, ... ಮೊದಲಾದ ಭಾಗಗಳಿಗೆ 10-15 ಬಾರಿ ...ಲಾಗಿತ್ತು. ಇದನ್ನು ನೋಡಿ ಬೆಚ್ಚಿ ಬಿದ್ದ ...ಹಳ್ಳಿ-ಕಿರಗಂದೂರು ಗ್ರಾಮಸ್ಥರು ಮಂಡ್ಯ ...ತರ ಠಾಣೆಗೆ ಕರೆ ಮಾಡಿ ವಿಷಯ ಮುಟ್ಟಿಸಿದ್ದರು. ...ರಿ ಮಂಡ್ಯದಲ್ಲಿ ಮತ್ತೊಮ್ಮೆ ನೆತ್ತರು ಹರಿದಿದ್ದು ...ದ್ರ ಬಡಾವಣೆಯ ಲೇಟ್ ತಿಮ್ಮದಾಸ್ ಎಂಬಾತನ ...ಡಿ ಕಂ ಬಡ್ಡಿಕ್ರಿಮಿ ಕೇಶವ ಕುಮಾರ್ ಅಲಿಯಾಸ್ ... ಎಂಬಾತನದ್ದು.

ಅವನು ಕೇಶವ

...ಡ್ಯ ಸಿಟಿಯ ಸ್ವರ್ಣಸಂದ್ರ ಬಡಾವಣೆಯ 28 ...ಯಸ್ಸಿನ ಕೇಶವನ ತಂದೆ ತಿಮ್ಮದಾಸ್ ಮೈಷುಗರ್ ...ನೌಕರ. ಮೀಟರ್ ಬಡ್ಡಿ ದಂಧೆಯಲ್ಲಿ ಹಲವು ...ವನ್ನು ದುಡಿದಿದ್ದ ತಿಮ್ಮದಾಸ್ ಈಗ್ಗೆ ಎರಡು ... ಹಿಂದೆ ಹೃದಯಾಘಾತದಿಂದ ಸಾವನ್ನಪ್ಪಿದ್ದ. ...ಯ ತಿಮ್ಮದಾಸ್‌ನ ಐವರು ಮಕ್ಕಳಲ್ಲಿ ನಾಲ್ವರು ...ಮಕ್ಕಳು, ವಂಶೋದ್ಧಾರಕ ಎಂದು ಐದನೆಯವನಾಗಿ ...ದವನೇ ಈಗ ಕೊಲೆಯಾಗಿ ಹೋದ ಕೇಶವಕುಮಾರ ...ಸ್ ಕೇಶವ. ಅಪ್ಪ ತಿಮ್ಮದಾಸ್ ಮೀಟರ್ ಬಡ್ಡಿ ...ಲ್ಲಿ ದುಡಿದಿದ್ದ ಕೋಟ್ಯಾಂತರ ಹಣವನ್ನು ಖರ್ಚು ...ಗ್ರಾ ಉಡಾಳನಂತೆ ತಿರುಗುತ್ತಿದ್ದ. ಕೇಶವ ಸಣ್ಣಪುಟ್ಟ ...ಲ್ಲಿ ಭಾಗಿಯಾಗಿದ್ದ. ಕುಡಿತ, ಹೆಂಗಸರ ಖಯಾಲಿ, ... ಸೇರಿದಂತೆ ಹಲವು ಚಟಗಳ ಚಕ್ರವರ್ತಿಯಾಗಿದ್ದ ...ಸ್ವರ್ಣಸಂದ್ರದ ಮಾಜಿ ರೌಡಿಗಳ ಸಂಪರ್ಕ ಸಿಕ್ಕು, ... ರೌಡಿಸಂನ ಮೊದಲ ಪಾಠಗಳನ್ನು ಕಲಿತಿದ್ದ. ... ಬಡ್ಡಿಗೆ ಇಳಿದಿದ್ದ ಕೇಶವ ಸಾಕಷ್ಟು ಜನರೊಂದಿಗೆ ...ಕಿ ಕಟ್ಟಿಕೊಂಡಿದ್ದ. ಅದರಲ್ಲಿ ಒಂದಾನೊಂದು ...ಗೆಳೆಯನಾದ ತನ್ನದೇ ಏರಿಯಾದ ಸಂತೋಷ ...ಸ್ ಬತಾಸ್, ಮಹೇಶ್ ಅಲಿಯಾಸ್ ಚಪಾತಿ ...ರ್ ದರ್ಶನ್ ಹಾಗೂ ವಿಜಯ್ ಕುಮಾರ್

ಅಲಿಯಾಸ್ ವಿಜಿ ಎಂಬುವವರ ಜೊತೆಯೂ ವೈರತ್ವವಿತ್ತು. ಸಂತೋಷ್ ಹಾಗೂ ಕೇಶವನ ಮಧ್ಯೆ ಆಗಾಗ್ಗೆ ಸಣ್ಣಪುಟ್ಟ ಗಲಾಟೆಗಳು ನಡೆಯುತ್ತಿದ್ದವು. ಆದರೆ ಯಾವುದೂ ಅಷ್ಟೊಂದು ವಿಕೋಪಕ್ಕೆ ಹೋಗಿರಲಿಲ್ಲ.


ಆದರೆ 2011ರಲ್ಲಿ ಕೇಶವನ ಗ್ಯಾಂಗಿನ ರಾಘವ, ವಿನೋದ್, ಅಜಿತ್ ಎಂಬುವವರಿಗೆ ಸಂತೋಷ, ವಿಜಯಕುಮಾರ್, ಮಹೇಶ್ ಲಾಂಗ್‌ನಿಂದ ಹೊಡೆದು 307 ಕೇಸ್ ಮಾಡಿದ್ದರು. ಪದೇ ಪದೇ ಆಗುತ್ತಿದ್ದ ಜಗಳದಿಂದ ರೋಸಿಹೋಗಿದ್ದ ಹುಂಬ ಕೇಶವ ಸಂತೋಷ್ ಹಾಗೂ ಆತನ ಸ್ನೇಹಿತರಾದ ವಿಜಿ ಹಾಗೂ ಮಹೇಶ್‌ಗೆ ಬುದ್ಧಿ ಕಲಿಸಲು ನಿರ್ಧರಿಸಿದ್ದ. ಆದಕ್ಕೆಂದೆ ತನ್ನ ಗ್ಯಾಂಗಿನ ರಾಘವ, ಅಜಿತ್, ವಿನೋದ್‌ರ ಜೊತೆಗೂಡಿ 2011ರ ಜನವರಿ 14ರಂದು ಸ್ವರ್ಣಸಂದ್ರದ ರಂಗಮಂದಿರದ ಬಳಿ ಅಡ್ಡ ಹಾಕುತ್ತಿದ್ದ ಸಂತೋಷ ಗ್ಯಾಂಗಿನ ಮೇಲೆ ಮಚ್ಚು, ಲಾಂಗ್‌ಗಳಿಂದ ಮುಗಿಬಿದ್ದಿದ್ದ. ಈ ಗಲಾಟೆಯಲ್ಲಿ ಪ್ರತಿದಾಳಿ ನಡೆಸಿದ ಸಂತೋಷ್, ಮಹೇಶ್, ವಿಜಯ್‌ಕುಮಾರ್, ಮನು ಹಾಕಿ ಸ್ಟಿಕ್ ಹಾಗೂ ಲಾಂಗ್‌ಗಳಿಂದ ಕೇಶವನ ಗ್ಯಾಂಗಿನ ವಿನೋದ್, ಅಜಿತ್ ಎಂಬುವರಿಗೆ ಮಾರಣಾಂತಿಕವಾಗಿ ಹೊಡೆದಿದ್ದರು. ಸಂತೋಷ್ ಗ್ಯಾಂಗಿನ ಹೊಡೆತಕ್ಕೆ ಅಜಿತ್ ಬುರುಡೆ ಬಿಚ್ಚಿಹೋಗಿ ಇಂದಿಗೂ ಆತ ಚೇತರಿಸಿಕೊಂಡಿಲ್ಲ. ಈ ಪ್ರಕರಣದಲ್ಲಿ ಪೂರ್ವಠಾಣೆ ಪೊಲೀಸರು ಸಂತೋಷ್, ಮಹೇಶ್, ವಿಜಯ್‌ಕುಮಾರ್‌ನನ್ನು ಬಂಧಿಸಿ 307 ಕೇಸು ಜಡಿದು ಜೈಲಿಗೆ ದಬ್ಬಿದ್ದರು. ಆದಾಗಿ ಮೂರು ವರ್ಷ ಕಳೆದರೂ ಸಂತೋಷ್ ಮತ್ತು ಕೇಶವನ ಮಧ್ಯೆ ಇದ್ದ ಸೇಡಿನ ಬೆಂಕಿ ಆರಿರಲಿಲ್ಲ. ಆಗಾಗ್ಗೆ ಕೇಶವ ಹಾಗೂ ಸಂತೋಷನ ಮಧ್ಯೆ ಗಲಾಟೆಗಳು ನಡೆಯುತ್ತಿದ್ದವು.

ಉಡಾಳ ಕೇಶವನಿಗೆ ಸ್ಕೆಚ್


ಮಡಿವಾಳ ಜನಾಂಗಕ್ಕೆ ಸೇರಿದ ತಿಮ್ಮದಾಸ್ ಬಡ್ಡಿ ದಂಧೆಯಲ್ಲಿ ದುಡಿದಿದ್ದ ಸಾಕಷ್ಟು ಹಣವನ್ನು ಉಡಾಳ



ವಿಜಯ್‌ಕುಮಾರ್



ಸಂತೋಷ



ಮಹೇಶ್

ಮಗ ಕೇಶವ ಕರಗಿಸುತ್ತಿದ್ದ. ಒಬ್ಬನೇ ಮಗ ಎಂದು ತಂದೆ ತಿಮ್ಮದಾಸ್ ಹಾಗೂ ತಾಯಿ ಜಯಮ್ಮ ಮಗನನ್ನು ಬಹಳ ಪ್ರೀತಿಯಿಂದ ಬೆಳೆಸಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಕೈ ತುಂಬಾ ಹಣ ಸಿಕ್ಕುತ್ತಿದ್ದರಿಂದ ಸೆಂಟ್‌ಜಾನ್ಸ್ ಪ್ರೌಢಶಾಲೆಯಲ್ಲಿ ಓದುವ ಹೊತ್ತಿಗಾಗಲೇ ತಿಮ್ಮದಾಸನ ಮಗ ಕೇಶವ ಚಟದಾಸನಾಗಿದ್ದ. ಸಿಗರೇಟ್, ಕುಡಿತ, ಇಸ್ಪೀಟು, ಹೆಂಗಸರ ಖಯಾಲಿ ಎಲ್ಲವೂ ಇದ್ದ ಕೇಶವ ದಾರಿ ತಪ್ಪಿದ್ದ. ಅಪ್ಪ ಸತ್ತ ನಂತರ ತಾನೇ ಬಡ್ಡಿದಂಧೆಗೆ ಧುಮುಕಿ ಮತ್ತಷ್ಟು ಕೆಟ್ಟ ಹೆಸರನ್ನು ಸಂಪಾದಿಸಿದ್ದ. ಬಡ್ಡಿ ಹಣ ಕೊಡದ ಕಾರಣಕ್ಕೆ ಹೆಂಗಸರ ರಾಶಿ ಪ್ರವೇಶಿಸಿದ್ದರಿಂದ ಗಲಾಟೆ ನಡೆದು ಪೂರ್ವ ಪೊಲೀಸ್ ಠಾಣೆಯ ಎಸ್‌ಐ ವೆಂಕಟೇಗೌಡ ಒಂದೆರಡು ಬಾರಿ ಕೇಶವನನ್ನು ಠಾಣೆಗೆ ಕರೆಸಿ ಎಚ್ಚರಿಕೆ ನೀಡಿ ಕಳುಹಿಸಿದ್ದರು.

ತನ್ನಲ್ಲಿದ್ದ ಹಣದ ಮದದಿಂದ ಎಷ್ಟೇ ಖರ್ಚಾದರೂ ಸರಿ ಸಂತೋಷ್, ಮಹೇಶ್, ವಿಜಿಗೊಂದು ಗತಿ ಕಾಣಿಸ್ತೀನಿ ಅಂತ ಹೇಳಿಕೊಂಡು ಕೇಶವ ತಿರುಗುತ್ತಿದ್ದ. ಕೇಶವ ನಿಮ್ಮ ಕೊಲೆಗೆ ಸ್ಕೆಚ್ ಹಾಕಿದ್ದಾನೆಂದು ಹಲವರು ಹೇಳಿದ್ದರೂ ಸಂತೋಷ, ಮಹೇಶ, ವಿಜಿ ಅದನ್ನು 'ಸೀರಿಯಸ್ಸಾಗಿ ತೆಗೆದುಕೊಂಡಿರಲಿಲ್ಲ. ಮಹೇಶ್ ಮಾಂಡವ್ಯ ಕಾಲೇಜಿನಲ್ಲಿ ಬಿಬಿಎಂ ಓದುತ್ತಾ ತನ್ನ ಪಾಡಿಗೆ ತಾನಿದ್ದ. ಇನ್ನು ಸಂತೋಷ್ ಮಾಜಿ ರೌಡಿ ಹಾಲಹಳ್ಳಿಯ ಇಸ್ಪೀಟು ಆನಂದನ ಕಾರು ಡ್ರೈವರ್ ಆಗಿ ಕೆಲಸ ಮಾಡಿಕೊಂಡಿದ್ದ. ವಿಜಯ್‌ಕುಮಾರ್ ಊರಿನಲ್ಲಿದ್ದ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದ. ಈ ಮಧ್ಯೆ ಕೇಶವನ ಗ್ಯಾಂಗ್ ಮಹೇಶನ ಮೇಲೆ ಚಾಕುವಿನಿಂದ ಹಲ್ಲೆ ಮಾಡಿತ್ತು. ಈ ಬಗ್ಗೆಯೂ ಕೇಸು ದಾಖಲಾಗಿ ಕೋರ್ಟ್‌ನಲ್ಲಿ ನಡೆಯುತ್ತಿತ್ತು. ಮಹೇಶನ ಮೇಲೆ ಹಲ್ಲೆ ನಡೆದ ನಂತರ ಎಚ್ಚೆತ್ತ ಸಂತೋಷ್ ಅಲಿಯಾಸ್ ಬತಾಸ್ 'ನಮ್ಮಿಬ್ಬರ ಮೇಲೂ ಕೇಸು ಇದೆ. ನಾವಿಬ್ಬರೂ ದ್ವೇಷ ಮರೆತು ಪರಸ್ಪರ ರಾಜಿ ಮಾಡಿಕೊಳ್ಳೋಣ' ಎಂದು ಕೇಶವನಿಗೆ ಹೇಳಿದ್ದ. ಆದರೂ ಕೇಶವ ಮಾತ್ರ 'ಸಾಧ್ಯವಿಲ್ಲ, ನಿಮಗೆಲ್ಲ ಒಂದು ಗತಿ ಕಾಣಿಸ್ತೀನಿ' ಅಂತ ಖಡಕ್ಕಾಗಿ ಹೇಳಿಬಿಟ್ಟಿದ್ದ. ಕೊನೆಗೆ ಕೆಲ ಮಾಜಿ ರೌಡಿಗಳು ಇಬ್ಬರಿಗೂ ಉಪದೇಶ ಮಾಡಿ ರಾಜಿಯಾಗುವಂತೆ ಹೇಳಿದ್ದರಿಂದ ರಾಜಿಗೆ ಕೇಶವ ಒಪ್ಪಿದ್ದ. ಆದರೂ ಸಂತೋಷ್, ಮಹೇಶ್ ಮತ್ತು ವಿಜಯ್ ಕೇಶವನ ಮಾತನ್ನು ನಂಬಲಿಲ್ಲ. 'ಅವನ ಬಳಿ ದುಡ್ಡಿದೆ. ನಿಮ್ಮ ಕೊಲೆಗೆ ಅವನು ಸ್ಕೆಚ್ ಹಾಕಿದ್ದಾನೆ' ಅಂತೆಲ್ಲಾ ಸುತ್ತಲಿನವರ ಮಾತು ಕೇಳಿದ ಸಂತೋಷ ಕೊನೆಗೊಂದು ನಿರ್ಧಾರಕ್ಕೆ ಬಂದು ಬಿಟ್ಟ. ಹೇಗಾದರೂ ಕೇಶವನನ್ನು ನಂಬಿಸಿ ಕರೆತಂದು ಕುತ್ತಿಗೆ ಕುಯ್ಯಬೇಕು ಅಂತ ಸ್ಕೆಚ್ ಸಿದ್ಧಮಾಡಿದ. ಇದಕ್ಕೆ ಸ್ನೇಹಿತರಾದ ಮಹೇಶ್ ಹಾಗೂ ವಿಜಿ ಸಾಥ್ ಕೊಟ್ಟರು.



ಪಿಎಸ್‌ಐ ಲೋಕೇಶ್

ನಂಬಿಸಿ ಕತ್ತು ಕುಯ್ದರು

ಅದರಂತೆ ಕೇಶವನ ಕೊಲೆಗೆ ಮುಹೂರ್ತವಿಟ್ಟ ಸಂತೋಷ್ ಅದಕ್ಕಾಗಿ ಪೂರ್ವ ತಯಾರಿ ಮಾಡಿಕೊಂಡ. ಅಕ್ಟೋಬರ್ 16ರ ಬೆಳಗ್ಗೆ ಕೇಶವನ ಮೊಬೈಲ್‌ಗೆ ಕರೆಮಾಡಿದ ಸಂತೋಷ್ ತನ್ನ ಮನೆಗೆ ಬರುವಂತೆ ಕರೆದ. ರಾಜಿಗೆ ಕರೆದು ನಂಬಿಸಿ ಕೊಂದು ಹಾಕಿರುವ ಸಾಕಷ್ಟು ನಿದರ್ಶನಗಳು ಭೂಗತ ಲೋಕದಲ್ಲಿ ಇದ್ದರೂ ಹುಂಬ ಕೇಶವ ಅಂದು ಯಾಮಾರಿ ಬಿಟ್ಟ. ಸಂತೋಷ್ ಮಾತನಾಡಲು ತನ್ನ ಮನೆಗೆ ಕರೆದಿದ್ದರಿಂದ ತನಗೇನೂ ಅಪಾಯವಿಲ್ಲವೆಂದು ನಂಬಿದ ಕೇಶವ ಬೆಳಗ್ಗೆ 8ರ ವೇಳೆಗೆ ತನ್ನದೇ ಮನೆಯಿಂದ ಮೂರು ಕ್ರಾಸ್ ದೂರದಲ್ಲಿರುವ ಸಂತೋಷ್ ಮನೆಗೆ ಹೋದ. ಕೇಶವನ ಹತ್ಯೆಗೆ ಮೊದಲೇ ಪ್ಲಾನ್ ಮಾಡಿಕೊಂಡಿದ್ದರಿಂದ ಸಂತೋಷ್ ತನ್ನ ತಾಯಿಯನ್ನು ವೈದ್ಯರ ಬಳಿ ಚೆಕಪ್‌ಗೆಂದು ಅಣ್ಣನ ಜೊತೆ ಬೆಂಗಳೂರಿಗೆ ಕಳುಹಿಸಿ ತಾನೊಬ್ಬನೇ ಮನೆಯಲ್ಲಿ ಉಳಿದುಕೊಂಡಿದ್ದ. ಸಂತೋಷನ ಮನೆಗೆ ಕೇಶವ ಬಂದಾಗ ಅಲ್ಲಿ ಪೂರ್ವ ತಯಾರಿಯಂತೆ ಮೊದಲೇ ಮಹೇಶ್ ಹಾಗೂ ವಿಜಯಕುಮಾರ್ ಡ್ರಾಗನ್ ಹಾಗೂ ಚಾಕು ಸಿದ್ಧಪಡಿಸಿಕೊಂಡು ಕೇಶವನ ಕತ್ತು ಕುಯ್ಯಲು ರೆಡಿಯಾಗಿದ್ದರು. ಇದ್ಯಾವುದನ್ನು ಅರಿಯದ ಕೇಶವ ಮಾತುಕತೆಗೆ ಮುಂದಾಗಿದ್ದಾನೆ. ಈ ಹಂತದಲ್ಲಿ ಸಂತೋಷ್ ಹಾಗೂ ಕೇಶವನ ಮಧ್ಯೆ ಸಣ್ಣದಾಗಿ ಗಲಾಟೆ ಆಗಿದೆ. ಕೇಶವನ ಕೊಲೆಗೆ ಹಾಕಿದ್ದ ಪಕ್ಕಾ ಸ್ಕೆಚ್‌ನಂತೆ ರೂಮಿನಲ್ಲಿದ್ದ ಮಹೇಶ್ ಹಾಗೂ ವಿಜಯ್ ಕುಮಾರ್ ಬಂದ ಬಂದವರೇ ಕೇಶವನ ಕತ್ತನ್ನು ಹಿಂದಿನಿಂದ ಲಾಕ್ ಮಾಡಿ ಕುರಿಯನ್ನು ಹಲಾಲ್ ಮಾಡಿದಂತೆ ಕುತ್ತಿಗೆಯನ್ನು ಬರ್ಬರವಾಗಿ ಕುಯ್ದಿದ್ದಾರೆ. ಎದೆ, ಹೊಟ್ಟೆ ಭಾಗಕ್ಕೆ 10ರಿಂದ 15 ಕಡೆ ಚಾಕು ಹಾಗೂ ಡ್ರ್ಯಾಗನ್‌ನಿಂದ ಸಂತೋಷ್, ವಿಜಯ್ ಮತ್ತು ಮಹೇಶ್ ಇರಿದಿದ್ದಾರೆ. ಕೇಶವ ಸತ್ತದ್ದನ್ನು ಖಚಿತಪಡಿಸಿಕೊಂಡ ನಂತರ ಆತನ ಶವವನ್ನು ಬೆಡ್‌ಶೀಟ್‌ನಲ್ಲಿ ಸುತ್ತಿ ಮಂಚದ ಕೆಳಗೆ ಇಟ್ಟಿದ್ದಾರೆ. ರಕ್ತಸಿಕ್ತವಾಗಿದ್ದ ಮನೆಯನ್ನು ಕ್ಲೀನ್ ಮಾಡಿ ನಂತರ ಕೇಶವನ ಹೆಣವನ್ನು ಸಾಗಿಸಲು ತೀರ್ಮಾನಿಸಿದ್ದಾರೆ. ಡ್ರೈವರ್ ಕೆಲಸ ಮಾಡುತ್ತಿದ್ದ ಸಂತೋಷ್ ತನಗೆ ಪರಿಚಯವಿದ್ದ ಶಿವಣ್ಣ ಎಂಬುವರ ಬಳಿಗೆ ಹೋಗಿ ತನ್ನ ತಾಯಿಗೆ ಹುಷಾರಿಲ್ಲ ಬೆಂಗಳೂರಿಗೆ ಕರೆದುಕೊಂಡು ಹೋಗಬೇಕು ಎಂದು ಸುಳ್ಳು ಹೇಳಿ ಮಾರುತಿ ವ್ಯಾಗನಾರ್ ಕಾರನ್ನು ಪಡೆದಿದ್ದಾನೆ.

ಕೇಶವನ ಹತ್ಯೆಗೆ ಬಳಸಿದ್ದ ಚಾಕು, ಡ್ರ್ಯಾಗನ್ ಅನ್ನು ಹೆಬ್ಬಾಳಕ್ಕೆ ಎಸೆದು ಕತ್ತಲಾಗುವವರೆಗೆ ಕಾದ ಮೂವರು ಹಂತಕರು ರಾತ್ರಿಯಾಗುತ್ತಿದ್ದಂತೆ ಬೆಡ್‌ಶೀಟ್‌ನಲ್ಲಿ ಸುತ್ತಿದ್ದ ಕೇಶವನ ಶವವನ್ನು ಕಾರಿಗೆ ಹಾಕಿಕೊಂಡು ಮಂಡ್ಯದ ಬನ್ನೂರು ರಸ್ತೆಗೆ ಬಂದಿದ್ದಾರೆ. ಬೆಳಗ್ಗೆಯಿಂದ ನೀರನ್ನೂ ಕುಡಿಯದೆ ಇದ್ದ ಮೂವರು ಹಂತಕರು ಬಿರಿಯಾನಿ ಕಟ್ಟಿಸಿಕೊಂಡು ಬನ್ನೂರು ರಸ್ತೆಗೆ ತೆರಳಿ ಬೇವಿನಹಳ್ಳಿ-ಕಿರಗಂದೂರು ಬಳಿ ಇರುವ ವಿಷಕಂಠ ಎಂಬುವರ ಜಮೀನಿನ ಪಕ್ಕದ ಸಣ್ಣ ಕಾಲುವೆಯಲ್ಲಿ ಕೇಶವನ ಶವವನ್ನು ಎಸೆದಿದ್ದಾರೆ. ಶವ ಎಸೆದ 10 ಅಡಿ ದೂರದಲ್ಲಿಯೇ ರಕ್ತ ಸಿಕ್ತ ಬೆಡ್‌ಶೀಟ್ ಹಾಗೂ ಬಟ್ಟೆಗಳನ್ನು ಬೆಂಕಿ ಹಚ್ಚಿ ಸುಟ್ಟಿದ್ದಾರೆ. ನಂತರ ಅಲ್ಲಿಂದ ಕಿರುಗಾವಲು ರಸ್ತೆಗೆ ತೆರಳಿ ಮಂಗಲ ಗ್ರಾಮದ ಬಳಿ ಬಿರಿಯಾನಿ ತಿಂದು ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿ ಮನೆ ಸೇರಿಕೊಂಡಿದ್ದಾರೆ.

ಬೆಳಗ್ಗೆ ಬೇವಿನಹಳ್ಳಿ ಗ್ರಾಮದ ಜನ ಗದ್ದೆಯತ್ತ ಹೋಗುವಾಗ ಕಾಲುವೆಯಲ್ಲಿ ಬಿದ್ದಿದ್ದ ಶವವನ್ನು ನೋಡಿ ಮಂಡ್ಯ ಗ್ರಾಮಾಂತರ ಠಾಣೆಗೆ ವಿಷಯ ಮುಟ್ಟಿಸಿದ್ದಾರೆ. ಸ್ಥಳಕ್ಕೆ ಬಂದ ಪಿಎಸ್‌ಐ ಲೋಕೇಶ್, ಎಸ್‌ಐ ಬಿ.ಎಸ್.ಶಿವರುದ್ರ ಶವವನ್ನು ಜಿಲ್ಲಾಸ್ಪತ್ರೆಗೆ ತಂದು ಪೋಸ್ಟ್ ಮಾರ್ಟಮ್ ಮಾಡಿಸಿ ತನಿಖೆಗೆ ಇಳಿದಿದ್ದಾರೆ.

ಸುಳಿವು ನೀಡಿದ ಬೀಗದ ಕೀ

ಕೊಲೆಯಾದ ಕೇಶವನಿಗೆ ಹುಡುಗಿಯರ ಶೋಕಿ ಇದ್ದುದ್ದರಿಂದ ಅದೇ ಕಾರಣಕ್ಕೆ ಈತನ ಕೊಲೆಯಾಗಿರಬಹುದೆಂದು ಪೊಲೀಸರು ಭಾವಿಸಲಿ ಎಂಬುದು ಹಂತಕರ ಆಲೋಚನೆಯಾಗಿತ್ತು. ಅದಕ್ಕಾಗಿ ಸಂತೋಷ್ ತನ್ನ ತಾಯಿ ಬೆಂಗಳೂರಿಗೆ ಹೋಗಿದ್ದಾರೆ ಎಂದು ಅಕ್ಕಪಕ್ಕದವರಿಗೆ ತಿಳಿಸಿ ಹೊಸದೊಂದು ಬೀಗವನ್ನು ತಂದು ಬಾಗಿಲಿಗೆ ಹಾಕಿದ್ದ. ಕೇಶವನ ಕೊಲೆಯಾದ ನಂತರವೂ ಮನೆ ಬೀಗ ಹಾಕಿದಂತೆಯೇ ಇತ್ತು. ಹಿಂಬಾಗಿಲ ಮೂಲಕವೇ ಶವವನ್ನು ಸಾಗಿಸಿದ ಸಂತೋಷ್ ತಾನು ಅಂದು ಊರಲ್ಲಿಯೇ ಇರಲಿಲ್ಲವೆಂದು ಅಕ್ಕಪಕ್ಕದವರನ್ನು ನಂಬಿಸಿದ್ದ. ಆದರೆ ಕೇಶವನ ಶವವಿದ್ದ ಸ್ಥಳದಲ್ಲಿ ಸಿಕ್ಕ ಬೀಗದ ಕೀ ಸಂತೋಷನೇ ಹಂತಕನೆಂದು ಖಚಿತ ಸಾಕ್ಷ್ಯ ನುಡಿದಿತ್ತು.

ಮಂಡ್ಯ ಗ್ರಾಮಾಂತರ ಠಾಣೆಯ ಪಿಎಸ್‌ಐ ಲೋಕೇಶ್ ಸಾಕಷ್ಟು ಉತ್ಸಾಹಿ ಹಾಗೂ ಖಡಕ್ ಅಧಿಕಾರಿಯೆಂದು ಹೆಸರು ಮಾಡಿದ್ದಾರೆ. ಅವರ ಕಾರ್ಯದಕ್ಷತೆಯ ಬಗ್ಗೆ ಎರಡು ಮಾತಿಲ್ಲ. ಕೊಲೆಗಾರ ಎಷ್ಟೇ ಚಾಣಾಕ್ಷನಾದರೂ ಏನಾದರೊಂದು ಸಾಕ್ಷಿ ಬಿಟ್ಟಿರುತ್ತಾನೆ ಎಂಬಂತೆ ತನಿಖೆಗಿಳಿದ ಪಿಎಸ್‌ಐ ಲೋಕೇಶ್‌ರಿಗೆ ಕೊಲೆಯಾದ ಕೇಶವನ ಮೃತದೇಹ ಸಿಕ್ಕ 10 ಅಡಿ ದೂರದಲ್ಲಿ ಹಂತಕರು ಬಟ್ಟೆಗಳನ್ನು ಸುಟ್ಟಿದ್ದ ಜಾಗದಲ್ಲಿ ಬೀಗದ ಕೀ ಒಂದು ಸಿಕ್ಕಿತ್ತು. ಈ ಬೀಗದ ಕೈಯನ್ನು ಆಧಾರವಾಗಿಟ್ಟುಕೊಂಡು ತನಿಖೆಗೆ ಇಳಿದ ಪಿಎಸ್‌ಐ ಲೋಕೇಶ್ ಮೊದಲು ಕೇಶವನ ಜೊತೆ ವೈರತ್ವ ಹೊಂದಿದ್ದವರ ಬಗ್ಗೆ ವಿಚಾರಿಸಿದರು. ಆಗ ಅವರಿಗೆ ಕೇಶವನ ವಿರೋಧಿಗಳಾದ ಸಂತೋಷ್, ಮಹೇಶ್, ವಿಜಯ್ ಎಂಬುವರ ಬಗ್ಗೆ ಮಾಹಿತಿ ದೊರಕಿತು. ಅಲ್ಲದೆ ಈ ಮೂವರು ಹಂತಕರು ಊರು ಬಿಟ್ಟಿರುವ ಮಾಹಿತಿಯನ್ನು ಕಲೆ ಹಾಕಿದ ಪಿಎಸ್‌ಐ ಲೋಕೇಶ್ ಕಡೆಗೆ ಮೂವರ ಮನೆಗಳನ್ನು ನೋಡಿದಾಗ ಸಂತೋಷನ ಮನೆಗೆ ಬೀಗ ಹಾಕಿರುವುದು ತಿಳಿಯಿತು.

ಆಶ್ಚರ್ಯದ ಸಂಗತಿ ಎಂದರೆ ಕೇಶವನ ಮೃತದೇಹದ ಬಳಿ ದೊರೆತ ಬೀಗದ ಕೀನಿಂದ ಸಂತೋಷನ ಮನೆ ಓಪನ್ ಮಾಡಿದ ಪಿಎಸ್‌ಐ ಲೋಕೇಶ್ ಹಾಗೂ ಎಸ್‌ಐ ಶಿವರುದ್ರರಿಗೆ ಕೇಶವನನ್ನು ಇಲ್ಲೇ ಕೊಲೆ ಮಾಡಿ ಬೇವಿನಹಳ್ಳಿ ತಂದು ಎಸೆದಿರುವುದು ಪಕ್ಕಾ ಆಯಿತು. ಅದರಂತೆ ಮೂವರು ಹಂತಕರ ಪತ್ತೆಗೆ ಬಲೆ ಬೀಸಿದ ಪಿಎಸ್‌ಐ ಲೋಕೇಶ್ ಹಾಗೂ ಎಸ್‌ಐ ಶಿವರುದ್ರರಿಗೆ 5 ದಿನಗಳ ಹಿಂದಷ್ಟೇ ಮದ್ದೂರು ತಾಲ್ಲೂಕಿನ ಭಾರತೀನಗರ ವ್ಯಾಪ್ತಿಯಲ್ಲಿ ಸಂತೋಷ ಅಲಿಯಾಸ್ ಬತಾಸ್ ಹಾಗೂ ಮಹೇಶ್ ಅಲಿಯಾಸ್ ಚಪಾತಿ ಸಿಕ್ಕಿ ಬಿದ್ದರು. ಆದರೆ ಇನ್ನೊಬ್ಬ ಆರೋಪಿ ವಿಜಯ್‌ಕುಮಾರ್ ಸಿಗಲಿಲ್ಲ. ಅಕ್ಟೋಬರ್ 28ರಂದು ಆರೋಪಿ ವಿಜಯಕುಮಾರ್ ಸಂಬಂಧಿಕರ ಮೊಬೈಲ್‌ಗೆ ಕಿವಿಹಚ್ಚಿ ಕುಳಿತಿದ್ದ ಪಿಎಸ್‌ಐ ಲೋಕೇಶ್‌ಗೆ ವಿಜಯಕುಮಾರ್ ಕನಕಪುರ ತಾಲ್ಲೂಕಿನ ಸಾತನೂರಿನಲ್ಲಿ ತನ್ನ ಸಂಬಂಧಿಕರ ಮನೆಯಲ್ಲಿ ಅಡಗಿದ್ದು ಗೊತ್ತಾಯಿತು. ವಿಜಯ್‌ಕುಮಾರ್‌ನನ್ನು ಎತ್ತಾಕಿಕೊಂಡು ಬಂದು ಮೂವರಿಗೂ ಜೈಲಿನ ದಾರಿ ತೋರಿಸಿದರು.

ಕೋಟ್ಯಾಂತರ ಆಸ್ತಿಗೆ ವಾರಸುದಾರ, ತಂದೆ, ತಾಯಿ, ಅಕ್ಕಂದಿರ ಜೊತೆ ಸಂತೋಷದಿಂದ ಬಾಳಬೇಕಾದ ಕೇಶವ ರೌಡಿಸಂ ಆಕರ್ಷಣೆಗೆ ಬಿದ್ದು ದುಶ್ಚಟಗಳ ದಾಸನಾಗಿ 28ನೇ ವಯಸ್ಸಿಗೆ ತನ್ನ ಅಂತ್ಯವನ್ನು ಕಂಡುಕೊಂಡಿದ್ದಾನೆ. ಹಾಗೆಯೇ ತಮ್ಮ ಕೊಲೆಗೆ ಕೇಶವ ಸ್ಕೆಚ್ ಹಾಕಿದ್ದಾನೆಂದು ಗಾಳಿ ಸುದ್ದಿಗಳನ್ನು ನಂಬಿದ ಸಂತೋಷ, ಮಹೇಶ ಹಾಗೂ ವಿಜಯಕುಮಾರ್ ಸ್ನೇಹಿತ ಕೇಶವನನ್ನು ನಂಬಿಸಿ ಕರೆತಂದು ಬರ್ಬರವಾಗಿ ಕತ್ತು ಕುಯ್ದು ಜೈಲು ಪಾಲಾಗಿದ್ದಾರೆ. ರೌಡಿಸಂನ ಮೋಹಕ್ಕೆ ಶರಣಾಗಿ ಅಂತ್ಯಕಾಣುವ, ಸುಂದರ ಭವಿಷ್ಯವನ್ನು ಹಾಳುಮಾಡಿಕೊಳ್ಳುವ ಯುವಜನರನ್ನು ಪೊಲೀಸ್ ಇಲಾಖೆ ಜಾಗೃತಗೊಳಿಸಬೇಕಿದೆ.

● ಮಂಡ್ಯ ನಾಗೇಶ್


ಶಿವಯೋಗಿ ಮಂದಿರ

ಮೂರು ಸಾವಿರ ಮಠ ಹತ್ತು ಕೋಟಿಗೆ ಪೀಠ ಮಾರಾಟ

ನಾಡಿನ ನೂರಾರು ಲಿಂಗಾಯತರಿಗೆ ಉತ್ತಮ ಶಿಕ್ಷಣ ಕೊಡುವ ಮೂಲಕ ಬದುಕನ್ನು ಕಟ್ಟಿಕೊಟ್ಟಿದ್ದ ಹುಬ್ಬಳ್ಳಿಯ ಮೂರುಸಾವಿರ ಮಠ ಇಂದು ಅಕ್ಷರಶಃ ತನ್ನ ಜೀವ ಕಳೆದುಕೊಂಡಿದೆ. ಹಾಲಿ ಸ್ವಾಮಿ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಠದ ಮರ್ಯಾದೆಯನ್ನ ಬೀದಿಗೆ ತಂದು ನಿಲ್ಲಿಸಿದ್ದಾನೆ. ತನ್ನ ತೀಟೆಗಾಗಿ ಮಾಡಿಕೊಂಡ ಸಾಲದ ಭಾರದಿಂದ ಮುಕ್ತನಾಗಲು ಉತ್ತರಾಧಿಕಾರಿ ಪಟ್ಟವನ್ನು ಹತ್ತು ಕೋಟಿಗೆ ಮಾರಿಕೊಂಡಿದ್ದಾನೆ ಎಂಬ ರೂಮರ್ ಇಡೀ ಉತ್ತರ ಕರ್ನಾಟಕದ ಲಿಂಗಾಯತ ಭಕ್ತರನ್ನು ಬೆಚ್ಚಿ ಬೀಳಿಸಿದೆ.

ಹೌದು. ಮೂರುಸಾವಿರ ಮಠಕ್ಕೆ ಮೂರೂ ಬಿಟ್ಟು ನಿಂತ ಬಾಲೆಹೊಸೂರಿನ ದಿಂಗಾಲೇಶ್ವರ ಸ್ವಾಮಿ ಉತ್ತರಾಧಿಕಾರಿಯಾಗಿ ವಕ್ಕರಿಸುವುದು ಬಹುತೇಕ ನಿಶ್ಚಿತ. ಅದರಂತೆ ಪೀಠದಲ್ಲಿ ಕುಳಿತು ಮಠದಲ್ಲಿ ದೋ ನಂಬರ್ ದಂಧೆಗಳಿಗೂ ಚಾಲನೆ ನೀಡುವುದು ಕೂಡ ಅಷ್ಟೇ ಸತ್ಯ.

ಗುರುಸಿದ್ಧ ರಾಜಯೋಗೀಂದ್ರ ತನ್ನ ಮುಂದಿನ ಉತ್ತರಾಧಿಕಾರಿಯನ್ನಾಗಿ ತನ್ನ ಖಾಸಾ ಗೆಳೆಯ ದಿಂಗಾಲಿಯನ್ನು ಮಾಡುವ ನಿರ್ಧಾರ ಪ್ರಕಟಿಸಿದ್ದಾನೆ. ಹಿಂದಿನ ಜಗದ್ಗುರು ಮೂಜಗಂ ಜೀವ ಬಿಡುವ ಮುನ್ನ ಬರೆದಿಟ್ಟ ಪತ್ರಕ್ಕೂ ಕಿಮ್ಮತ್ತು ನೀಡದೆ ಹಾಗೂ ಅವರಿಗೆ ನೀಡಿದ್ದ ಭಾಷೆಯನ್ನು ಮರೆತಿರುವ ಗುರುಸಿದ್ಧ ಯಾರು ಏನೇ ಅಂದರೂ ಸೈ.. ಬೈದರೂ ಸೈ.. ಬೇರೆ ತರಹದ ಮಂಗಳಾರತಿ ಮಾಡಿದರೂ ಸೈ ನಾ ಮಾತ್ರ ದಿಂಗಾಲಿಗೆ ಪಟ್ಟ ಕಟ್ಟುವುದು ಗ್ಯಾರಂಟಿ ಎಂದು ಮಠದ ಹೈ ಪವರ್ ಕಮಿಟಿಯ ಪವರ್ ಇಲ್ಲದ ಸದಸ್ಯರ ಮುಂದೆ ಖಡಕ್ಕಾಗಿ ಹೇಳಿ ಮತ್ತೆ ಹಾನಗಲ್ ಮಠಕ್ಕೆ ವಿಶಾಂತ್ರಿಗೆ ತೆರಳಿದ್ದಾನೆ.

ಮಠದ ಪೀಠವನ್ನು ಮಾರಿಕೊಂಡ ಉದಾಹರಣೆಗಳು ನಮ್ಮ ನಾಡಿನಲ್ಲಿ ಬಹಳ ವಿರಳ ಹಾಗೂ ಆ ರೀತಿ ವ್ಯವಹಾರ ಕುದುರಿಸಿಕೊಂಡು ಪಟ್ಟಕ್ಕೆ ಬಂದ ಸ್ವಾಮಿಗಳು ಆ ಪೀಠದಲ್ಲಿ ಬಹಳ ದಿನ ಉಳಿದಿಲ್ಲ. ಅಂತಹ ಮಠಗಳ ಪಟ್ಟಿಯಲ್ಲಿ ಉತ್ತರ ಕರ್ನಾಟಕದ ಪ್ರತಿಷ್ಠಿತ ಮೂರುಸಾವಿರ ಮಠ ಕೂಡಾ ಸದ್ಯದಲ್ಲಿ ಸೇರ್ಪಡೆಯಾಗುವಂತಹ ಸ್ಥಿತಿಯನ್ನು ಹಾಲಿ ಸ್ವಾಮಿಗಳು ತಂದಿಡುತ್ತಿರುವುದು ನಿಜಕ್ಕೂ ಈ ಭಾಗದ ಲಿಂಗಾಯತ ಭಕ್ತರ ದುರ್ದೈವ.

ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ರಂಗದಲ್ಲೂ ತನ್ನದೇ ಆದ ಸ್ಥಾನ ಹೊಂದಿರುವ ಮೂರು ಸಾವಿರ ಮಠ ಎಷ್ಟೇ ವಿವಾದಗಳಿಂದ ಸುತ್ತಿಕೊಂಡಿದ್ದರೂ ಅದನ್ನೆಲ್ಲಾ ಹಿಂದಿನ ಸ್ವಾಮಿ ಮೂಜಗಂ ಮಠದ ಅಂಗಳದಲ್ಲೇ ಅವುಗಳಿಗೆಲ್ಲಾ ಪರಿಹಾರ ಕಂಡುಕೊಳ್ಳುತ್ತಿದ್ದರು. ಅವರ ಮರಣದ ನಂತರ ಅವರ ಸ್ಥಾನಕ್ಕೆ ವಕ್ಕರಿಸಿದ ಗುರುಸಿದ್ಧ ತಾನು ಮಾಡುವ ಎಲ್ಲಾ ಹೊಲಸು ಕೆಲಸಗಳಿಗೆ ಮಠದ ಹೆಸರನ್ನು ಬಳಸಿಕೊಂಡು, ಇಲ್ಲದ ವಿವಾದಗಳನ್ನು ಮೈಮೇಲೆಳೆದುಕೊಂಡು, ಮಠದ ಮರ್ಯಾದೆಯನ್ನು ಬೀದಿಗೆ ತಂದು ಮೂರು ಕಾಸಿಗೆ ಹರಾಜು ಹಾಕಿದ್ದಲ್ಲದೆ, ಲಕ್ಷಾಂತರ ಭಕ್ತರು ಭಕ್ತಿಯಿಂದ ಗೌರವಿಸುವ ಮಠದ ಪೀಠವನ್ನು ಮಾರಿಕೊಳ್ಳುತ್ತಿದ್ದಾರೆ.

ಜನರ ಮುಂದೆ ಕೇವಲ ಉತ್ತರಾಧಿಕಾರಿ ನೇಮಕ ಎಂದು ಹೇಳುತ್ತಿದ್ದರೂ ಅಸಲಿಗೆ ಒಳಗೊಳಗೆ ನಡೆದಿರುವುದು ಬರೋಬ್ಬರಿ ಹತ್ತು ಕೋಟಿ ರೂಪಾಯಿ ಡೀಲ್. ಅದರಲ್ಲಿ ಟೋಕನ್ ಅಡ್ವಾನ್ಸ್ ಪಡೆದಿರುವ ಸ್ವಾಮಿ ಪೂರ್ತಿ ಹಣ ಬಂದ ನಂತರ ಪಟ್ಟ ಕಟ್ಟುವ ಸ್ಕೆಚ್ ಇಟ್ಟಿರುವುದು ಸದ್ಯ ರಹಸ್ಯವಾಗಿ ಉಳಿದಿಲ್ಲ.

ಮೂಜಗಂ ಆತ್ಮ ಕೊರಗುತ್ತಿದೆ

ಮೂರುಸಾವಿರ ಮಠದ ಹಿಂದಿನ ಜಗದ್ಗುರು ಡಾ. ಗಂಗಾಧರ ಸ್ವಾಮೀಜಿ ಆತ್ಮ ಮಠದ ಅಂಗಳದಲ್ಲಿ ಇರುವ ಗದ್ದುಗೆಯಲ್ಲಿ ಕಣ್ಣೀರಿಡುತ್ತಿರಬಹುದು. ಮಠವನ್ನು ಕೇವಲ ಧಾರ್ಮಿಕ ಕೇಂದ್ರವನ್ನಾಗಿಸದೆ, ಸೌಹಾರ್ದದ ಕೇಂದ್ರವನ್ನಾಗಿ ಹಲವಾರು ರಂಗಗಳಲ್ಲಿ ಮಠವನ್ನು ತೊಡಗಿಸುವ ಮೂಲಕ ಬೆಳಕಿಗೆ ತಂದ ಪುಣ್ಯ ಜೀವವದು. ಅಂತಹವರ ಉತ್ತರಾಧಿಕಾರಿಯಾಗಿ ಪೀಠಕ್ಕೆ ಬಂದ ಗುರುಸಿದ್ಧ ಮಾಡಿದ ಭಾನಗಡಿ ದಂಧೆಗಳು ಒಂದೆರಡಲ್ಲ. ಪಲ್ಲಂಗ ಪುರಾಣದ ಜೊತೆಗೆ ಮಠದ ಪ್ರಾಪರ್ಟಿಗಳನ್ನು ಸೇಲ್ ಮಾಡಿ ದಿವಾಳಿಗೆ ಹಚ್ಚಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಹಿಂದಿನ ಸ್ವಾಮಿಗಳು ತಮ್ಮ ಅಂತ್ಯಕಾಲದಲ್ಲಿ ಮಠದ ಉತ್ತರಾಧಿಕಾರಿಯನ್ನಾಗಿ ಈತನನ್ನು ನೇಮಿಸುವ ಸಂದರ್ಭದಲ್ಲಿ ಬರೆದ ವಿಲ್ ಕೂಡ ಬಹಳ ವಿಚಿತ್ರವಾಗಿದೆ.

'30-3-1998 ರಲ್ಲಿ ಬರೆಯಲಾದ ವಿಲ್‌ನಲ್ಲಿ ಘಟಪ್ರಭಾದ ಗುಬ್ಬಲ್‌ಗುಡ್ಡ ಶ್ರೀ ಕೆಂಪಯ್ಯ ಸ್ವಾಮಿ ಮಠದ ಮಲ್ಲಿಕಾರ್ಜುನ ಸ್ವಾಮಿಗಳನ್ನು ಅವರ ವಿದ್ಯಾಭ್ಯಾಸ ಮುಗಿದ ನಂತರ ಮೂರು ಸಾವಿರ ಮಠದ ಉತ್ತರಾಧಿಕಾರಿಯನ್ನಾಗಿ ನೇಮಿಸಬೇಕು. ಅಲ್ಲಿಯವರೆಗೂ ಗುರುಸಿದ್ಧ ಸ್ವಾಮಿಗಳು ಮಠದಲ್ಲಿ ಮುಂದುವರೆಯಬೇಕು' ಎಂದು ಹೇಳಲಾಗಿದೆ. ಅಲ್ಲದೆ, 'ಆರೋಗ್ಯ ಸರಿಯಿಲ್ಲದ ಗುರುಸಿದ್ಧ ಸ್ವಾಮಿಗಳು ತೀವ್ರ ಅನಾರೋಗ್ಯಕ್ಕೊಳಗಾದರೆ, ಮಲ್ಲಿಕಾರ್ಜುನ ಸ್ವಾಮಿಗಳು ಪೀಠದಲ್ಲಿ ಮುಂದುವರೆಯಬೇಕು' ಎಂದೂ ನಮೂದಿಸಲಾಗಿದೆ ಎಂದು ವಿಲ್ ಪತ್ರದಲ್ಲಿ ಸಹಿ ಮಾಡಿದ ಅನೇಕ ಸ್ವಾಮಿಗಳು ಹೇಳುತ್ತಿದ್ದಾರೆ. ಆದರೆ, ಹಾಲಿ ಸ್ವಾಮಿಗೆ ಸದ್ಯ ಆ ಪತ್ರದಲ್ಲಿನ ಅಕ್ಷರಗಳು ಕಾಣುತ್ತಿಲ್ಲ, ಸಾಲ ತೀರಿಸಲು ಕೋಟಿಗಟ್ಟಲೆ ಹಣ ಕೊಟ್ಟು ಸಾಲಗಾರನಿಂದ ಬಚಾವ್ ಮಾಡಿದ ಖಾಸಾ ಗೆಳೆಯ ದಿಂಗಾಲಿ ಒಬ್ಬನೇ ಸದ್ಯ ಕಣ್ಮುಂದಿದ್ದಾನೆ. ಆತ ಕೊಟ್ಟ ಹಣದಲ್ಲಿ ಮಾಡಿದ ಸಾಲ ತೀರಿಸಿಕೊಂಡು ಉಳಿದಿದ್ದರಲ್ಲಿ ಮಜಾ ಉಡಾಯಿಸುತ್ತಾ ಹಾನಗಲ್ ಮಠಕ್ಕೆ ಹಾರುವ ಇರಾದೆ ಗುರುಸಿದ್ಧನದ್ದಾಗಿದೆ. ಹೀಗಿರುವಾಗ ಮೂಜಗಂ ಪತ್ರಕ್ಕಾಗಲಿ ಅವರ ಅಂತ್ಯಕಾಲದಲ್ಲಿ ಈತ ಅವರಿಗೆ ಕೊಟ್ಟ ವಚನಕ್ಕಾಗಲಿ ಸದ್ಯ ಕವಡೆ ಕಾಸಿನ ಕಿಮ್ಮತ್ತಿಲ್ಲ. ಮೂಜಗಂ ಕಟ್ಟಿ ಬೆಳೆಸಿದ್ದನ್ನು ಹಾಲಿ ಸ್ವಾಮಿ ಮುಜಗಂ ಹಾಳುಗೆಡವುತ್ತಿದ್ದಾನೆ ಎಂದು ಹುಬ್ಬಳ್ಳಿ ಭಕ್ತರು ಮಠದ ಅಂಗಳದಲ್ಲಿ ನಿಂತು ಬಾಯಿ ಬಡಿದುಕೊಳ್ಳುವಂತಾಗಿದೆ.

ಹತ್ತು ಕೋಟಿಗೆ ಡೀಲ್ ಫಿಕ್ಸ್


ಉತ್ತರಾಧಿಕಾರಿ ಪಟ್ಟವನ್ನು ಗುರುಸಿದ್ಧ ದಿಂಗಾಲೇಶ್ವರನೊಂದಿಗೆ ಹತ್ತು ಕೋಟಿಗೆ ಡೀಲ್ ಫಿಕ್ಸ್ ಮಾಡಿಕೊಂಡಿದ್ದಾನೆ ಎಂಬ ಮಾತುಗಳು ಮಠದ ಅಂಗಳದಲ್ಲಿವೆ. ತಾನು ಮೂರುಸಾವಿರ ಮಠದ ಪೀಠಾಧಿಪತಿಯಾಗುವ ಸಂದರ್ಭದಲ್ಲಿ ತಿಪಟೂರಿನ ರುದ್ರಮುನಿ ಸ್ವಾಮಿಗಳೊಂದಿಗೆ ಇದ್ದ ಉತ್ತರಾಧಿಕಾರಿ ವಿವಾದವನ್ನು ಬಗೆಹರಿಸಿ ಅಲ್ಲಿಯೂ ಒಂದುಕೋಟಿ ಡೀಲ್ ಫಿಕ್ಸ್ ಮಾಡಿ ಆ ಹಣವನ್ನು ಸಾಲದ ರೂಪದಲ್ಲಿ ಬೇರೆಯವರ ಕಡೆಯಿಂದ ತಂದು ರುದ್ರಮುನಿ ಸ್ವಾಮಿಗೆ ಕೊಟ್ಟು ಪೀಠದ ದಾರಿಯನ್ನು ಸುಗಮಗೊಳಿಸಿದ ದಿಂಗಾಲೇಶ್ವರನೇ ಉತ್ತರಾಧಿಕಾರಿ ಎಂದು ಆಗಲೇ ಮಾತು ಕೊಟ್ಟಿದ್ದರಂತೆ.

ಹೀಗಾಗಿ ಕಳೆದ ನಾಲ್ಕೈದು ವರ್ಷಗಳಿಂದ ಬಾಲೆಹೊಸೂರು ಮಠದಿಂದ ಹೊರಬಿದ್ದಿರುವ ದಿಂಗಾಲಿ ಹುಬ್ಬಳ್ಳಿಯಲ್ಲೇ ಹೆಚ್ಚು ಕಾಣಿಸಿಕೊಳ್ಳುತ್ತಿದ್ದಾನೆ. ಕಳೆದ ವರ್ಷ ನಗರದ ನೆಹರು ಮೈದಾನದಲ್ಲಿ ತಿಂಗಳುಗಟ್ಟಲೆ ಜೀವನ ದರ್ಶನ ಎಂಬ ಪ್ರವಚನ ಕಾರ್ಯಕ್ರಮವನ್ನು ನಡೆಸಿ ಪ್ರಚಾರ ಗಿಟ್ಟಿಸಿಕೊಂಡ. ಆಗಿನಿಂದಲೇ ದಿಂಗಾಲಿ ಮೂರುಸಾವಿರ ಮಠಕ್ಕೆ ಒಂದು ಕಾಲಿಟ್ಟ ಎನ್ನುವ ಮಾತುಗ
ಕೇಳಿಬರುತ್ತಿದ್ದವು. ಗುರುಸಿದ್ಧನ ಸಾಲ ಮಾಡಿಕೊ
ಮತ್ತು ಆಸ್ತಿಮಾರುವ ಖಯಾಲಿಯನ್ನು ಅಸ್ತ್ರವನ್ನಾಗಿಸಿಕೊ
ದಿಂಗಾಲಿ ಆಗಾಗ ಹಣ ಕೊಟ್ಟಂತೆ ಮಾಡಿ ಉತ್ತರಾಧಿ
ಪಟ್ಟದ ಹತ್ತಿರಕ್ಕೆ ಬಂದು ಕುಳಿತಿರುವುದಂತೂ ನಿಜ

ಸದ್ಯ ಮಠದ ಅಂಗಳದಿಂದ ಕೇಳಿಬರುತ್ತಿರುವ ರೂ
ನಲ್ಲಿ ಉತ್ತರಾಧಿಕಾರಿ ಪಟ್ಟ ಹತ್ತು ಕೋಟಿಗೆ ಫಿಕ್ಸ್ ಆ
ಆದರಲ್ಲಿ ಮೂರು ಕೋಟಿಯನ್ನು ಈಗಾಗಲೇ ನೀಡಲಾ
ಉಳಿದ ಏಳು ಕೋಟಿ ಹಣವನ್ನು ಅಧಿಕೃತ
ಉತ್ತರಾಧಿಕಾರಿ ಎಂದು ಭಕ್ತರ ಮುಂದೆ ಘೋಷಣೆ ಮಾ
ನಂತರ ಕೊಡುವ ಒಪ್ಪಂದವಾಗಿದೆ.

ಯಾರು ಈ ದಿಂಗಾಲಿ?

ಬಾಲೆಹೊಸೂರಿನ ದಿಂಗಾಲೇಶ್ವರ ಸ್ವಾಮಿಯ
ಯನ್ನು ಕೆದಕುತ್ತಾ ಹೋದರೆ, ಈತ ಸ್ವಾಮಿಯಾಗುವುದ
ಭೂಗತ ಲೋಕದಲ್ಲಿ ಹೆಸರು ಮಾಡಬಹುದಿತ್ತೇ



ದಿಂಗಾ

ಎನ್ನುವ ಸಂಶಯ ಹುಟ್ಟುತ್ತದೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಬೊ
ಎಂಬ ಕುಗ್ರಾಮದಲ್ಲಿ ಒಂದು ಸಾಮಾನ್ಯ ಕುಟುಂ
ಜನಿಸಿದ ದಿಂಗಾಲಿ ಒಂದು ಕಾಲದಲ್ಲಿ ಜಾತ್ರೆ ಸಂ
ಬಜ್ಜಿ ಮಿರ್ಚಿ ಮಾರುತ್ತಿದ್ದ ಗಿರ್ಮಿಟ್ ಗಿರಾಕಿ: ಅ
ತಾನು ಮಾಡಿಕೊಂಡ ಒಂದು ಎಡವಟ್ಟಿನಿಂದಾಗಿ
ಬಿದ್ದು ಸಾಯಲು ಹೊರಟಿದ್ದನಂತೆ. ಇದನ್ನು ಕಂಡ
ತಾಯಿ ಹಾನಗಲ್ ಕುಮಾರ ಸ್ವಾಮಿಗಳು ಸ್ಥಾಪಿ
ಶಿವಯೋಗಿ ಮಂದಿರದಲ್ಲಿ ಏನಾದರೂ
ಮಾಡಿಕೊಂಡು ಉತ್ತಮ ಸಂಸ್ಕಾರ ಪಡೆಯಲಿ
ಬಿಟ್ಟು ಬಂದಿದ್ದರು.

ಅಲ್ಲಿಯೂ ಮಂದಿರದ ದನಗಳನ್ನು ಕಾಯುತ್ತಾ
ಒಂದು ಎಡವಟ್ಟು ಮಾಡಿಕೊಂಡು ಕುಖ್ಯಾತಿಗೆ
ನಂತರದಲ್ಲಿ ಅಲ್ಲಿಯ ಪಾಠಶಾಲೆಯಲ್ಲಿ ಅಲ್ಪ ಸ್ವ
ಕಲಿತು ಕಾವಿ ಧರಿಸಿ ಮಠಗಳನ್ನು ಹುಡು
ಸಂದರ್ಭದಲ್ಲಿ ಹುಬ್ಬಳ್ಳಿಯ ರುದ್ರಾಕ್ಷಿ ಮಠದ
ಸ್ವಾಮೀಜಿ ಬಿಟ್ಟು ಬಂದಿದ್ದ ಬಾಲೆಹೊಸೂರಿನ
ಮೇಲೆ ಕಣ್ಣು ಹಾಕಿದ್ದ. ನಂತರದಲ್ಲಿ ಮುಂ
ಅನ್ನದಾನೇಶ್ವರ ಮಠದ ಸ್ವಾಮಿಗಳಿಗೆ ತನ್ನ
ಮಾತಿನಿಂದ ಪುಸಲಾಯಿಸಿ ಪಟ್ಟ ಗಿಟ್ಟಿಸಿಕೊಂಡ


ಆಗಿನಿಂದಲೇ ಬೇರೆ ಮಠಕ್ಕೆ ಉತ್ತರಾಧಿಕಾ
ಬೇಕೆಂಬ ಹಠ ಇವನಲ್ಲಿ ಪ್ರಾರಂಭವಾಗಿದ್ದು



ಮಲ್ಲಿಕಾರ್ಜುನ ಸ್ವಾಮಿಗಳ ಉತ್ತರಾಧಿಕಾರದ ಪ

...ಲ್ಲಂಗ ಪ್ರಿಯ ದಿಂಗಾಲಿ

...ಪ್ರವಚನದ ಜೊತೆಗೆ ಪ್ರಣಯದಲ್ಲೂ ದಿಂಗಾಲೇಶ್ವರ ...ಮಿಗಳು ತಮ್ಮ ಪವಾಡ ತೋರಿಸಿದ್ದಾರೆ. ಪ್ರವಚನದ ...ವಲ್ಲಿ ದಿಂಗಾಲಿ ಎಲ್ಲೆಲ್ಲಿ ಹೋಗಿದ್ದನೋ ಬಹುತೇಕ ...ಗೆಳತಿಯರನ್ನು ಪರಿಚಯಿಸಿಕೊಂಡಿದ್ದಾನೆ. ಇಂತಹ ...ಂಗ ಪ್ರಿಯ ದಿಂಗಾಲಿ ಹುಬ್ಬಳ್ಳಿ ನೆಹರು ಮೈದಾನದಲ್ಲಿ ...ವನ ದರ್ಶನ ಪ್ರವಚನ ನೀಡುತ್ತಾ ಬದಾಮಿ ನಗರದ ...ಳತಿಯೊಬ್ಬಳಿಗೆ ನಿಜಜೀವನ ದರ್ಶನದ ಪವಾಡ ...ರಿಸಿದ್ದಾನೆ. ಹಳೆ ಗೆಳತಿ ನರಗುಂದ ಮೂಲದ ...ಚಿತ ಪ್ರೇಯಸಿ ಮತ್ತು ಶಿರಾಳಕೊಪ್ಪದ ಭಕ್ತೆಯೊಬ್ಬಳು ...ಗೂ ದಿಂಗಾಲಿಯ ಧ್ಯಾನದಲ್ಲಿ ಮಗ್ನರಾಗಿ ಪಲ್ಲಂಗ ... ಒದಗಿಸುತ್ತಿದ್ದಾರೆ. ಇಂತಹ ಪಲ್ಲಂಗದ ಪುರಾಣಗಳು ...ಗಾಲಿಯ ಪ್ರವಚನ ಪ್ರವಾಸದಲ್ಲಿವೆ.









...ವಲು ಬಲಿಯಾಗಿದ್ದೇ ಈತನನ್ನು ಸ್ವಾಮಿಯನ್ನಾಗಿ ...ಿದ ಮುಂಡರಗಿ ಮಠದ ಅನ್ನದಾನೇಶ್ವರ ಸ್ವಾಮಿಗಳು. ...ಸ್ವಾಮಿಗಳಿಗೆ ಡಾಕ್ಟರೇಟ್ ನೀಡಬೇಕು ಎಂದು ಗಲಾಟೆ ...ಸಿ ಸ್ವಾಮಿಗಳಿಗೆ ಹತ್ತಿರವಾದವನೇ ...ರಾಧಿಕಾರಿಯನ್ನಾಗಿ ನನ್ನನ್ನು ನೇಮಿಸಿ ಎಂದು ...ಪಾಯಿಸತೊಡಗಿದ. ಸ್ವಾಮಿಗಳೂ ಅದಕ್ಕೆ ಸಹಮತ ...ಡಿಸಿದ್ದರಂತೆ. ಆದರೆ, ಆತುರಗೇಡಿಯಾದ ದಿಂಗಾಲಿ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಅನ್ನದಾನೇಶ್ವರ ...ಮಿಗಳಿಗೆ ನಡುರಾತ್ರಿಯಲ್ಲಿ ತಾನೇ ಸಿದ್ಧಪಡಿಸಿದ್ದ ...ರಾಧಿಕಾರಿ ಪತ್ರ ಹಿಡಿದುಕೊಂಡು ಸಹಿ ಮಾಡುವಂತೆ ...ಡ ಹಾಕಿ ಕೊನೆಗೆ ಅವರಿಂದ ಛೀ.. ಥೂ.. ಅಂತಾ ...ಸಿಕೊಂಡು ಏಟು ಬೀಳುವ ಮುನ್ನ ಕಾಲ್ಕಿತ್ತಿದ್ದ. ಆನಂತರ ...ಗ ಹೊಸಳ್ಳಿ ಮಠ, ನಿಡಸೋಸಿ ಮಠಕ್ಕೂ ...ರಾಧಿಕಾರಿಯಾಗಲು ಹೋಗಿ ಅಲ್ಲಿಯೂ ಮಂಗಳಾರತಿ ...ಸಿಕೊಂಡಿದ್ದ. ಸಲೀಸಾಗಿ ಯಾವ ಮಠವೂ ಕೈಗೆ ಸಿಗಲ್ಲ ...ು ಅರಿತುಕೊಂಡ ದಿಂಗಾಲಿ ಪಲ್ಲಂಗ ಮತ್ತು ಪ್ರಾಪರ್ಟಿ ... ಮಾಡುವ ಚೆಪ್ಪ ಗುರುಸಿದ್ದ ಸ್ವಾಮಿಯ ...ನೆಸ್‌ಗಳನ್ನು ಮುಂದಿಟ್ಟುಕೊಂಡು ಆತನಿಂದ ...ರಾಧಿಕಾರಿ ಪಟ್ಟವನ್ನು ಹಣ ಕೊಟ್ಟು ಖರೀದಿಸಲು ...ಟ. ಒಟ್ಟಿನಲ್ಲಿ ದಿಂಗಾಲಿಯ ಅಸಲಿ ಚರಿತ್ರೆ ಬಲ್ಲ ...ಭಾಗದ ಧಾರ್ಮಿಕ ಮುಖಂಡರಿಗೆ ಈತನ ಪಟ್ಟ ...ಸಿಕೊಳ್ಳುವ ತಂತ್ರಗಾರಿಕೆ ಗೊತ್ತಾಗಿದೆ. ಹೀಗಾಗಿ ಒಬ್ಬ ...ೀಜಿ ಕೂಡ ಈತನ ಪರ ವಕಾಲತ್ತು ವಹಿಸುತ್ತಿಲ್ಲ ... ಮಾತು ಕೂಡ ಕೇಳಿ ಬಂದಿದೆ.

ಕಾವಿ ಕ್ರಿಮಿನಲ್ ಕುಳ ಈತ

...ಗಂಟೆಗಟ್ಟಲೆ ಪ್ರವಚನ ಬಿಗಿದು ನಿವೃತ್ತಿ ಕಾಲದ ವೃದ್ಧರ ... ಕೆಡಿಸಿ ಪ್ರವರ್ಧಮಾನಕ್ಕೆ ಬಂದಿರುವ ದಿಂಗಾಲಿ ...ಯಾಸ್ ದಿಂಗಾಲೇಶ್ವರ ಸ್ವಾಮಿ ಮೇಲೆ ಖೋಟಾ ...ಟು ಖರೀದಿ, ದರೋಡೆ, ಹಲ್ಲೆ ಮಾಡಿದ ಕ್ರಿಮಿನಲ್ ...ಗಳು ಸೇರಿದಂತೆ ಸಾರ್ವಜನಿಕ ಆಸ್ತಿಯನ್ನು ಕಬಳಿಸಿದ ...ಣಗಳು ಇನ್ನೂ ಜೀವಂತವಾಗಿವೆ.

...6-9-1999 ರಂದು ನವಿಲುಹೊಳೆ ಮಂಗಳೂರು ...ಸಮೀಪವಿರುವ ಆಶ್ರಮದಲ್ಲಿ ಕೆಳದಿ ಪಟ್ಟಾಧ್ಯಕ್ಷರು ...ಗ ರೋಣದ ಗುಲಗಂಜಿ ಮಠದ ಗುರುಪಾದ ದೇವರು ... ದಿಂಗಾಲೇಶ್ವರ ಸ್ವಾಮಿ ಅವರನ್ನು ಒತ್ತಾಯದಿಂದ ...ೋವೊಂದರಲ್ಲಿ ಕರೆದೊಯ್ದು ಕೊಠಡಿಯಲ್ಲಿ ಅವರನ್ನು ... ಹಾಕಿ ಅವರಿಗೆ ಚಿತ್ರಹಿಂಸೆ ನೀಡಿದ್ದರು. ಗಡ್ಡ ... ಮೀಸೆಯನ್ನು ಬೋಳಿಸಿ ಮಾನಸಿಕವಾಗಿ ಮತ್ತು ...ಕವಾಗಿ ಹಿಂಸೆ ನೀಡಿದ್ದರು.

ಸುಮಾರು ಅರವತ್ತು ವರ್ಷ ವಯಸ್ಸಿನ ಸಂಸ್ಕೃತ ಪಂಡಿತರಾಗಿದ್ದ ಡಾ. ಕೆಳದಿ ಪಟ್ಟಾಧ್ಯಕ್ಷರು ತಮ್ಮ ಸ್ವಂತ ಪರಿಶ್ರಮದಿಂದ ಭಕ್ತರ ಮೂಲಕ ಹಣ ಸಂಗ್ರಹಿಸಿ ಬದಾಮಿ/ಶಿವಯೋಗಿ ಮಂದಿರದ ಮಧ್ಯದಲ್ಲಿ ಸೇತುವೆ ಕಟ್ಟಿಸಿ ಜನರಿಂದ ಮೆಚ್ಚುಗೆ ಗಳಿಸಿದ್ದರು. ಅಂತಹವರು ಕೊರಗಿ ಸಾಯುವಂತಹ ಸ್ಥಿತಿ ಈತನಿಂದ ಬಂದಿತ್ತು.

ರಾಣೆಬೆನ್ನೂರು ಪಟ್ಟಣದ ಹಲಗೇರಿ ಕ್ರಾಸ್ ಬಳಿ ಮೈಸ್ಟೈಲ್ ಎಂಬ ಫರ್ನೀಚರ್ ಅಂಗಡಿಯಲ್ಲಿ 20 ಲಕ್ಷ ರೂ. ಸಾಮಗ್ರಿಗಳನ್ನು ದರೋಡೆ ಮಾಡಿದ ಕೇಸ್ ಕೂಡ ದಿಂಗಾಲಿ ಮೇಲಿದೆ. **12-4-2014** ರಂದು ಬಾಲೆಹೊಸೂರಿನ ಶಿವಕುಮಾರ ಸ್ವಾಮಿ, ಮಾದಾಪುರ ಮಠ ಸಿದ್ಧರಾಮಯ್ಯ ಕಿತ್ತೂರು ಮಠದ ಪವನಕುಮಾರ ಮಲ್ಲಾಡದ ಸೇರಿದಂತೆ ಸುಮಾರು 20 ಜನರೊಂದಿಗೆ ಅಂಗಡಿಗೆ ನುಗ್ಗಿದ್ದ ದಿಂಗಾಲಿ ವಿರುದ್ಧ ರಾಣೆಬೆನ್ನೂರ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿದೆ. ಇದನ್ನು ಶಹರ ಠಾಣೆಗೆ ತನಿಖೆಗೆ ಕಳಿಸಿದ್ದು, (ಅಪರಾಧ ಸಂ.113/2013) ಇದರಲ್ಲಿ ದಿಂಗಾಲಿ ಎರಡನೇ ಆರೋಪಿಯಾಗಿದ್ದಾನೆ.

ಎಂಟು ಹತ್ತು ವರ್ಷಗಳ ಹಿಂದೆ ಗುಲ್ಬರ್ಗಾ ಮತ್ತು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಗಡಿ ಭಾಗದ ಕೆಲ ದಾರಿಬಿಟ್ಟ ಸ್ವಾಮಿಗಳೊಂದಿಗೆ ಸೇರಿಕೊಂಡು ಹುಬ್ಬಳ್ಳಿಯಲ್ಲಿ ಖೋಟಾನೋಟು ಖರೀದಿಸಿ ಬಾಗಲಕೋಟೆ ಬಳಿಯ ಗದ್ದನಕೇರಿ ಕ್ರಾಸ್‌ನಲ್ಲಿ ಪೊಲೀಸರ ಕೈಗೆ ಸಿಕ್ಕಿಬಿದಿದ್ದ ದಿಂಗಾಲಿ. ಆನಂತರ ಕೆಲ ಸ್ವಾಮಿಗಳ ಮಧ್ಯಸ್ಥಿಕೆಯಲ್ಲಿ ಬೇರೆಯವರನ್ನು ಆರೋಪಿಯನ್ನಾಗಿ ಮಾಡಿ ಕೇಸಿನಿಂದ ಹೊರಬಂದ ಎಂಬ ಮಾತುಗಳೂ ಚಾಲ್ತಿಯಲ್ಲಿವೆ. ಆಗಿನ ಖೋಟಾ ಹಣವೇ ಈತನನ್ನು ಬಡ ಮಠದ ಶ್ರೀಮಂತ ಸ್ವಾಮಿಯನ್ನಾಗಿ ಮಾಡಿದ್ದು ಎಂಬ ಆರೋಪವೂ ಇದೆ. ಸದ್ಯ ನಡೆಯುತ್ತಿರುವ ಕೋಟ್ಯಾಂತರ ರೂಪಾಯಿ ವ್ಯವಹಾರಕ್ಕೂ ಹಿಂದಿನ ಇಂತಹ ಪ್ರಕರಣಕ್ಕೂ ತಾಳೆ ಹಾಕಿ ನೋಡುವಂತಾಗಿದೆ.

ಕೆರೆಯನ್ನೂ ನುಂಗಿದ ದಿಂಗಾಲಿ

ಬಾಲೆಹೊಸೂರಿನಲ್ಲಿನ ಸಾರ್ವಜನಿಕ ಕೆರೆಯನ್ನು ಒತ್ತುವರಿ ಮಾಡಿಕೊಂಡು ತನ್ನ ಪ್ರಭಾವ ಬಳಸಿ ನ್ಯಾಯಾಲಯಕ್ಕೂ ಸುಳ್ಳು ದಾಖಲೆ ಸಲ್ಲಿಸಿದ್ದಾನೆ ಎಂದು ದಿಂಗಾಲೇಶ್ವರ ಸ್ವಾಮೀಜಿ ವಿರುದ್ಧ ಬಾಲೆಹೊಸೂರಿನ ಗ್ರಾಮಸ್ಥರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದಾರೆ.

ಗ್ರಾಮದಲ್ಲಿನ ದಿಂಗಾಲೇಶ್ವರ ಮಠದ ಉತ್ತರ ಭಾಗದಿಂದ ಪೂರ್ವ ಭಾಗದಲ್ಲಿರುವ ಎರಡು ಹೆಕ್ಟೇರ್ ಪ್ರದೇಶದಲ್ಲಿ ಜೋಕುಮಾರನ ಕೆರೆಯಿದೆ. ಅದರಲ್ಲಿ ಸುಮಾರು 216 ಮೀ. ಕೆರೆಯನ್ನು ದಿಂಗಾಲಿ ಒತ್ತುವರಿ ಮಾಡಿಕೊಂಡಿದ್ದಾನೆ ಎಂದು ಫಕ್ಕೀರೇಶ ಹನುಮಂತಪ್ಪ ಸಾಲಿ ಎಂಬುವರು ಲೋಕಾಯುಕ್ತಕ್ಕೆ ದಾಖಲೆ ಸಮೇತ ದೂರು ಸಲ್ಲಿಸಿದ್ದಾರೆ. ದಿಂಗಾಲಿ ಒತ್ತುವರಿ ಮಾಡಿಕೊಂಡಿದ್ದರಿಂದ ಕೆರೆಯ ಕೆಳ ಭಾಗದಲ್ಲಿ ವಾಸವಾಗಿರುವ ಬಡ ಕುಟುಂಬಗಳು ಅಪಾಯದ ಭೀತಿಯನ್ನು ಎದುರಿಸುವಂತಾಗಿದೆ. ಜನರ ಕಷ್ಟಕ್ಕೆ ಸ್ಪಂದಿಸಬೇಕಾದ ಮಠ ಮತ್ತು ಅದರ ಮುಖ್ಯಸ್ಥ ಬಡವರ ಬದುಕಿಗೆ ಸಂಚಕಾರ ತಂದಿಟ್ಟಿರುವ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ.

ಈ ಒತ್ತುವರಿ ಕುರಿತು ಹೈಕೋರ್ಟ್‌ನಲ್ಲೂ ಪ್ರಕರಣ ದಾಖಲಾಗಿದೆ. ಈ ಬಗ್ಗೆ ವಿಚಾರಣೆ ನಡೆಸಿದ ದ್ವಿಸದಸ್ಯ ಪೀಠ ಒತ್ತುವರಿಯನ್ನು ತೆರವುಗೊಳಿಸುವಂತೆ ಆದೇಶಿಸಿದೆ. ಆದರೆ, ದಿಂಗಾಲಿಯ ಕ್ರಿಮಿನಲ್ ಹಿನ್ನೆಲೆಗೆ ಹೆದರಿರುವ ಅಧಿಕಾರಿಗಳು ನಮಗ್ಯಾಕೆ ಬೇಕು ಅಂತ ಸುಮ್ಮನಾಗಿದ್ದಾರೆ. ಏನೂ ಕ್ರಮ ಜರುಗಿಸದ ಅಧಿಕಾರಿಗಳ ವಿರುದ್ಧ ಕೂಡ ಸಾರ್ವಜನಿಕರು ಮತ್ತೊಂದು ದಾವೆ ಮಾಡಿದ್ದಾರೆ. ಇದರಲ್ಲಿ ಸುಮಾರು 11 ಜನ ಅಧಿಕಾರಿಗಳ ವಿರುದ್ಧ ದೂರಲಾಗಿದೆ. ಇಷ್ಟೆಲ್ಲಾ ನಡೆದಿದ್ದರೂ ಕೂಡ ದಿಂಗಾಲಿ ಮಾತ್ರ ಕೆರೆ ಒತ್ತುವರಿ ಜೊತೆಗೆ ಮಾದಾಪುರ ಹಾಗೂ ಯಲ್ಲಾಪುರದಿಂದ ಬಾಲೆಹೊಸೂರಿಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಅತಿಕ್ರಮಿಸಿಕೊಂಡು ಅಲ್ಲಿ ಸಿಮೆಂಟ್ ಇಟ್ಟಿಗೆ ತಯಾರಿಸುತ್ತಿದ್ದಾನೆ. ಸಾರ್ವಜನಿಕ ಕೊಳವೆಬಾವಿಯನ್ನು ಬಿಟ್ಟುಕೊಡದೆ, ಮಠಕ್ಕೆ ಮಾತ್ರ ಬಳಸಿಕೊಳ್ಳುತ್ತಿದ್ದಾನೆ. ಆಶ್ರಯ ನೀಡಿದ ಬಾಲೆಹೊಸೂರಿನ ಗ್ರಾಮಸ್ಥರಿಗೆ ಟಾರ್ಚರ್ ಕೊಟ್ಟ ದಿಂಗಾಲಿ ಇನ್ನು ಹುಬ್ಬಳ್ಳಿ ಭಕ್ತರನ್ನು ಯಾವ ರೀತಿ ಕಾಡಬಹುದು ಎನ್ನುವ ಪ್ರಶ್ನೆ ಭಕ್ತರಲ್ಲಿ ಮೂಡಲಿಕ್ಕೆ ಸಾಕು.

ರಾತ್ರೋ ರಾತ್ರಿ ಉತ್ತರಾಧಿಕಾರಿ


ನಿನ್ನೆ ಮೊನ್ನೆವರೆಗೂ ಉತ್ತರಾಧಿಕಾರಿ ನೇಮಿಸಿಲ್ಲ ಅಂತಾ ಬಾಯಿ ಬಡಿದುಕೊಂಡ ಮೂರುಸಾವಿರ ಮಠದ ಗುರುಸಿದ್ದ ಇದ್ದಕ್ಕಿದ್ದಂತೆ ದಿಂಗಾಲೇಶ್ವರನೇ ತನ್ನ ಉತ್ತರಾಧಿಕಾರಿ ಎಂದು ಪತ್ರವೊಂದನ್ನು ತಯಾರಿಸಿ ಸುದ್ದಿಗೆ ಬಿದ್ದಿದ್ದಾನೆ. 2009 ರಲ್ಲಿ ಈ ಪ್ರಕ್ರಿಯೆ ನಡೆದಿದ್ದು ಭಕ್ತರ ಅಭಿಪ್ರಾಯ ಕೂಡ ಪಡೆದು ಅಕ್ಟೋಬರ್ 1 ರಂದು ಉತ್ತರಾಧಿಕಾರಿ ನೇಮಕ ಪತ್ರಕ್ಕೆ ಸಹಿ ಮಾಡಿದ್ದಾಗಿ ಗುರುಸಿದ್ದ ಹೇಳುತ್ತಿದ್ದಾನೆ.


2009 ರಲ್ಲಿ ಸಾರ್ವಜನಿಕ ಪ್ರಕಟಣೆಯ ಮೂಲಕ ಭಕ್ತರ ಅಭಿಪ್ರಾಯ ಸಂಗ್ರಹಿಸಿ ದಿಂಗಾಲಿಯನ್ನು ಉತ್ತರಾಧಿಕಾರಿಯಾಗಿ ನೇಮಿಸಲು ನಿರ್ಧಾರಕ್ಕೆ ಬರಲಾಗಿದೆ, ಪ್ರತಿಷ್ಠಿತ ವ್ಯಕ್ತಿಗಳ ಸಹಿಗಳೊಂದಿಗೆ ಪತ್ರ ತಯಾರಿಸಲಾಗಿದೆ ಎಂದು ಕೋರ್ಟ್‌ನಲ್ಲಿ ಸ್ವಾಮಿ ಪರ ವಕೀಲರು ವಾದ ಮಂಡಿಸಿದ್ದಾರೆ.

ಅಸಲಿಗೆ ದಿಂಗಾಲಿ ಮತ್ತು ಆತನ ಖಾಸಾ ಶಿಷ್ಯ ಮಲ್ಲಿಕಾರ್ಜುನ ಸಾಹುಕಾರ ಸೇರಿ ನಡೆಸಿದ ಕ್ರಿಮಿನಲ್ ನಾಟಕವಿದು. ಅಸಲಿ ಉತ್ತರಾಧಿಕಾರಿ ಮಲ್ಲಿಕಾರ್ಜುನ ಸ್ವಾಮಿ ಸಾವಿರಾರು ಭಕ್ತರೊಂದಿಗೆ ನವೆಂಬರ್ 7 ರಂದು ಘಟಪ್ರಭಾದಿಂದ ಹುಬ್ಬಳ್ಳಿ ಮೂರು ಸಾವಿರ ಮಠಕ್ಕೆ ಬರುವುದಾಗಿ ಹೇಳಿಕೆ ನೀಡಿದ್ದೇ ತಡ, ಇತ್ತ ದಿಂಗಾಲಿಯ ತಳ ಬೆದರತೊಡಗಿತು. ಮೌನವ್ರತ ಮುಗಿದು ಮೂರುಸಾವಿರ ಮಠಕ್ಕೆ ಮಲ್ಲಿಕಾರ್ಜುನ ಸ್ವಾಮಿ ಬಂದು ಕೂಡುವುದಕ್ಕಿಂತ ಮುನ್ನ ದಾಖಲೆಗಳನ್ನು ಸೃಷ್ಟಿಸಿ ಆಟ ಆಡುವ ಸ್ಕೆಚ್ ರೂಪಿಸಿದ ಮಲ್ಲಿಕಾರ್ಜುನ ಸಾಹುಕಾರ ಕೆಲವೊಂದಿಷ್ಟು ಭಕ್ತರ ಪಟ್ಟಿ ಮಾಡಿ ಅವರ ಸಹಿ ಪಡೆದು ಉತ್ತರಾಧಿಕಾರಿ ನೇಮಕ ಎಂದು ಘೋಷಣೆಯಾಗಿದೆ ಎಂದು ಹೊಸ ಬಾಂಬ್‌ವೊಂದನ್ನು ಸೃಷ್ಟಿಸಿದ. ಅಲ್ಲದೆ, ವಿದ್ಯಾವರ್ಧಕ ಸಂಘದ ಅಧ್ಯಕ್ಷಗಿರಿಯ ಮೇಲೆ ಕಣ್ಣು ಇಟ್ಟಿರುವ ಸಾಹುಕಾರನಿಗೆ ತಾನು ಪಟ್ಟಕ್ಕೆ ಬಂದ ನಂತರ ಅಧ್ಯಕ್ಷಗಿರಿ ಕೊಡಿಸುವುದಾಗಿ ದಿಂಗಾಲಿ ಮಾತು ಕೊಟ್ಟಿದ್ದರಿಂದ ಎಲ್ಲಾ ಭಾನಗಡ ದಂಧೆಗಳು ಚಾಲ್ತಿ ಪಡೆದಿವೆ. ಇದಾಗಿದ್ದೇ ತಡ ಮಠದ ಆಡಳಿತ ಮತ್ತು ಹಣದ ವ್ಯವಹಾರವನ್ನು ದಿಂಗಾಲೇಶ್ವರ ಮುಂದುವರೆಸಲು ನನ್ನ ಒಪ್ಪಿಗೆ ಇದೆ ಎಂದು ಗುರುಸಿದ್ದ ಸ್ವಾಮಿ ಹೆಸರಿನ ಪತ್ರ ಬರೆದುಕೊಂಡು ಸ್ವಾಮಿಗೆ ಧಮಕಿ ಹಾಕಿ ಸಹಿ ಪಡೆಯಲು ದಿಂಗಾಲಿ ಮತ್ತು ಸಾಹುಕಾರ ಸ್ಕೆಚ್ ಹಾಕಿದ್ದರು. ಪತ್ರವನ್ನು ಕಂಪ್ಯೂಟರಿನಲ್ಲಿ ಡಿಟಿಪಿ ಮಾಡಿಸಿಕೊಂಡು ಬನ್ನಿ ನಾನು ಸಹಿ ಮಾಡುತ್ತೇನೆ ಎಂದು ಹೇಳಿದ ಗುರುಸಿದ್ದ ಮಠದ ಹಿತ್ತಲ ಬಾಗಿಲಿನಿಂದ ಪರಾರಿಯಾಗಿ ಆಸ್ಪತ್ರೆಯೊಂದಕ್ಕೆ ದಾಖಲಾಗಿ ಹೃದಯಾಘಾತದ ಹೈಡ್ರಾಮಾ ಸೃಷ್ಟಿಸಿದ್ದಾನೆ.

ಸ್ವಾಮಿಗಳಿಗೆ ತೀವ್ರ ತೊಂದರೆಯಿದೆ, ಅವರ ಮನಸ್ಸಿಗೆ ಯಾರೂ ಘಾಸಿ ಮಾಡಬಾರದು ಎಂದು ವೈದ್ಯರ ಕಡೆಯಿಂದ ದಿಂಗಾಲಿ ಮತ್ತು ಸಾಹುಕಾರನಿಗೆ ಉಗಿಸಿರುವ ಗುರುಸಿದ್ದ ಸ್ವಾಮಿ ಸದ್ದಿಲ್ಲದೇ ಹಾನಗಲ್ ಮಠದ ಬೆಡ್‌ರೂಮ್‌ಗೆ ಶಿಫ್ಟಾಗಿದ್ದಾನೆ. ಉತ್ತರಾಧಿಕಾರಿ ಮಾಡಿದ್ದೇ ತಡ ಮಠದ ಖಜಾನೆಗೆ ಕೈಹಾಕುವ ದಿಂಗಾಲಿಯ ಸ್ಕೆಚ್ ಸದ್ಯ ಫೇಲಾಗಿದೆ. ಆದರೂ ಕ್ರಿಮಿನಲ್ ದಿಂಗಾಲಿ ಯಾವಾಗ ಮಠದ ತಿಜೋರಿ ಬಾಗಿಲು ತೆಗಿತಾನೋ ಗದ್ದುಗೆಯಲ್ಲಿರುವ ಆ ಮೂಜಗಂ ಆತ್ಮವೇ ಹೇಳಬೇಕು...


● ವಿನಯ್


31 MAR 1998


31 MAR 1998


31 MAR 1998

31 MAR 1998


ದಿಂಗಾಲಿ ಅಲಿಯಾಸ್ ದಿಂಗಾಲೇಶ್ವರನ ಎಫ್‌ಐಆರ್

ತುಮಕೂರು

ಕೆಎಸ್‌ಆರ್‌ಟಿಸಿ ಕಾಮಾಯಣ


ಡಿಸಿ ಎನ್.ಕೆ. ಬಸವರಾಜ್


ಎಸ್‌ಪಿ ರಮಣ್ ಗುಪ್ತ

ತುಮಕೂರಿನ ಕೆಎಸ್‌ಆರ್‌ಟಿಸಿ ಡಿಪೋ ಮತ್ತೆಮತ್ತೆ ಸುದ್ದಿಯಾಗುತ್ತಿದೆ. ವಿಪರ್ಯಾಸವೆಂದರೆ ಹಾಗೆ ಸುದ್ದಿಯಾಗುತ್ತಿರೋದು ಲೈಂಗಿಕ ಕಿರುಕುಳದ ಕಾರಣಕ್ಕೆ. ಕೆಲ ದಿನಗಳ ಹಿಂದಷ್ಟೇ ವಿಭಾಗೀಯ ಸಂಚಾರ ನಿಯಂತ್ರಣಾಧಿಕಾರಿ (ಡಿಟಿಒ) ಅರುಣ್ ಕುಮಾರ್ ಎಂಬಾತ ಪವಿತ್ರಾ ಎನ್ನುವ ಲೇಡಿ ಕಂಡಕ್ಟರ್ ಮೇಲೆ ಲೈಂಗಿಕ ದೌರ್ಜನ್ಯ ಎಸಗಲು ಹೋಗಿ ಸಿಕ್ಕಿಬಿದ್ದಿದ್ದ. ಆ ಕುರಿತು ಪೊಲೀಸ್ ಠಾಣೆಯಲ್ಲಿ ಕೇಸ್ ಕೂಡಾ ದಾಖಲಾಗಿದೆ. ಅದು ಮಾಸುವ ಮುನ್ನವೇ ತುಮಕೂರು ಡಿಪೋ, ಮಹಿಳಾ ಸಿಬ್ಬಂದಿಗಳಿಗೆ ಸುರಕ್ಷಿತವಲ್ಲ ಎಂಬುದನ್ನು ಸಾಕ್ಷೀಕರಿಸುವ ಮತ್ತೊಂದು ಘಟನೆ ಜರುಗಿದೆ. ಈ ಬಾರಿ ಅಂತಹ ನೀಚತನಕ್ಕೆ ಕೈ ಹಾಕಿರೋದು ಸ್ವತಃ ಸಾರಿಗೆ ಇಲಾಖೆಯ ಜಿಲ್ಲಾ ನಿಯಂತ್ರಣಾಧಿಕಾರಿ (ಡಿಸಿ) ಎನ್.ಕೆ. ಬಸವರಾಜ್. ಇದಕ್ಕಿಂತಲೂ ದೊಡ್ಡ ದುರಂತವೆಂದರೆ, ತುಮಕೂರಿನ ಇಡೀ ಪೊಲೀಸ್ ಇಲಾಖೆ ಖುದ್ದು ಎಸ್‌ಪಿ ರಮಣ್‌ಗುಪ್ತನ ನೇತೃತ್ವದಲ್ಲಿ ಬಸವರಾಜ್ ರಕ್ಷಣೆಗೆ ನಿಂತಿರೋದು. ಪೊಲೀಸರ ವಿಚಾರಕ್ಕೆ ಆಮೇಲೆ ಬರೋಣ, ಮೊದಲು ಬಸವರಾಜ್‌ನ ಪುರುಷ ಪ್ರತಾಪವನ್ನು ನೋಡಿ ಬರೋಣ...

ಆಕೆಯ ಹೆಸರು ನಾಜಿಯಾ ಖಾನಂ, ಇದೇ ಡಿಪೋದಲ್ಲಿ ಕಂಡಕ್ಟರ್ ಆಗಿ ಕೆಲಸ ಮಾಡಿಕೊಂಡಿದ್ದಳು. ಮೂರು ಮಕ್ಕಳಿರುವ ಅವಳ ಕುಟುಂಬಕ್ಕೆ ಗಂಡನ ದುಡಿಮೆಗಿಂತ ಈಕೆಯ ಸರ್ಕಾರಿ ನೌಕರಿಯೇ ಮೂಲಾದಾಯ. ದುರಾದೃಷ್ಟವೆಂಬಂತೆ ಕೆಲ ತಿಂಗಳ ಹಿಂದೆ ಮನೆಯಲ್ಲಿ ಅಡುಗೆ ಮಾಡುತ್ತಿದ್ದಾಗ ಸೀಮೆ ಎಣ್ಣೆ ಸ್ಟೌವ್ ಸಿಡಿದು ಕೈ ಪೂರ್ತಿ ಸುಟ್ಟುಹೋಗಿತ್ತು. ಕೈಯನ್ನೇ ಸುಟ್ಟುಕೊಂಡ ಆಕೆ ಹೇಗೆ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯ. ವೈದ್ಯಕೀಯ ದೃಷ್ಟಿಯಿಂದ ರಜೆ ಹಾಕಿದ್ದಳು. ಅದಕ್ಕೆ ಸಂಬಂಧಿಸಿದ ವೈದ್ಯಕೀಯ ಪ್ರಮಾಣಪತ್ರಗಳನ್ನು ಆಕೆಯ ಗಂಡ ಜಮೀರ್ ಪಾಶನೆ ಖುದ್ದಾಗಿ ಬಂದು ಕಚೇರಿಯಲ್ಲಿ ಕೊಟ್ಟು ಹೋಗಿದ್ದ. ಆದರೆ ಅದನ್ನು ಲೆಕ್ಕಕ್ಕೇ ತೆಗೆದುಕೊಳ್ಳದ ಕಚೇರಿಯವರು ಆಕೆಯ ಅನುಪಸ್ಥಿತಿಯನ್ನು ಗೈರು ಹಾಜರೆಂದು ಮಾರ್ಕ್ ಮಾಡುತ್ತಲೇ ಬಂದಿದ್ದರು. ಈ ವಿಷಯ ಆಕೆಗಾಗಲಿ, ಅವಳ ಕುಟುಂಬಕ್ಕಾಗಲಿ ತಿಳಿದಿರಲೇ ಇಲ್ಲ. ಹಾಜರಿ ಪುಸ್ತಕದಲ್ಲಿ ನಾಜಿಯಾ ಸುದೀರ್ಘ ಆಬ್ಸೆಂಟಿಯಾಗಿಯೇ ಉಳಿದಳು.

ಅದೇ ವೇಳೆಗೆ ಎನ್.ಕೆ.ಬಸವರಾಜ್ ಮಂಡ್ಯದಿಂದ ಎತ್ತಂಗಡಿಯಾಗಿ ಇಲ್ಲಿಗೆ ಡಿಸಿಯಾಗಿ ವಕ್ಕರಿಸಿದ್ದ. ಈತ ಪರಮ ದರ್ಪಿಷ್ಟ, ಅಷ್ಟೇ ಭ್ರಷ್ಟನೂ ಹೌದು. ಜೊತೆಗೆ ಸ್ತ್ರೀಲೋಲನೂ ಹೌದು!

ನಾಜಿಯಾ ಖಾನಂ ತನ್ನ ಅನಾರೋಗ್ಯದ ನಿಮಿತ್ತ ಗೈರುಹಾಜರಾಗಿದ್ದರ ಹಿಂದುಮುಂದು ನೋಡದ ಬಸವರಾಜ್ ಆಕೆಯ ಮೇಲೆ ಇಲಾಖೆಯ ಎನ್‌ಕ್ವೈರಿ ನಡೆಯುವಂತೆ ಮಾಡಿದ. ಆ ಸಮಯದಲ್ಲೂ ಆಕೆ ತನ್ನೆಲ್ಲಾ ವೈದ್ಯಕೀಯ ದಾಖಲೆಗಳನ್ನು ಸಮಿತಿಯ ಮುಂದಿಟ್ಟಳು. 'ಆದರೆ ಇವ್ಯಾವುವು ಈ ಮೊದಲೇ ಇಲಾಖೆಗೆ ನೀವು ತಲುಪಿಸಿಯೇ ಇಲ್ಲ, ಅನಧಿಕೃತವಾಗಿ ಗೈರುಹಾಜರಾಗಿದ್ದೀರಿ' ಎಂದು ಸಮಿತಿ ಹೇಳಿದಾಗ ನಾಜಿಯಾ ಅಕ್ಷರಶಃ ದಿಗ್ಭ್ರಾಂತಳಾಗಿದ್ದಳು. ಏಕೆಂದರೆ, ಆಕೆಯ ಗಂಡನೇ ಖುದ್ದಾಗಿ ಬಂದು ಕಚೇರಿಯಲ್ಲಿ ಅವನ್ನೆಲ್ಲಾ ಕೊಟ್ಟು ರಜೆಗಾಗಿ ವಿನಂತಿಸಿಹೋಗಿದ್ದ.

ಇದಾದ ಸ್ವಲ್ಪ ದಿನಕ್ಕೆ ನಾಜಿಯಾ ಖಾನಂಳನ್ನು ಡಿಸ್ಮಿಸ್ ಮಾಡಲಾಗಿತ್ತು, ಇಂತಹ ಸಂದರ್ಭದಲ್ಲಿ ಶಿಸ್ತುಕ್ರಮಕ್ಕೆ ಗುರಿಯಾದ ವ್ಯಕ್ತಿಗೆ ಶೋಕಾಸ್ ನೋಟಿಸ್ ನೀಡಬೇಕಾದ್ದು ಇಲಾಖೆಯ ಕರ್ತವ್ಯ. ಆದರೆ ಬಸವರಾಜ್ ಆಕೆಗೆ ಸಣ್ಣದೊಂದು ನೋಟಿಸನ್ನೂ ನೀಡಿರಲಿಲ್ಲ. ಕಚೇರಿಯ ಈ 'ಗುಪ್ತ' ವಾರ್ತೆ ಅದು ಹೇಗೊ ನಾಜಿಯಾಳ ಗೆಳತಿ ಮೂಲಕ ಗೊತ್ತಾಯಿತು. ಮೊದಲೇ ಕೈ ಸುಟ್ಟುಕೊಂಡು ದುಡಿಯುವ ಕೈಗಳೇ ಇಲ್ಲದೆ ಪರಿತಪಿಸುತ್ತಿದ್ದ ಅವಳ ಕುಟುಂಬಕ್ಕೆ ಬರಸಿಡಿಲು ಬಡಿದಂತಾಯಿತು.

'ಅಡ್ಜಸ್ಟ್' ಮಾಡ್ಕೋ ಅಂದ!

ಡಿ.ಸಿ.ಯವರನ್ನು ಕಾಡಿಬೇಡಿಯಾದರೂ ತನ್ನ ಡಿಸ್ಮಿಸ್ ಆದೇಶವನ್ನು ವಾಪಾಸ್ಸು ತೆಗೆದುಕೊಳ್ಳುವಂತೆ ಮಾಡಬೇಕೆಂದು ಗಂಡಹೆಂಡಿರಿಬ್ಬರೂ 14ರಂದು ಡಿ.ಸಿ.ಯ ಚೇಂಬರ್ ಬಳಿ ಹೋಗಿದರು. ಬಸವರಾಜ್ ಅದೆಂತಹ ಸರ್ವಾಧಿಕಾರಿ ಮನೋಭಾವದವನೆಂದರೆ ಆತನ ಕ್ಯಾಬಿನ್ ಒಳಗೆ ಒಬ್ಬರಿಗೆ ಮಾತ್ರ ಪ್ರವೇಶ, ಅದೂ ಪ್ರವೇಶಿಸುವ ಮುನ್ನ ಮೊಬೈಲ್ ಫೋನ್‌ಗಳನ್ನು ಹೊರಗಿಟ್ಟು ಬರಬೇಕೆಂಬ ಅಲಿಖಿತ ಶಾಸನಗಳನ್ನೇ ಮಾಡಿಟ್ಟುಕೊಂಡಿದ್ದಾನೆ. ಆ ಕಾರಣಕ್ಕೆ ಅವತ್ತು ನಾಜಿಯಾಳ ಗಂಡ ಒಳಹೋಗಲು ಸಾಧ್ಯವಾಗಿಲ್ಲ, ಆಕೆಯೊಬ್ಬಳೇ ಬಸವರಾಜನ್‌ನ ಕ್ಯಾಬಿನ್ ಹೊಕ್ಕಳು.

ಮೊದಮೊದಲು ಸೌಜನ್ಯವಾಗೇ ಮಾತಿಗಿಳಿದ ಬಸವರಾಜ್ 'ಇದರಲ್ಲಿ ನನ್ನ ಪಾತ್ರವೇನೂ ಇಲ್ಲ, ಬೆಂಗಳೂರಿನ ಕೇಂದ್ರ ಸಮಿತಿಯೇ ಈ ಆದೇಶ ಹೊರಡಿಸಿದೆ, ನೀನು ಅಲ್ಲಿಯೇ ಕೇಳಿಕೊ' ಎಂದು ಸಬೂಬು ಕೊಟ್ಟ. ದರ್ಪಿಷ್ಟ ಡಿಸಿ ಇಷ್ಟು ಮೃದುವಾಗಿ ವ್ಯವಹರಿಸಿದ್ದರಿಂದ ತನ್ನ ಅಸಹಾಯಕತೆಯನ್ನೆಲ್ಲಾ ತೋಡಿಕೊಂಡರೆ ಮನಕರಗಿ ಸಹಾಯ ಮಾಡಬಹುದೆಂದು ತಪ್ಪಾಗಿ ಅಂದಾಜಿಸಿದ ನಾಜಿಯಾ 'ನಮ್ಮದು ತುಂಬಾ ಬಡ ಕುಟುಂಬ, ಮೂರು ಮಕ್ಕಳಿದ್ದಾರೆ, ಅವರ ಜೋಪಾನ ಮಾಡಲು ಇರೋದು ನನ್ನ ನೌಕರಿಯೊಂದೆ ಆಧಾರ, ದಯವಿಟ್ಟು ನನ್ನನ್ನು ಕೆಲಸದಿಂದ ತೆಗೆದು ಹಾಕಬೇಡಿ' ಎಂದು ಅಂಗಲಾಚಿದಳು.

ಆಕೆ ಅಸಹಾಯಕತೆಯಿಂದ ದೈನೇಸಿಯಾಗಿ ಮಾತನಾಡಿದ್ದೇ ತಡ 'ಆ ಮೂರು ಮಕ್ಕಳು ನನಗೆ ಹುಟ್ಟಿದವಾ? ಹೋಗ್ಹೋಗು, ನಾನೇನು ಮಾಡಲೂ ಸಾಧ್ಯವಿಲ್ಲ; ನಿನಗೇನು ವಯಸ್ಸಿದೆ, ನೋಡಲು ಚೆನ್ನಾಗಿಯೂ ಇದೀಯ. ಸಾಬರ ಹೆಂಗಸರು ಏನೇನೊ ಕೆಲಸ ಮಾಡಿ ಬದುಕುತ್ತಾರಂತೆ. ನೀನೂ ಅಂತದೇ ದಾರಿ ನೋಡಿಕೊ ಹೋಗು' ಅಂತ ದಬಾಯಿಸಿ ಆಕೆಯನ್ನು ಮತ್ತಷ್ಟು ಬೆದರಿಸಲು ನೋಡಿದ. ಮೊದಲೇ ಕಂಗಾಲಾಗಿದ್ದ ನಾಜಿಯಾ, ಡಿಸಿ ಮಾತಿನಿಂದ ಮತ್ತಷ್ಟು ಗಾಬರಿಯಾದಳು.

ಆಗಲೇ ಅನಾವರಣವಾದದ್ದು ಬಸವರಾಜ್‌ನ ಹೆಣ್ಣುಬಾಕತನ. ಆಕೆಯ ಅಸಹಾಯಕ ಸ್ಥಿತಿಯನ್ನ ಅಧ್ಯಯನ ಮಾಡಿದ ಬಸವರಾಜ್ ಮೆತ್ತಗೆ ಮಾತು ಆರಂಭಿಸಿ 'ಸರಿ, ಒಂದು ಕಡೆ ಕೆಲಸ ಮಾಡಬೇಕು ಅಂದ್ರೆ ಇವೆಲ್ಲಾ ಮಾಮೂಲು. ನಿನಗೆ ಕೆಲಸ ತಾನೆ ಬೇಕು, ನನ್ನೊಂದಿಗೆ ಅಡ್ಜಸ್ಟ್ ಮಾಡ್ಕೊಂಡು ಇದ್ದುಬಿಡು, ನಾನೇ ನಿನ್ನ ಡಿಸ್ಮಿಸ್ ಆರ್ಡರ್ ಕ್ಯಾನ್ಸಲ್ ಮಾಡ್ಸಿ ಕೆಲಸ ಕೊಡಿಸ್ತೀನಿ' ಎನ್ನುವ ಆಫರನ್ನು ಆಕೆಯ ಮುಂದಿಟ್ಟ. ಡಿಸಿ ಏನು ಅಪೇಕ್ಷಿಸುತ್ತಿದ್ದಾನೆ ಎನ್ನುವುದು ನಾಜಿಯಾಗೆ ಅರ್ಥವಾಗಿ ಹೋಗಿತ್ತಾದ[illegible] ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ಅರಿಯದಷ್ಟು ಬೆ[illegible] ನಿಂತಿದ್ದಳು. ಅವಳ ಈ ಮೌನವನ್ನು ಸಮ್ಮತಿಯೆಂ[illegible] ಭ್ರಮಿಸಿದ ಡಿಸಿ ಕಾಮೋದ್ರಿಕ್ತನಾಗಿ ತನ್ನ ಸೀಟ್‌ನಿ[illegible] ಎದ್ದು ಬಂದು 'ಸ್ವಲ್ಪ ಅಡ್ಜಸ್ಟ್ ಮಾಡ್ಕೊಂಡ್‌ಬಿಡು [illegible] ಸರಿಹೋಗುತ್ತೆ' ಅಂತ ಆಕೆಯ ಭುಜ ಹಿಡಿದು ತ[illegible] ಎಳೆದುಕೊಳ್ಳಲು ಮುಂದಾದ. ಇನ್ನು ತಡ ಮಾಡಿ[illegible] ತನ್ನ ಬದುಕು ಮೂರಾಬಟ್ಟೆಯಾಗುವುದು ಖಾತ್ರಿ ಎಂ[illegible] ನಾಜಿಯಾ ಸನಿಹಕ್ಕೆ ಬಂದು ನಿಂತಿದ್ದ ಬಸವರಾಜ್[illegible] ದೂರಕ್ಕೆ ತಳ್ಳಿಬಿಟ್ಟಳು.

ಬಸವರಾಜ್ ಕೋಪ ನೆತ್ತಿಗೇರಿತು. 'ಏಯ್ ಸಾ[illegible] ಸೂಳೆ, ನನ್ನನ್ನೇ ತಳ್ತೀಯ. ನೀನು ಇಲ್ಲಿ ಅದ್ಹೇಗೆ [illegible] ಮಾಡ್ತೀಯ ನಾನೂ ನೋಡ್ತೀನಿ. ಇಲ್ಲಿಂದ ತೊ[illegible] ಅಂತ ವಿಕೃತವಾಗಿ ಅಬ್ಬರಿಸಿದ. ಹೊರಗೆ ಹೊರ[illegible] ನಾಜಿಯಾಳನ್ನು ತಡೆದು 'ಇಲ್ಲಿ ನಡೆದಿರೋ[illegible] ಯಾರಿಗಾದ್ರೂ ಹೇಳಿದ್ರೆ, ನಿನ್ನ ಮುಖಕ್ಕೆ ಆ[illegible] ಹಾಕಿಸಿಬಿಡ್ತೀನಿ' ಎಂದು ಬೆದರಿಸುವುದನ್ನೂ ಬಸವರ[illegible] ಮರೆಯಲಿಲ್ಲ.

ಹೊಣೆಗೇಡಿ ಪೊಲೀಸರು

ಕಚೇರಿ ಹೊರಗೆ ಕಾಯ್ದುಕೊಂಡಿದ್ದ ಗಂಡನ [illegible] ಬಂದವಳೆ ನಾಜಿಯಾ ಇಡೀ ಘಟನೆಯನ್ನು ವಿವರಿಸಿ[illegible] ಕೂಡಲೇ ಅವರು ಅಲ್ಲಿಂದ ಅರ್ಧ ಕಿಲೋಮೀ[illegible] ದೂರವಿಲ್ಲದ ತುಮಕೂರು ನಗರ ಪೊಲೀಸ್ ಠಾಣೆ[illegible] ಡಿಸಿ ವಿರುದ್ಧ ದೂರು ನೀಡಲು ಹೋದರು. [illegible] ಕರ್ತವ್ಯದಲ್ಲಿದ್ದ ಸಬ್ ಇನ್ಸ್‌ಪೆಕ್ಟರ್ ಸಲೀಮ್ ಸಿ ನದ[illegible] ಆಕೆಯ ಕಂಪ್ಲೆಂಟನ್ನು ಓದಿದವನೆ 'ಛೇ, ಛೇ, ಇದೆಲ[illegible] ಸಾಧ್ಯವೇ. ಅಂತಹ ಹೈಯರ್ ಆಫೀಸರ್ ಹಾ[illegible] ನಡೆದುಕೊಂಡಿದ್ದಾರೆಂದರೆ ಯಾರದರು ನಂಬಲಾದೀತೆ. [illegible] ಸುಳ್ಳು ಹೇಳ್ತಿದೀಯ. ನಿಜ ಬೊಗಳು ಅಲ್ಲಿ ಏನಾ[illegible] ಅಂತ ನಾಜಿಯಾಳನ್ನೇ ಬೆದರಿಸಿದ.

ಆದರೆ ಆಕೆಯ ಗಂಡನೂ ಸ್ವಲ್ಪ ಖಡಕ್ಕಾಗಿ [illegible] ಕೂರಡ ಮೇಲೆ 'ಸರಿ, ಕಂಪ್ಲೆಂಟ್ ಕೊಟ್ಟು ಹ[illegible] ನಾಳೆಯೇ ನಾನಿದರ ಬಗ್ಗೆ ವಿಚಾರಣೆ ನಡೆಸ್ತೀನಿ' ಎ[illegible] ಅವರನ್ನು ಸಾಗಹಾಕಲು ನೋಡಿದ. ಆಗ ನಾಜಿ[illegible] ಗಂಡ 'ಕಂಪ್ಲೆಂಟ್ ಕೊಟ್ಟಿದ್ದಕ್ಕೆ ನಮಗೊಂದು ರಿ[illegible] ಕಾಪಿ ಕೊಡಿ' ಎಂದು ಕೇಳಿದ. ಅಷ್ಟಕ್ಕೇ [illegible] ಬಿದ್ದವನಂತಾಡಿದ ಎಸ್‌ಐ ನದಾಫ್ 'ಅದೆಲ್ಲ ಸಾ[illegible] ಸುಮ್ನೆ ಕೊಟ್ಟು ಹೋಗಿ. ನೀವು ಹೇಳ್ತಾ ಇರ[illegible] ನಿಜವಾಗಿದ್ರೆ ಆಮೇಲೆ ರಿಸೀವ್ ಕಾಪಿ ಕೊಡ್ತೀನಿ' [illegible] ಧಮಕಿ ಹಾಕಿದ. 'ಹಾಗಿದ್ರೆ ನಾವು ಎಸ್‌ಪಿ ಆಫೀ[illegible] ದೂರು ಕೊಡ್ತೀವಿ' ಎಂದು ಕಂಪ್ಲೆಂಟ್ ಕಾಪಿ[illegible] ನದಾಫ್‌ನಿಂದ ಕಿತ್ತುಕೊಂಡವರೆ ಎಸ್‌ಪಿ ಆ[illegible] ಹೋದರು.

ಅಷ್ಟರಲ್ಲಾಗಲೆ, ರಾತ್ರಿ ಎಂಟು ಗಂಟೆಯಾಗಿ[illegible] ಅವರು ಹೋದಾಗ ಎಸ್‌ಪಿ ರಮಣ್ ಗುಪ್ತ ಅಲ್[illegible] ಆಡಿಷನಲ್ ಎಸ್‌ಪಿಯವರಿಗೆ ದೂರು [illegible] ವಾಪಾಸ್ಸಾದರು. ಮರುದಿನ ಮತ್ತೆ ಹೋದಾಗಲೂ [illegible] ಸಿಗಲಿಲ್ಲ. ಈ ನಡುವೆ ಪ್ರಕರಣವನ್ನು ದಾಖಲಿಸಿ[illegible] ತನಿಖೆ ನಡೆಸುವಂತೆ ಆಡಿಷನಲ್ ಎಸ್‌ಪಿ [illegible] 14.10.2014ರಂದೇ ಎ.ಎಸ್.ಪಿ/ಪೆಟ್ಟಿ/301/20[illegible] ಸಂಖ್ಯೆಯಡಿ ಸರ್ಕಲ್ ಇನ್ಸ್‌ಪೆಕ್ಟರ್ ಅಬ್ದುಲ್ ಖ[illegible] ಸೂಚನೆ ನೀಡಿದ್ದರೂ ಕೇಸನ್ನು ದಾಖಲಿಸುವ ಉ[illegible] ಪೊಲೀಸರು ಹೋಗಿರಲಿಲ್ಲ.

ಪೊಲೀಸರ ಈ ನಿರ್ಲಕ್ಷ್ಯಕ್ಕೆ, ಮುಖ್ಯ [illegible] ಬಸವರಾಜ್‌ನ ಐಪಿಎಸ್ ಕಾಂಟ್ಯಾಕ್ಟ್‌ಗಳು. ಆತನ[illegible] ಐಪಿಎಸ್ ಶ್ರೇಣಿಯವನೆ. ತನ್ನ ಭಾನಗಡಿ [illegible]



ಡಿ.ಸಿ. ಬಂಧನಕ್ಕೆ ಮತ್ತು ವರ್ಗಾವಣೆ ಆಗ್ರಹಿಸಿ ಪ್ರತಿಭಟಿಸುತ್ತಿರುವ ಕಾರ್ಮಿಕ ಸಂಘಟನೆಗಳು

ಕೇಸ್ ವಾಪಾಸಿಗೆ 'ಮನಿ ಡೀಲ್'

ನಾಜಿಯಾ ಖಾನಂಳ ಮೇಲೆ ತಾನು ಬಿಟ್ಟ ಅಸ್ತ್ರಗಳು ಇಷ್ಟೆಲ್ಲಾ ಅವಾಂತರ ಸೃಷ್ಟಿಸುತ್ತದೆಂಬ ಕಲ್ಪನೆಯೂ ಡಿಸಿ ಬಸವರಾಜ್‌ಗೆ ಇರಲಿಲ್ಲ ಅನ್ನಿಸುತ್ತೆ ಕಾರ್ಮಿಕ ಸಂಘಟನೆಗಳು, ಮಾಧ್ಯಮಗಳ ಎಂಟ್ರಿಯಿಂದ ಇದು ದೊಡ್ಡ ಹಗರಣವಾಗುವ ಸೂಚನೆ ಸಿಗುತ್ತಿದ್ದಂತೆಯೇ ನಾಜಿಯಾಳಿಗೆ ಹಣದ ಆಮಿಷವೊಡ್ಡಿ ಕೇಸ್ ವಾಪಾಸ್ ಪಡೆಯಲು ಹವಣಿಸಿದ್ದ. ಇಲ್ಲಿನ ಡಿಪೋ ಮ್ಯಾನೇಜರ್ ಅಸೀಫುಲ್ಲಾ ಷರೀಫ್ ಮುಖಾಂತರ ಹೈದರ್ ಹಾಗೂ ಗಂಗಾಧರ್ ಎಂಬಿಬ್ಬರು ಡ್ರೈವರ್‌ಗಳನ್ನು ಸಂಧಾನಕ್ಕೆ ಕಳುಹಿಸಿದ್ದ. ಹಣ ತುಂಬಿದ ಬ್ಯಾಗಿನ ಸಮೇತ ನಾಜಿಯಾಳ ಮನೆ ಬಳಿ ಬಂದಿದ್ದ ಆ ಧೂರ್ತರು 'ಸುಮ್ನೆ ದೊಡ್ಡೋರ್ ಜೊತೆ ಯಾಕೆ ಕಿರಿಕ್ ಮಾಡ್ಕೋತಿಯ. ನಿನ್ನ ಮಕ್ಕಳಿನ್ನೂ ಸಣ್ಣವರು. ಇದರಲ್ಲಿ ಒಂದಿಷ್ಟು ಹಣ ಇದೆ. ಇದನ್ನು ತಗೊಂಡು ಜೀವನದಲ್ಲಿ ಆರಾಮಾಗಿರು. ಕೇಸ್ ವಾಪಾಸ್ ತಗೊ. ಡಿಸಿಯೇ ಅಪೀಲ್ ಮಾಡಿ ನಿನಗೆ ಡ್ಯೂಟಿ ಕೊಡಿಸ್ತಾರಂತೆ' ಎಂದು ಆಮಿಷವೊಡ್ಡಿದ್ದರು. ಅದಕ್ಕೂ ನಾಜಿಯಾ ಒಪ್ಪದೆ ದಿಟ್ಟವಾಗಿ ಹೋರಾಡುವುದಾಗಿ ಹೇಳಿದಾಗ 'ಡಿಸಿಯವರ ಮುಖ ನೋಡಿ ಕೇಸ್ ವಾಪಾಸ್ ತೆಗೆದುಕೊಳ್ಳದಿದ್ದರೇನಂತೆ, ನಮ್ಮ ಡಿಪೋ ಮ್ಯಾನೇಜರ್ ಮುಖ ನೋಡಿಯಾದರು ಕೇಸ್ ವಾಪಾಸ್ ತಗೋ. ಅವರೂ ನಿಮ್ಮವರೇ (ಮುಸ್ಲಿಂ) ತಾನೆ. ಅದಕ್ಕಾದ್ರೂ ಒಪ್ಕೊ' ಎಂದು ಅಂಗಲಾಚಿದ್ರೂ ಕೈಗೂಡದೆ ಅವರು ವಾಪಾಸ್ಸಾಗಿದ್ದರು.

ಅದಾದ ಕೆಲ ದಿನದ ನಂತರ ಕುಣಿಗಲ್ ಡಿಪೋದ ಮತ್ತಿಬ್ಬರು ಸಿಬ್ಬಂದಿಗಳು ನಾಜಿಯಾಳನ್ನು ಹುಡುಕಿಕೊಂಡು ಬಂದಿದ್ದರು. ಅವರ ಕೈಲೂ ಒಂದು ಬ್ಯಾಗಿತ್ತು, ಆದರೆ ಆ ಪುಣ್ಯಾತ್ಮರಿಗೆ ನಾಜಿಯಾ ಯಾರು? ಹೇಗಿರುತ್ತಾಳೆಂಬುದೇ? ಗೊತ್ತಿರಲಿಲ್ಲ ಅಂತ ಕಾಣುತ್ತೆ, ಅವಳ ಮನೆಯ ಮುಂದೇ ನಿಂತು, ಇಲ್ಲಿ ನಾಜಿಯಾ ಮನೆ ಎಲ್ಲಿ ಬರುತ್ತೆ ಅಂತ ಕೇಳಿದ್ದರು. ಈ ಮೊದಲೇ ಅನುಭವವಾಗಿದ್ದ ನಾಜಿಯಾ 'ಅವರು ಮನೆ ಖಾಲಿ ಮಾಡಿಕೊಂಡು ಹೋಗಿದಾರೆ, ಏನ್ ವಿಷಯ?' ಎಂದು ಕೇಳಿದಾಗ, 'ಏನಿಲ್ಲ ಅವರು ತಮ್ಮ ಯೂನಿಫಾರ್ಮನ್ನು ಅಲ್ಲೇ ಬಿಟ್ಟು ಬಂದಿದ್ದರು, ಕೊಟ್ಟು ಹೋಗೋದಿಕ್ಕೆ ಬಂದಿದ್ದವಷ್ಟೆ' ಎಂದು ನುಣುಚಿಕೊಳ್ಳಲು ನೋಡಿದ್ದರು. 'ಆಕೆ ಮತ್ತೆ ಇಲ್ಲಿಗೆ ಬರ್ತಾರೆ. ಆ ಬಟ್ಟೆಯ ಬ್ಯಾಗ್ ಕೊಟ್ಟು ಹೋಗಿ. ನಾನೇ ತಲುಪಿಸ್ತೀನಿ' ಅಂತ ನಾಜಿಯಾ ಕೇಳಿದರೆ, 'ಇಲ್ಲ, ಇದು ಡಿಪಾರ್ಟ್‌ಮೆಂಟ್ ಆಸ್ತಿ, ಹಾಗೆಲ್ಲಾ ಬೇರೆಯವರ ಕೈಲಿ ಕೊಡೋಕೆ ಆಗಲ್ಲ' ಎಂದು ಅಲ್ಲಿಂದ ಜಾರಿಕೊಂಡಿದ್ದರು.


ಒಂದೊಮ್ಮೆ ಬಸವರಾಜ್ ತಪ್ಪನ್ನೇ ಮಾಡಿಲ್ಲವೆಂದಾದರೆ ಈ ರೀತಿ ಹಣದ ಆಮಿಷವನ್ನೇಕೆ ಇಡಬೇಕಿತ್ತು? ಕೇಸು ದಾಖಲಾಗದಂತೆ ಪೊಲೀಸರ ಮೇಲೇಕೆ ಒತ್ತಡ ತರಬೇಕಿತ್ತು?

ಸಮಿತಿ ಇದೆ; ಆದರೆ, ಸತ್ತು ಹೋಗಿದೆ!

ಸುಪ್ರೀಂಕೋರ್ಟ್‌ನ ನಿರ್ದೇಶನದಂತೆ ಹೆಣ್ಣುಮಕ್ಕಳು ಎಲ್ಲೆಲ್ಲಿ ಕೆಲಸ ಮಾಡುತ್ತಾರೊ, ಅಲ್ಲಿ ಅವರ ಸುರಕ್ಷತೆಗೋಸ್ಕರ ...ಖಾ ಸಮಿತಿಯನ್ನು ರಚಿಸಿ ಲೈಂಗಿಕ ಶೋಷಣೆಯ ವಿರುದ್ಧ ಅವರಿಗೆ ರಕ್ಷಣೆ ನೀಡಬೇಕು. ಅಂತಹದ್ದೊಂದು ...ದ್ರ ಕಚೇರಿ ದೂರು ನಿವಾರಣಾ ಸಮಿತಿ ಕೆಎಸ್‌ಆರ್‌ಟಿಸಿಯಲ್ಲೂ ಇದೆ. ಆದರೆ ಅದು ಇರೋದು ಖುದ್ದು ...ಖೆ ಸಿಬ್ಬಂದಿಗಳಿಗೇ ಗೊತ್ತಿಲ್ಲ. 21.05.2001ರಲ್ಲಿ ಕಾರ್ಯಾರಂಭ ಮಾಡಿರುವ ಈ ಸಮಿತಿಗೆ ಎಂ.ಎಸ್. ...ಯತ್ರಿ ಎಂಬಾಕೆ ಅಧ್ಯಕ್ಷೆ. ಬಿ.ಎಸ್. ಲತಾ ಎನ್ನುವವರು ಕಾರ್ಯದರ್ಶಿ ಕಮ್ ಪಿಆರ್‌ಒ. ವಿಜಯಲಕ್ಷ್ಮಿ ಶೆಟ್ಟಿ ...ರೇತರ ಪ್ರತಿನಿಧಿಯಾಗಿದ್ದರೆ ಕೆ.ಎನ್. ಶ್ಯಾಮಲಾ, ಶಾರದಮ್ಮ, ಕೆ. ಮಧು, ಗೌರಮ್ಮ ಎಂ.ಎಚ್, ಭವಾನಿ, ...ಯಲಕ್ಷ್ಮಿ ಪಿ.ವಿ., ದೇವಕಿ ಆರ್ ಮೊದಲಾದ ಸದಸ್ಯರ ತಂಡವಿದೆ. ಈ ಸಮಿತಿಯ ಪರಮೋಚ್ಛ ಕಾಯಕವೆಂದರೆ ...ಸ್ಆರ್‌ಟಿಸಿಯ ಎಲ್ಲಾ ನಾಲ್ಕು ವಿಭಾಗಗಳಲ್ಲಿ ದಾಖಲಾಗುವ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಪರಿಶೀಲಿಸೋದು ...ತ್ತು ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನಿಸೋದು. ಅಂದರೆ ದೌರ್ಜನ್ಯ ಎಸಗಿದವರಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳೋದು.

ಆದರೆ ಈ ಸಮಿತಿಯ ಅಂಕಿಅಂಶಗಳನ್ನು ಗಮನಿಸಿದರೆ ಎಂತಹವರೂ ನಿಬ್ಬೆರಗಾಗಬೇಕು. ಅದು ಸ್ಥಾಪನೆಯಾದಂದಿನಿಂದ ...ವರೆ 2001ರಿಂದ 2014ರ ಏಪ್ರಿಲ್‌ವರೆಗೆ ಇಡೀ ಕೆ.ಎಸ್.ಆರ್.ಟಿ.ಸಿ ಇಲಾಖೆಯಲ್ಲಿ ಕೇವಲ ಏಳು ಮಾತ್ರ ...ತಹ ಪ್ರಕರಣಗಳು ದಾಖಲಾಗಿವೆಯಂತೆ. ಆ ಎಲ್ಲಾ ಪ್ರಕರಣಗಳನ್ನು ಸಮಿತಿ Solve ಮಾಡಿದೆಯಂತೆ. ಆದರೆ ...ವೊಂದು ಪ್ರಕರಣದಲ್ಲೂ ಯಾವೊಬ್ಬ ವ್ಯಕ್ತಿಗೂ ಶಿಕ್ಷೆಯಾಗಿಲ್ಲವಂತೆ. ದಿನಬೆಳಗಾದರೆ ಒಂದಿಲ್ಲೊಂದು ಡಿಪೋದಲ್ಲಿ ...ತಿ ಕಂಡಕ್ಟರ್‌ಗಳ ಮೇಲಿನ ಲೈಂಗಿಕ ದೌರ್ಜನ್ಯದ ವರದಿ ನೋಡುತ್ತಿರುವಾಗ 13 ವರ್ಷದಲ್ಲಿ ಏಳೇ ಪ್ರಕರಣ ...ವರೆ ನಂಬಲಿಕ್ಕಾದೀತೆ. ಯಾರಿಗೂ ಶಿಕ್ಷೆ ಆಗಿಲ್ಲವೆಂದ ಮೇಲೆ ಪ್ರಕರಣಗಳು ಇತ್ಯರ್ಥ ಆಗಿದ್ದಾದರೂ ಹೇಗೆ? ...ನ್ನೇ ವಾಪಾಸ್ ತೆಗೆಸುವ ಮೂಲಕವೇ? ಬೇರೆ ಡಿಪೋ ವಿಚಾರ ಬಿಡಿ ಕಳೆದ ನಾಲ್ಕೈದು ತಿಂಗಳ ಅವಧಿಯಲ್ಲೇ ...ಮಕೂರು ಡಿಪೋದಲ್ಲೇ ಎರಡು ಲೈಂಗಿಕ ಕಿರುಕುಳ ಪ್ರಕರಣಗಳು ಪೊಲೀಸ್ ಠಾಣೆಯ ಮೆಟ್ಟಿಲೇರಿವೆ. ...ಮ್ಮೆಯಾದರೂ ಈ ಸಮಿತಿ ಸಂತ್ರಸ್ತೆಯರನ್ನು ಭೇಟಿ ಮಾಡಿದೆಯೇ?......ಊಂ, ಹ್ಞೂಂ!

...ಮಹಿಳಾ ದಿನಾಚರಣೆಯಂದು ಒಂದಿಬ್ಬರು ಮಹಿಳಾ ಸಾಧಕಿಯರಿಗೆ ಸನ್ಮಾನ ಮಾಡುವುದನ್ನೇ ದೊಡ್ಡ ಸಾಧನೆ ...ಮ ಭ್ರಮಿಸಿದಂತಿದೆ ಈ ಸಮಿತಿ.




...ಟ್ಟಿಲೇರುವುದು ಖಾತ್ರಿಯಾಗು ...ತೆಯೇ ಎಸ್‌ಪಿ ರಮಣ್ ಗುಪ್ತನ ...ಲಕ ಪೊಲೀಸರನ್ನು ಸ್ತಬ್ದಗೊಳಿಸುವ ...ಯತ್ನವನ್ನು ಬಸವರಾಜ್ ಮಾಡಿದ್ದು ...ಗ ಬಹಿರಂಗವಾಗುತ್ತಿದೆ. ಕೊನೆಗೆ ...ಯೂ ಕಾರ್ಮಿಕ ಸಂಘಟನೆಯ ...ಖಂಡರಾದ ರಾಜಗೋಪಾಲ್, ...ಶ್, ರೇಣುಕಾನಂದ ಮೊದಲಾದವರಿಗೆ ...ಮ ಮುಟ್ಟಿಸಿದ್ದಳು. ಆಗ ಎಸ್‌ಐ ...ಫ್‌ಗೆ ಖುದ್ದಾಗಿ ಫೋನಾಯಿಸಿದ ...ರ್ಮಿಕ ಮುಖಂಡ ಗಿರೀಶ್ ಆಕೆಯ ...ಟನ್ನು ಯಾಕೆ ತೆಗೆದುಕೊಳ್ಳುತ್ತಿಲ್ಲವೆಂದು ವಿಚಾರಿಸಿದರು. ...'ಈ ವಿಷಯವೇ ಗೊತ್ತಿಲ್ಲ, ನನ್ನ ಬಳಿ ಅಂತಹ ...ಂಟ್ ತಗೊಂಡು ಯಾರೂ ಬಂದೇ ಇಲ್ಲ' ಅಂತ ...ಐ ನುಣುಚಿಕೊಳ್ಳಲು ಯತ್ನಿಸಿದ. ಠಾಣೆಯ ಪಕ್ಕದಲ್ಲೇ ... ಗಿರೀಶ್ 'ಈಗಲೇ ನಾನವರನ್ನು ಕರೆತರುತ್ತೇನೆ ...ಪ್ಲೇಂಟ್ ತೆಗೆದುಕೊಳ್ಳಿ' ಎಂದೇಳಿ ಅಲ್ಲಿಗೆ ...ೀಗುವುದರೊಳಗಾಗಿ ನಡಾಫ್ ಠಾಣೆಯಿಂದ ...ಪ್ತೆಯಾಗಿದ್ದ. ಎಷ್ಟು ಕಾದರೂ ಬಾರದಿದ್ದಾಗ ಅವರು ...ವಾಸ್ಸಾಗಿದ್ದರು.

ಇರ್ರಿ. ಸುಮ್ನೆ ಕೆಲಸ ಮಾಡ್ಕೊಂಡ್ ಇರೋದ್ ಬಿಟ್ಟು ಸಂಘಟನೆ ಕಟ್ಕೊಂಡ್ ಪ್ರಶ್ನೆ ಮಾಡೋದಕ್ ಬರ್ತೀರಾ' ಎಂದೆಲ್ಲಾ ಪಕ್ಕಾ ಬಿಹಾರಿ ಸ್ಟೈಲಿನಲ್ಲಿ ರಮಣ್ ಗುಪ್ತ ಡೈಲಾಗ್ ಚೆಲ್ಲಿದ.

ಕಾರ್ಮಿಕ ದ್ರೋಹಿ ಕಾನೂನುಗಳನ್ನು ಜಾರಿಗೆ ತರಲು ನೋಡುತ್ತಿರುವ ಪ್ರಧಾನಿ ಮೋದಿ ಮೊನ್ನೆಯಷ್ಟೆ ಫುಡ್ ಪಾರ್ಕ್ ಉದ್ಘಾಟನೆಗೆಂದು ತುಮಕೂರಿಗೆ ಬಂದು ಹೋದದ್ದು ಎಲ್ಲರಿಗೂ ನೆನಪಿರ ಬಹುದು. ಅವತ್ತು ಸೆಕ್ಯೂರಿಟಿಗೆಂದು ಮೋದಿಯ ಆಸುಪಾಸಿನಲ್ಲೇ ಓಡಾಡಿದ್ದ 'ಉನ್ಮಾದ' ಇನ್ನೂ ಗುಪ್ತನ ನೆತ್ತಿಯಿಂದ ಇಳಿದಂತೆ ಕಂಡಿಲ್ಲ. ಅದಕ್ಕೇ ಹಾಗೆಲ್ಲಾ ಮಾತನಾಡಿದ್ದ. ಎಸ್‌ಪಿಯ ದುರಹಂಕಾರದ 'ಭವಿಷ್ಯವಾಣಿ' ಕೇಳಿ ಕಾರ್ಮಿಕ ನಾಯಕರಿಗೂ ರೇಗಿತು.

'ಅಂತಹ ಕಾಲ ಬಂದಾಗ ಆಮೇಲೆ ನೋಡೋಣ. ಮೊದಲು ಈ ಪ್ರಕರಣದಲ್ಲಿ ಕಾನೂನು ಪ್ರಕಾರ ಹೇಗೆ ನಡೆದುಕೊಳ್ಳಬೇಕೊ ಹಾಗೆ ನಡೆದುಕೊಳ್ಳಿ. ಎಫ್‌ಐಆರ್ ದಾಖಲಿಸಿ ಕ್ರಮ ತಗೊಳ್ಳಿ' ಅಂತ ಒತ್ತಾಯಿಸಿದ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಸಮಾಧಾನಿಸಿ ಅವರನ್ನೆಲ್ಲಾ ಅಲ್ಲಿಂದ ಕಳುಹಿಸಿದ.



...ಕೊನೆಗೆ ಕಾರ್ಮಿಕ ಸಂಘಟನೆಗಳು ...ಲೀಸರು ದೂರು ಸ್ವೀಕರಿಸಿ ಬಸವ ... ವಿರುದ್ಧ ಕ್ರಮ ತೆಗೆದುಕೊಳ್ಳ ...ಂದು ಅಕ್ಟೋಬರ್ 18ರಂದು ...ಗಿಳಿದು ಪ್ರತಿಭಟಿಸಿದರು. ಅವತ್ತು ...ತಿಭಟನೆಗೆ ಬಂದೋಬಸ್ತ್ ಮಾಡಲು ...ದ್ದು ಅದೇ ನಡಾಫ್. ಆಗಲೇ ...ರ್ಮಿಕ ಮುಖಂಡರು ಆತನನ್ನು ಮುತ್ತಿ ...ಕೆ ಕಂಪ್ಲೆಂಟ್ 'ತೆಗೆದುಕೊಳ್ಳುತ್ತಿಲ್ಲ' ...ಎಂದು ಕೇಳಿದಾಗ 'ಅವರು ನನ್ನತ್ರ ಏನ್ ...ಪ್ಲೆಂಟ್ ಕೊಟ್ಟಿದ್ದಾರಾ, ಎಸ್‌ಪಿ ...ಛೇರಿಯಲ್ಲಿ ಕಂಪ್ಲೆಂಟ್ ಕೊಡ್ತೀವಿ ಅಂತ ಕಿತ್ಕೊಂಡ್ ...ದ್ದು. ಎಲ್ಲಿ ಕಂಪ್ಲೆಂಟ್ ಕೊಟ್ಟಿದಾರೊ ಅಲ್ಲೇ ಹೋಗಿ ...ರಿಸಿಕೊಳ್ಳಿ' ಎನ್ನುವ ದರ್ಪ ಉತ್ತರ ನೀಡಿದ್ದ.

ಈ ಸುದ್ದಿ ಮಾಧ್ಯಮಗಳಲ್ಲಿ ಬಿತ್ತರವಾಗಿ ರಂಗೇರುತ್ತಿದ್ದಂತೆಯೇ ಎಚ್ಚೆತ್ತುಕೊಂಡ ಪೊಲೀಸರು 25.10.2014ರಂದು ನಾಜಿಯಾಳ ಪ್ರಕರಣಕ್ಕೆ ಎಫ್‌ಐಆರ್‌ನ ಶರಾ ಬರೆದಿಟ್ಟಿದ್ದಾರೆ. ಸಮಾಜವನ್ನು ರಕ್ಷಿಸುವ ಹೊಣೆ ಹೊತ್ತ ಪೊಲೀಸರೆ ಅಡ್ಡದಾರಿ ಹಿಡಿದರೆ ಜನ ಇನ್ನಾರಿಂದ ತಾನೆ ರಕ್ಷಣೆ ನಿರೀಕ್ಷಿಸಿಯಾರು? ಎಸ್‌ಪಿ ಯಂತಹ ಜವಾಬ್ದಾರಿಯುತ ಹುದ್ದೆಯಲ್ಲಿರುವ ರಮಣ್ ಗುಪ್ತಾ ತನ್ನ ಸ್ಥಾನದ ಗೌರವವನ್ನೂ ಮರೆತು ಮೂರನೇ ದರ್ಜೆಯ ನಾಗರಿಕನಂತೆ ವರ್ತಿಸುತ್ತಾನೆಂದರೆ ಪೊಲೀಸ್ ಇಲಾಖೆಯ 'ಕರ್ತವ್ಯ ಪ್ರಜ್ಞೆ' ಎಷ್ಟು ಆಳಕ್ಕೆ ಕುಸಿದುಹೋಗಿರಬೇಡ. ಇದನ್ನೆಲ್ಲಾ ರಿಪೇರಿ ಮಾಡುವವರಾದರು ಯಾರು?

...ರ್ಮಿಕರು 'ವಾಶ್‌ಔಟ್' ಎಂದ ಎಸ್‌ಪಿ

...ಎಸ್‌ಐ ನಡಾಫ್ ಇಷ್ಟು ಬೇಜವಾಬ್ದಾರಿಯಾಗಿ ...ಯಿಸಿದ ಮೇಲೆ ಕಾರ್ಮಿಕ ಮುಖಂಡರಾದ ಗಿರೀಶ್, ...ಸ್ಟಿ ನಜೀಂ ಖಾನ್‌ರು ನಾಜಿಯಾಳ ಸಮೇತ ಎಸ್‌ಪಿ ...ಣ್ ಗುಪ್ತರನ್ನೇ ಭೇಟಿ ಮಾಡಲು ಹೋದರು. ...ಷಯನ್ನು ವಿವರಿಸಲು ಕಾರ್ಮಿಕ ನಾಯಕರು ...ದಾಗ ಎಸ್‌ಪಿ ರಮಣ್ ಗುಪ್ತಾ 'ನೀವೆಲ್ಲಾ ಯಾರು? ...ಗೂ ಇದಕ್ಕೂ ಏನು ಸಂಬಂಧ? ಅವಳ ಸಮಸ್ಯೆ ...ಅವ್ಳೇ ಕಂಪ್ಲೇಂಟ್ ಕೊಡ್ತಾಳೆ. ನೀವೆಲ್ಲಾ ಯಾಕ್ ...ದೀರಿ?' ಅಂತ ಅವರಿಗೇ ತಮ್ಮ ಪೊಲೀಸ್ ...ಯಲ್ಲಿ ಧಮಕಿ ಹಾಕಿದರು.

...ನಾವು ಕಾರ್ಮಿಕ ಮುಖಂಡರು. ಆಕೆಗೆ ಅನ್ಯಾಯ ... ಪೊಲೀಸಿನವರು ಕಂಪ್ಲೆಂಟ್ ತೆಗೆದುಕೊಳ್ಳದ್ದರಿಂದ ...ಲ್ಲಿ ಬರಬೇಕಾಯ್ತು' ಎಂದು ಕಾರ್ಮಿಕ ಮುಖಂಡರೂ ...ಗಿ ಉತ್ತರಕೊಟ್ಟರು. ಆಗ ಪಿತ್ತ ನೆತ್ತಿಗೇರಿದವನಂತೆ ...ಕ ಕಾರ್ಮಿಕರು, ನೀವೆಲ್ಲಾ? ಇನ್ನೆರಡೇ ವರ್ಷ, ನಿಮ್ಮ ...ಕ ಸಂಘಟನೆಗಳೆಲ್ಲ ವಾಶ್‌ಔಟ್ ಆಗ್ತಿರಿ ನೋಡ್ತಾ

ಎಐಟಿಯುಸಿ ಕಾರ್ಮಿಕ ಸಂಘಟನೆಯ ರಾಜ್ಯಾಧ್ಯಕ್ಷ ಅನಂತ ಸುಬ್ಬಾರಾವ್, ರಾಷ್ಟ್ರೀಯ ಮಹಿಳಾ ಫೆಡರೇಷನ್‌ನ ರಾಜ್ಯಾಧ್ಯಕ್ಷೆ ಜ್ಯೋತಿಯವರು ಇತ್ತೀಚೆಗೆ ಪತ್ರಿಕಾಗೋಷ್ಠಿ ನಡೆಸಿ ಎಸ್‌ಪಿ ರಮಣ್ ಗುಪ್ತಾನ ದುರಹಂಕಾರವನ್ನು ಬಿಚ್ಚಿಟ್ಟಿದ್ದಾರೆ. ಅಲ್ಲದೇ ಇದೇ ಅಕ್ಟೋಬರ್ 29 ರಂದು ತುಮಕೂರಿನಲ್ಲಿ ಪ್ರತಿಭಟನೆ ನಡೆಸಿದ ಕಾರ್ಮಿಕ ಸಂಘಟನೆಗಳು ತಪ್ಪಿತಸ್ಥ ಡಿಸಿ ಬಸವರಾಜ್ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಮತ್ತು ಕಾರ್ಮಿಕದ್ವೇಷಿ ಎಸ್‌ಪಿ ರಮಣ್ ಗುಪ್ತಾನನ್ನು ವಾಪಾಸ್ ಕರೆಸಿಕೊಳ್ಳಬೇಕೆಂದು ಬೃಹತ್ ಪ್ರತಿಭಟನೆ ನಡೆಸಿ ತುಮಕೂರು ಜಿಲ್ಲಾಧಿಕಾರಿಗೆ ಮನವಿಯನ್ನೂ ಸಲ್ಲಿಸಿದ್ದಾರೆ.

ಸರ್ಕಾರದ ಇಲಾಖೆಗಳಲ್ಲಿ ಇಂತಹ ಹೆಣ್ಣುಬಾಕ ಮತ್ತು ಉನ್ಮತ್ತ ಮನಸ್ಥಿತಿಯ ವ್ಯಕ್ತಿಗಳು ಉನ್ನತ ಅಧಿಕಾರದಲ್ಲಿದ್ದಾಗ ಸಮಾಜ ಸ್ವಾಸ್ಥ್ಯದಿಂದಿರಲಾದರು ಹೇಗೆ ಸಾಧ್ಯ? ಈ ಪ್ರಶ್ನೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಗೃಹಮಂತ್ರಿ ಕೆ.ಜೆ. ಜಾರ್ಜ್ ಉತ್ತರ ನೀಡಬೇಕಷ್ಟೆ.


● ಗಿರೀಶ್ ತಾಳಿಕಟ್ಟೆ

ಪಾಲಿಕೆ ಇಂಜಿನಿಯರ್ ಮೇಲೆ ಗಿಲಿಗಿಲಿ ಗೂಂಡಾಗಿರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಾಮಾಣಿಕ ಇಂಜಿನಿಯರ್ ಒಬ್ಬರನ್ನು ಅವರ ಕಚೇರಿಗೇ ನುಗ್ಗಿ ರೌಡಿಯೊಬ್ಬ ಅಟ್ಟಾಡಿಸಿ ಹೊಡೆದರೆ ಪಾಲಿಕೆ ಸದಸ್ಯರೇ ನಿಂತು ಪೊಲೀಸರಿಗೆ ದೂರು ಕೊಡದಂತೆ ತಡೆಯುವುದುಂಟೆ?

ಬಿಹಾರದಲ್ಲೋ ಯುಪಿಯಲ್ಲೋ ಇಂಥಾದ್ದೊಂದು ಘಟನೆ ನಡೆದಿದ್ದರೆ ಆ ಮಾತು ಬೇರೆ. ನಡೆದದ್ದು ರಾಜಧಾನಿ ಬೆಂಗಳೂರಿನ ರಾಜಾಜಿನಗರದಲ್ಲಿ!

ತಮಿಳುನಾಡು ಮಾಜಿ ಮು.ಮಂ. ಜಯಲಲಿತಾ ಪರಪ್ಪನ ಅಗ್ರಹಾರ ಜೈಲುಪಾಲಾದ ವೇಳೆ ಅವರಿಗೆ ಜಾಮೀನು ಕೊಡಿಸಲು ಸರ್ಕಾರಿ ವಕೀಲ ಭವಾನಿಸಿಂಗ್‌ಗೆ ಧಮಕಿ ಹಾಕಿದ ಗಿಲಿಗಿಲಿ ವೆಂಕಟೇಶನೆಂಬ ರೌಡಿಯ ಬಗ್ಗೆ ಪತ್ರಿಕೆ ಬರೆದಿತ್ತಲ್ಲವೆ? ಈಗ ಇದೇ ಗಿಲಿಗಿಲಿ ವೆಂಕಟೇಶ ಪಾಲಿಕೆ ಸಹಾಯಕ ಇಂಜಿನಿಯರ್ ನಾಗೇಶ್‌ರೆಡ್ಡಿಯವರನ್ನು ಬಿಬಿಎಂಪಿ ಕಚೇರಿಗೇ ನುಗ್ಗಿ ಹೊಡೆದಿದ್ದಾನೆ. ದುರಂತವೆಂದರೆ ಕಚೇರಿಗೇ ನುಗ್ಗಿ ತನ್ನನ್ನು ಹೊಡೆದ ಗಿಲಿಗಿಲಿ ವಿರುದ್ಧ ಪೊಲೀಸರಿಗೆ ದೂರು ನೀಡದಂತೆ ಎಇಇ ನಾಗೇಶರೆಡ್ಡಿಯವರನ್ನು ಭೇಟಿ ಮಾಡಿದ್ದು ನಾಲ್ವರು ಬಿಜೆಪಿ ಪಾಲಿಕೆ ಸದಸ್ಯರುಗಳು!



ಗಿಲಿಗಿಲಿ ವೆಂಕಟೇಶ ಅಲಿಯಾಸ್ ಎಂ.ಎಸ್. ವೆಂಕಟೇಶ್ ಸದ್ಯ ಬಿಬಿಎಂಪಿಯ ಅತ್ಯಂತ ಖತರ್‌ನಾಕ್ ಮತ್ತು ನಟೋರಿಯಸ್ ಕಂಟ್ರಾಕ್ಟರ್‌ಗಳ ಪೈಕಿ ಮೊದಲನೇ ಸ್ಥಾನದಲ್ಲಿದ್ದಾನೆ. ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ಮಂತ್ರಿ ಸುರೇಶ್ ಕುಮಾರ್‌ರನ್ನು ಮುಂದಿಟ್ಟುಕೊಂಡೇ ಬಿಬಿಎಂಪಿಯ ಅನಭಿಷಕ್ತ ದೊರೆಯಂತೆ ಮೆರೆದ. ಒಂದಾನೊಂದು ಕಾಲಕ್ಕೆ ಜೇಡರಹಳ್ಳಿ ತಂಡದಿಂದ ಹತನಾದ ಶ್ರೀರಾಂಪುರದ ರೌಡಿ ಸಿದ್ಧನ ಬಲಗೈ ಬಂಟನಾಗಿದ್ದ. ಸಿದ್ದನ ಶವದೆದುರು ಗೋಳಾಡಿ ಪ್ರತೀಕಾರಾರ್ಥ ಜೇಡರಹಳ್ಳಿಯನ್ನು ಮುಗಿಸುತ್ತೇನೆಂದು ಶಪಥಗೈದವನು ಕಾಲಕ್ರಮೇಣ ಜೆ.ಕೆ. ತಂಡದಲ್ಲೇ ಇದ್ದ ಚಂದ್ರನನ್ನು ಜೊತೆ ಹಾಕಿಕೊಂಡು ಬೋಗಸ್ ಬಿಲ್ ಕಂಟ್ರಾಕ್ಟು ಶುರುಹಚ್ಚಿಕೊಂಡ.

ಹಳೇಕಲ್ಲು ಹೊಸಬಿಲ್ಲು, ಕಳಪೆ ಟಾರು, ಬೋಗಸ್ ಬಿಲ್ಲು ದಂಧೆಯಲ್ಲೇ ರಾತ್ರೋರಾತ್ರಿ ಕೋಟ್ಯಾಧಿಪತಿಯಾದ ಗಿಲಿಗಿಲಿ ಪಾಲಿಕೆಯ ಭ್ರಷ್ಟ ಇಂಜಿನಿಯರ್‌ಗಳನ್ನು ಗೋವಾಕ್ಕೆ ಕರೆದೊಯ್ದು ಗುಂಡು, ತುಂಡು, ಚಂಡಿನ ಪಾರ್ಟಿ ಕೊಡಿಸಿ, ಅಲ್ಲಿ ಇಂಜಿನಿಯರ್‌ಗಳು ಕ್ಯಾಬರೆ ಕುಣಿದದ್ದನ್ನೇ ವೀಡಿಯೋ ಮಾಡಿಕೊಂಡು ಬ್ಲಾಕ್‌ಮೇಲ್‌ಗಿಳಿದ. ಪರಿಣಾಮವಾಗಿ ಇಡೀ ಬಿಬಿಎಂಪಿಗೇ ಗಿಲಿಗಿಲಿ ಪಾಳೇಗಾರನಾದ. ಪಾಲಿಕೆ ಕಮೀಷನರ್‌ರಿಂದ ಹಿಡಿದು ಹಾಲಿ ಕಾಂಗ್ರೆಸ್ ಸರ್ಕಾರದ ಮಂತ್ರಿ ದಿನೇಶ್ ಗುಂಡೂರಾಯರೂ ಗಿಲಿಗಿಲಿಯ ಕೈಚಳಕ ಕಂಡು ಬೆಕ್ಕಸ ಬೆರಗಾಗುವಂತಾಯ್ತು!

ಕಾಂಗ್ರೆಸ್ ಜಾಯಮಾನಕ್ಕೆ ತಕ್ಕಂತೆ ಮುಂದಿನ ಚುನಾವಣೆಗೆ ರಾಜಾಜಿನಗರಕ್ಕೆ ತಾನೇ ಕಾಂಗ್ರೆಸ್ ಅಭ್ಯರ್ಥಿಯಾಗಿ ಸುರೇಶ್‌ಕುಮಾರ್ ವಿರುದ್ಧ ನಿಲ್ಲುತ್ತೇನೆಂದೇ ಮುನ್ನೂರು ಕೋಟಿ ಮೊತ್ತದ ಬೋಗಸ್ ಬಿಲ್ ಹೊಡೆದ. ಈತ ರಾಜಾಜಿನಗರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗುವುದು ಕೂಡ ಸುರೇಶ್‌ಕುಮಾರ್ ಅನುಕೂಲಕ್ಕೇ ಎಂಬುದೂ ರಹಸ್ಯವೇನಲ್ಲ. ತನ್ನ ಬೋಗಸ್ ಬಿಲ್ ಕಾಂಟ್ರಾಕ್ಟ್ ದಂಧೆಗೆ ಪೂರಕವಾಗೇ ಆಯಾ ಚುನಾವಣೆ, ಭೂಗತಲೋಕ, ಗೂಂಡಾಗಿರಿ, ಫೈನಾನ್ಸಿಂಗ್, ಪಾಲಿಕೆ ಇಂಜಿನಿಯರ್‌ಗಳ ವರ್ಗಾವರ್ಗಿ ಎಲ್ಲವನ್ನೂ ನಿಭಾಯಿಸುತ್ತಲೇ ಬಂದವನು ಗಿಲಿಗಿಲಿ ವೆಂಕಟೇಶ.

ಇಂಥಾ ಐನಾತಿಗೆ ಮೀಟರ್ ಬಡ್ಡಿ, ಕಾಂಟ್ರಾಕ್ಟ್ ಸಾಲ ಇತ್ಯಾದಿಗಳಿಗೆ ಸಾತು ಕೊಡುವವನು ಇದೇ ಶ್ರೀರಾಂಪುರ ಲಕ್ಷ್ಮಿನಾರಾಯಣಪುರದ ಖದೀಮ ಮಾರ್ವಾಡಿ ಮನೋಜ್ ಕೊಠಾರಿ. ಈತ ಶಾಸಕ ಸುರೇಶ್‌ಕುಮಾರ್‌ಗೂ ಪರಮಾಪ್ತ ಮತ್ತು ಬೆಂಗಳೂರು ನಗರ ಬಿಜೆಪಿಯ ಪದಾಧಿಕಾರಿ ಕೂಡ. ಅನಾದಿಕಾಲದಿಂದಲೂ ಬಡಬಗ್ಗರ ತಟ್ಟೆ, ಚೊಂಬನ್ನೂ ಬಿಡದೆ ಗಿರವಿ ಇಟ್ಟುಕೊಂಡು ಬಡ್ಡಿ ಸುಲಿದೇ ಕುಬೇರನಾದ ಮನೋಜ್ ಕೊಠಾರಿ ಇತ್ತೀಚಿಗೆ ರಾಜಾಜಿನಗರದ ಇಎಸ್‌ಐ ಆಸ್ಪತ್ರೆ ಪಕ್ಕ ಭರ್ಜರಿ ಸೈಟೊಂದನ್ನು ಖರೀದಿಸಿದ್ದಾನೆ. ಪಾಲಿಕೆಯ ನಕ್ಷೆ, ನಿಯಮಾವಳಿ, ಕಟ್ಟಡದ ಪರವಾನಗಿ ಯಾವುದೂ ಈತನಿಗೆ ಲೆಕ್ಕಕ್ಕಿಲ್ಲ.

ಮಾರ್ವಾಡಿ ಮನೋಜ್ ಕೊಠಾರಿಯ ಅನಧಿಕೃತ ಕಟ್ಟಡದ ವಿರುದ್ಧ ಸಹಜವಾಗೇ ಅಕ್ಕಪಕ್ಕದ ನಾಗರಿಕರು ಪಾಲಿಕೆಗೆ ದೂರು ಕೊಟ್ಟಿದ್ದಾರೆ. ಈ ದೂರಿನ ಆಧಾರದ ಮೇಲೆಯೇ ಬಿಬಿಎಂಪಿಯ ರಾಮಮಂದಿರ ಡಿವಿಜನ್ನಿನ ಎಇಇ ನಾಗೇಶ್‌ರೆಡ್ಡಿ ಅಕ್ರಮ ಕಟ್ಟಡದ ವಿರುದ್ಧ ಮಾರ್ವಾಡಿಗೆ ನೋಟಿಸು ಕೊಟ್ಟಿದ್ದಾರೆ. ತನಗೇ ನೋಟೀಸು ಕೊಡುವ ಧೈರ್ಯ ಮಾಡಿದ ಪಾಲಿಕೆ ಇಂಜಿನಿಯರ್ ವಿರುದ್ಧ ಕೊಠಾರಿ ಚಾಡಿ ಚುಚ್ಚಿದ್ದು ಗಿಲಿಗಿಲಿ ವೆಂಕಟೇಶನಿಗೆ.

ಇನ್ನು ಕೇಳಬೇಕೆ? ಮೊನ್ನೆ ಅಕ್ಟೋಬರ್ 24ರ ಶುಕ್ರವಾರ ಅಪರಾಹ್ನ ಬರೋಬ್ಬರಿ 20 ಮಂದಿ ಬಂಟರನ್ನು ಕಟ್ಟಿಕೊಂಡಿದ್ದೇ ಗಿಲಿಗಿಲಿ ನೇರವಾಗಿ ರಾಜಾಜಿನಗರ ಆರ್‌ಟಿಒ ಕಾಂಪ್ಲೆಕ್ಸ್‌ನಲ್ಲಿರುವ ಬಿಬಿಎಂಪಿ ಕಚೇರಿಗೆ ನುಗ್ಗಿದ್ದಾನೆ. ಗಮನಾರ್ಹ ಸಂಗತಿಯೆಂದರೆ ಎಇಇ ನಾಗೇಶ್‌ರೆಡ್ಡಿಯವರ ಕಚೇರಿಯಿರುವುದು ಇದೇ ಆರ್‌ಟಿಒ ಕಾಂಪ್ಲೆಕ್ಸಿನಲ್ಲಿರುವ ರಾಜಾಜಿನಗರದ ಶಾಸಕ ಸುರೇಶ್ ಕುಮಾರ್ ಕಚೇರಿಯ ಪಕ್ಕದಲ್ಲೇ!

ಏಕಾಏಕಿ ಪಾಲಿಕೆ ಕಚೇರಿಗೆ ನುಗ್ಗಿದ ಗಿಲಿಗಿಲಿ ಬಂದು ಬಂದಿದ್ದೇ ಸಹಾಯಕ ಇಂಜಿನಿಯರ್ ನಾಗೇಶ್ ರೆಡ್ಡಿಯವರನ್ನು 'ಅಮ್ಮನ್, ಅಕ್ಕನ್...' ಎಂದೇ ವಾಚಾಮಗೋಚರ ಬಯ್ದಿದ್ದಾನೆ. 'ಕೊಠಾರಿ ನನ್ನ ಫ್ರೆಂಡು ಅಂತ ಗೊತ್ತಿದ್ದೂ ನೋಟಿಸ್ ಕೊಡೋಕೆ ಎಷ್ಟೋ ಧೈರ್ಯ ನಿನಗೆ' ಎಂದು ರೌಡಿ ವರಸೆ ತೋರಿದ ಗಿಲಿಗಿಲಿಗೆ ಪ್ರಾಮಾಣಿಕ ಅಧಿಕಾರಿ ನಾಗೇಶ್ ರೆಡ್ಡಿ 'ನಡಿಯೋ ಆಚೆ...' ಎಂದಿದ್ದಾರೆ. ಇಷ್ಟಾಗಿದ್ದೇ ತಡ ಪಿತ್ಥ ನೆತ್ತಿಗೇರಿದವನಂತೆ ಕೆಂಡಮಂಡಲನಾದ ಗಿಲಿಗಿಲಿ ಕೈ ಎತ್ತಿದ್ದೇ ನಾಗೇಶ್‌ರೆಡ್ಡಿಯವರ ಕಪಾಳಕ್ಕೆ ಬಾರಿಸಿಬಿಟ್ಟ. ಎದುರಿಗಿದ್ದ ಟೇಬಲ್ಲು ಕುರ್ಚಿಯನ್ನೆಲ್ಲ ಒದ್ದು ಬೀಳಿಸಿದ್ದೇ ಅಲ್ಲದೆ ಫೈಲುಗಳನ್ನೆಲ್ಲ ನೆಲಕ್ಕೆ ಹಾಕಿ ತುಳಿದ. ಕಂಗಾಲಾದ ಇಂಜಿನಿಯರ್ ನಾಗೇಶ್ ರೆಡ್ಡಿಯ ಶರ್ಟಿನ ಪಟ್ಟಿ ಹಿಡಿದದ್ದೇ ದರದರನೇ ಎಳೆದಾಡಿ ನೆಲಕ್ಕೆ ಕುಕ್ಕಿ ತುಳಿಯಾರಂಭಿಸಿದ. ಆಗ ಏಕಾಏಕಿ ಶಾಸಕ ಸುರೇಶ್‌ಕುಮಾರ್ ಅಲ್ಲಿ ಪ್ರತ್ಯಕ್ಷರಾಗಿದ್ದಾರೆ. ಆದರೆ ಸಂತೈಸಿದ್ದು ಮಾರ್ವಾಡಿ ಕೊಠಾರಿ ಮತ್ತು ರೌಡಿ ಗಿಲಿಗಿಲಿಯನ್ನು.

ಶಾಸಕರೇ ಹೊಡೆದವರ ನೆರವಿಗೆ ಬಂದ ಮೇಲೆ ತನಗೆಲ್ಲಿ ನ್ಯಾಯ ಎಂದಿದ್ದೇ ಇಂಜಿನಿಯರ್ ನಾಗೇಶ್, ಪಕ್ಕದಲ್ಲೇ ಇದ್ದ ರಾಜಾಜಿನಗರ ಪೊಲೀಸ್ ಠಾಣೆಗೆ ಓಡಿದ್ದಾರೆ. ಗಿಲಿಗಿಲಿ ಮತ್ತು ಮಾರ್ವಾಡಿಯ ವಿರುದ್ಧ ದೂರು ಬರೆಯತೊಡಗಿದ್ದಾರೆ. ಆದರೆ ಅಲ್ಲಿಗೂ ದಾಳಿಯಿಟ್ಟ ಗಿಲಿಗಿಲಿಯ ಜೊತೆಗೆ ಒಂದಲ್ಲ ಎರಡಲ್ಲ ನಾಲ್ವರು ಬಿಜೆಪಿ ಕೌನ್ಸಿಲರ್‌ಗಳು!

ಬಸವೇಶ್ವರನಗರದ ಪಾಲಿಕೆ ಸದಸ್ಯ ಪದ್ಮರಾಜ್, ಶಿವನಹಳ್ಳಿಯ ಕೌನ್ಸಿಲರ್ ಮಂಜುನಾಥ್, ಮಂಜುನಾಥ ನಗರದ ಕೃಷ್ಣಪ್ಪ ಮತ್ತು ಪ್ರಕಾಶ್ ನಗರದ ಕಾರ್ಪೊರೇಟರ್ ರವೀಂದ್ರನಾಯ್ಡು. ನಾಲ್ವರೂ ಬಿಜೆಪಿ ಕೌನ್ಸಿಲರ್‌ಗಳೇ. ಪೊಲೀಸ್ ಠಾಣೆಯನ್ನೂ ಬಿಡದೇ ನಾಲ್ವರು ಕೌನ್ಸಿಲರ್‌ಗಳ ಸಮೇತ ಬೆನ್ನಟ್ಟಿ ಬಂದ ಗಿಲಿಗಿಲಿ ವೆಂಕಟೇಶನ ತಾಕತ್ತು ನೋಡಿಯೇ ಇಂಜಿನಿಯರ್ ನಾಗೇಶ್ ಥರಗುಟ್ಟಿ ಹೋದರು. ಬಂದ ಕೌನ್ಸಿಲರ್‌ಗಳಾದರೂ ಸಾಂತ್ವನ ಹೇಳಬೇಕಿತ್ತಲ್ಲವೆ? ಬದಲಿಗೆ ಎಇಇ ನಾಗೇಶ್‌ಗೆ ಧಮಕಿಯಿಟ್ಟರು. ನಮ್ಮ ಮಾತನ್ನೂ ಮೀರಿ ನೀನು ಪೊಲೀಸ್ ಕಂಪ್ಲೇಂಟ್ ಕೊಟ್ಟು ಅದ್ದೇಂಗೆ ಬಚಾವಾಗ್ತಿಯೋ ಎಂದು ರವೀಂದ್ರ ಆವಾಜು ಬಿಟ್ಟರೆ ಮಂಜುನಾಥ ನಗರದ ಕೃಷ್ಣಪ್ಪ ದೂರು ಕೊಟ್ಟು ನೀನು ಬೆಂಗಳೂರಲ್ಲಿ ಉಳೀತಿಯಾ...? ಎಂದೇ ಹೆದರಿಸಿಬಿಟ್ಟ.

ನಾಲ್ವರು ಬಿಜೆಪಿ ಕೌನ್ಸಿಲರ್‌ಗಳು ಒಂದೆಡೆಯಾದರೆ ಮತ್ತೊಂದೆಡೆ ಮಾಜಿ ಮಂತ್ರಿಗಳು. ಒದೆ ತಿಂದಿದ್ದೇ ಪಾಲಿಗೆ ಬಂದ ಪಂಚಾಮೃತ ಎಂಬಂತೆ ಅವಮಾನ, ಅನ್ಯಾಯ, ಅಸಹನೆಯಿಂದ ಕುದಿಯುತ್ತಲೇ ಪೊಲೀಸ್ ಠಾಣೆಯಿಂದ ಹೊರಬಿದ್ದಿದ್ದಾರೆ ನಿಷ್ಠಾವಂತ ಇಂಜಿನಿಯರ್ ನಾಗೇಶ್ ರೆಡ್ಡಿ. ಸುದ್ದಿ ತಿಳಿದು ಸ್ಥಳಕ್ಕೆ ಬಂದಿದ್ದ ಟೀವಿ ವರದಿಗಾರರ ಕೈತುಂಬಾ ಗಿಲಿಗಿಲಿಯ ಪ್ರಸಾದ. ಖದೀಮ ಕಂಟ್ರಾಕ್ಟರೊಬ್ಬ ಪಾಲಿಕೆ ಕಚೇರಿಗೇ ನುಗ್ಗಿ ಪ್ರಾಮಾಣಿಕ ಇಂಜಿನಿಯರ್‌ರನ್ನು ಅಟ್ಟಾಡಿಸಿ ಹೊಡೆಯುತ್ತಾನೆಂದರೆ, ಅದೂ ವಂಚಕ ಮಾರ್ವಾಡಿಯೊಬ್ಬನ ಅನಧಿಕೃತ ಕಟ್ಟಡದ ರಕ್ಷಣೆಗಾಗಿ ಪಾಲಿಕೆ ಅಧಿಕಾರಿ ಒದೆ ತಿಂದೂ ಪೊಲೀಸರಿಗೊಂದು ದೂರು ನೀಡಲಾಗದ ದುರ್ಗತಿಯೆಂದರೆ ಬಿಬಿಎಂಪಿಯ ಪಾಡು ಏನಾಗಿರಬೇಡ?

ಬಿಜೆಪಿಯ ಕೌನ್ಸಿಲರ್‌ಗಳಿಗೇನೋ ಕೇಡಿ ಕಂಟ್ರಾಕ್ಟರ್‌ನ ಹಂಗು. ಆದರೆ ಕೆಸರಲ್ಲೂ ಕಮಲವಾಗೇ ಪ್ರಾಮಾಣಿಕತೆಯ ಸಂಕೇತದಂತಿರುವ ಸುರೇಶ್ ಕುಮಾರ್‌ಗೆ ಏನಾಗಿದೆ? ದುಷ್ಟ ಗುತ್ತಿಗೆದಾರನೊಬ್ಬ ಮಾಜಿ ಮಂತ್ರಿ, ಹಾಲಿ ಶಾಸಕ, ಸ್ಥಳೀಯ ಕೌನ್ಸಿಲರ್‌ಗಳಿಗಿಂತಲೂ ಬಲಾಢ್ಯನೆ? ಬಿಬಿಎಂಪಿಯಲ್ಲಿ ನಿಷ್ಠ ಅಧಿಕಾರಿಗಳಿಗೆ ಇದೇ ದುರ್ಗತಿಯೇ?

● ರಾ. ಸೋಮನಾಥ್

ಸೈಟ್ ದುರ್ಬಳಕೆ



ಸುಪ್ರೀಂ ಕುಣಿಕೆಯಲ್ಲಿ 'ಹಲ್ಕರಿ'ಗೌಡ

ಸದಾನಂದಗೌಡರ ಪಾಪದ ಕರ್ಮಗಳೆಲ್ಲ ಒಂದೊಂದಾಗಿ ಬೆನ್ನಟ್ಟಿ ಬಂದು ಉರುಳಾಗತೊಡಗಿವೆ. ಒಂದೆಡೆ ಮಗ ಮಾಡಿಕೊಂಡ ಕಾದು ಪಜೀತಿ, ಮತ್ತೊಂದೆಡೆ ಮಂತ್ರಿಯಾದ ಹೊಸ್ತಿಲಲ್ಲೇ ದುಪ್ಪಟ್ಟಾದ ಆಸ್ತಿ ರಾದ್ಧಾಂತ, ಸಾಲದೆಂಬಂತೆ ಈಗ ಸುತ್ತಿಕೊಳ್ಳುತ್ತಿರುವುದು ಸುಪ್ರೀಂಕೋರ್ಟ್ ಸಂಕೋಲೆ!

ಸದಾನಂದಗೌಡರು ಊರಿಗೆ ಉಪದೇಶ ಮಾಡುತ್ತಾರೆ ನಿಜ. ಹಾಗಂತ ದೇಶದ ಕಾನೂನಿಗೆ ತಾನೂ ತಲೆಬಾಗಿಸಬೇಕಲ್ಲವೆ? ಆದರೆ ಆಸ್ತಿ ವಿಷಯಕ್ಕೆ ಬಂದರೆ ಕೋರ್ಟು, ಕಾನೂನು, ನೀತಿ, ನಿಯಮಾವಳಿ ಯಾವುದರ ಹಂಗೂ ಅವರಿಗಿಲ್ಲ, ಪ್ರತಿಷ್ಠಿತ ಹೆಚ್‌ಎಸ್‌ಆರ್ ಲೇಔಟಿನ ತನ್ನ ಸ್ವತ್ತಿನ ವಿಷಯದಲ್ಲೂ ಸದಾನಂದಗೌಡರದ್ದು ಇದೇ ನಿರಂಕುಶ ಮನಸ್ಥಿತಿ. ಸುಪ್ರೀಂಕೋರ್ಟ್ ಆದೇಶ, ಅದನ್ನು ಪಾಲಿಸದಿದ್ದರೆ ಏನಾಗುತ್ತದೆ ಎಂಬ ಅಳುಕು ಯಾವುದೂ ಅವರಿಗೆ ಲೆಕ್ಕಕ್ಕಿಲ್ಲ.

ಸದಾನಂದಗೌಡ ಮತ್ತು ಶೃಂಗೇರಿಯ ಬಿಜೆಪಿ ಶಾಸಕ ಜೀವರಾಜ್ ಸೇರಿಕೊಂಡು ಐಷಾರಾಮೀ ಕಾಂಪ್ಲೆಕ್ಸ್ ಕಟ್ಟಿಸಹೊರಟಿದ್ದೇ ಈಗ ಅವರ ಕೇಂದ್ರ ಸಚಿವಗಿರಿಗೆ ಕಂಟಕವಾಗುತ್ತಿದೆ. ಅದು ಹೆಚ್‌ಎಸ್‌ಆರ್ ಬಡಾವಣೆ ಮೂರನೇ ಹಂತದ ಒಂದಲ್ಲ ಎರಡು ಭರ್ಜರಿ ಬಿಡಿಎ ಸೈಟುಗಳ ಕರ್ಮಕಾಂಡ. 50x80 ಅಳತೆಯ ಬಿಡಿಎ 'ಜಿ' ಕ್ಯಾಟಗರಿಯ ಈ ಎರಡು ನಿವೇಶನಗಳ ಪೈಕಿ ಒಂದು ಕೇಂದ್ರ ಮಂತ್ರಿ ಸದಾನಂದಗೌಡರದ್ದಾದರೆ ಮತ್ತೊಂದು ಮಾಜಿ ಮಂತ್ರಿ ಮತ್ತು ಹಾಲಿ ಬಿಜೆಪಿ ಶಾಸಕ ಜೀವರಾಜ್‌ಗೆ ಸೇರಿದೆ. 2008ರಲ್ಲಿ ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ವಾಸಕ್ಕೆ ತಮಗೆ ರಾಜಧಾನಿಯಲ್ಲೆಲ್ಲೂ ಮನೆಯಿಲ್ಲ ಎಂದು ಪ್ರಮಾಣಪತ್ರ ಸಲ್ಲಿಸಿಯೇ ಗೌಡ ಮತ್ತು ಜೀವರಾಜ್ ಮುಖ್ಯಮಂತ್ರಿಗಳ ವಿವೇಚನಾ ಕೋಟಾದ ಅಡಿ ಪಡೆದುಕೊಂಡ ನಿವೇಶನಗಳಿವು.

ಪತ್ರಕರ್ತೆ ನಾಗಲಕ್ಷ್ಮಿ

ಬಿಡಿಎ ನಿಯಮಾವಳಿಯಂತೆ ವಾಸದ ಉದ್ದೇಶಕ್ಕೆಂದು ಪಡಕೊಂಡ ನಿವೇಶನದಲ್ಲಿ ವಾಸದ ಮನೆಯನ್ನಷ್ಟೇ ಕಟ್ಟಬೇಕು. ಒಂದು ನಿವೇಶನದಲ್ಲಿ ಒಂದೇ ಮನೆಯಿರಬೇಕು.



ಪಡೆದ ನಿವೇಶನವನ್ನು ಯಾವುದೇ ಕಾರಣಕ್ಕೂ ಇಬ್ಭಾಗ ಮಾಡುವುದಾಗಲಿ, ವಾಣಿಜ್ಯ ಉದ್ದೇಶಕ್ಕೆ ಬಳಸುವುದಾಗಲಿ, ಅಕ್ಕಪಕ್ಕದ ನಿವೇಶನಗಳನ್ನು ಒಗ್ಗೂಡಿಸಿ ಕಾಂಪ್ಲೆಕ್ಸ್, ಅಪಾರ್ಟ್‌ಮೆಂಟ್ ನಿರ್ಮಿಸುವುದಾಗಲಿ ಮಾಡುವಂತಿಲ್ಲ, ಪ್ರಾರಂಭದ ಹತ್ತು ವರ್ಷಗಳ ಕಾಲ ಬೇರೆಯವರಿಗೆ ಪರಭಾರೆ ಮಾಡುವಂತೆಯೂ ಇಲ್ಲ, ಇಂಥ ಎಲ್ಲಾ ಬಿಡಿಎ ಷರತ್ತುಗಳಿಗೆ ಒಪ್ಪಿಕೊಂಡೇ ಸದಾನಂದಗೌಡರು ಮತ್ತು ಜೀವರಾಜ್ ಅಗದೀ ಕಮ್ಮಿರೇಟಗೆ ಮಂಜೂರು ಮಾಡಿಸಿಕೊಂಡು 'ಜಿ' ಕ್ಯಾಟಗರಿ ಸೈಟುಗಳನ್ನು ಸೇರಿಸಿ ಭರ್ಜರಿ ಕಾಂಪ್ಲೆಕ್ಸ್ ಕಟ್ಟಿ ದುಡ್ಡು ಮಾಡಲು ಹೋಗಿ ಪಜೀತಿಗೆ ಬಿದ್ದಿದ್ದಾರೆ.

ಪತ್ರಿಕೆ 2013ರಲ್ಲೇ ಜೋಡಿ ನಿವೇಶನ ಕರ್ಮಕಾಂಡವನ್ನು ಬಯಲಿಗೆಳೆದಿತ್ತು. ಅಕ್ಕಪಕ್ಕದ ತಮ್ಮ ನಿವೇಶನಗಳನ್ನು ಒಗ್ಗೂಡಿಸಿ ಎರಡನ್ನೂ ಒಟ್ಟಿಗೆ ಸೇರಿಸಿ ಅಲ್ಲಿ ಐದಂತಸ್ತಿನ ಕಾಂಪ್ಲೆಕ್ಸ್ ನಿರ್ಮಿಸುವ ದುರಾಶೆಗೆ ಸಹಜವಾಗೇ ಬಿಬಿಎಂಪಿಯ ನಿಯಮಾವಳಿಯೂ ಅಡ್ಡ ಬಂದಿದೆ. ಪ್ರಾರಂಭದಲ್ಲಿ ಪ್ರತ್ಯೇಕವಾಗಿ ಪ್ರತಿ ಸೈಟಿನಲ್ಲೂ ಮನೆ ಕಟ್ಟಿಸುತ್ತೇವೆಂದೇ ಸದಾನಂದಗೌಡ ಮತ್ತು ಜೀವರಾಜ್ ಬಿಬಿಎಂಪಿಗೆ ಅರ್ಜಿ ಹಾಕುತ್ತಾರೆ. ಕಟ್ಟಡ ನಕ್ಷೆಯೂ ಮಂಜೂರಾಗುತ್ತದೆ. ಆದರೆ ನಕ್ಷೆ ಮಂಜೂರಾದ ಎರಡೇ ತಿಂಗಳಿಗೆ Modified plan ಎಂಬ ಹೊಸದೊಂದು ವರಸೆ ಶುರುವಾಗುತ್ತದೆ.

ಅಂದರೆ ಎರಡೂ ನಿವೇಶನಗಳನ್ನು ಸೇರಿ ಅಲ್ಲಿ ಕಾಂಪ್ಲೆಕ್ಸ್ ನಿರ್ಮಿಸುವುದು!

ಮೊದಲೇ ವಾಸದ ನಿವೇಶನಗಳು. ಅಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್ ಸಾಧ್ಯವಿಲ್ಲವಾದ್ದರಿಂದ ಸಹಜವಾಗೇ ಬಿಬಿಎಂಪಿ ಬಿಜೆಪಿದ್ವಯರ ಅರ್ಜಿಯನ್ನು ತಿರಸ್ಕರಿಸುತ್ತದೆ. ಆ ಹೊತ್ತಿಗೆ ಯಡಿಯೂರಪ್ಪ ಜೈಲುಪಾಲಾಗಿ ಸದಾನಂದಗೌಡರೇ ಮುಖ್ಯಮಂತ್ರಿಯಾಗಿದ್ದರಲ್ಲ, ಯಾರು ತಾನೇ ಕೇಳಿಯಾರು?

ಅಧಿಕಾರದ ಅಟ್ಟಹಾಸ ಮತ್ತು ಸರ್ಕಾರದ ಪೌರುಷದಲ್ಲೇ ಸದಾನಂದ-ಜೀವರಾಜ್ ಜೋಡಿ ಎರಡೂ ನಿವೇಶನಗಳನ್ನು ಸೇರಿಸಿದ್ದೇ ಪಾಯ ಹಾಕೇ ಬಿಟ್ಟಿತು. ಬಿಡಿಎ ಷರತ್ತು ಉಲ್ಲಂಘನೆಯಾಗಿದ್ದು ಗೊತ್ತಿದ್ದೂ ಯಾವೊಬ್ಬ ಅಧಿಕಾರಿಗೂ ಅದನ್ನು ಪ್ರಶ್ನಿಸುವ ಧೈರ್ಯವೆಲ್ಲಿಂದ ಬಂದೀತು? ಆರೇ ತಿಂಗಳಲ್ಲಿ ಐದಂತಸ್ತಿನ ಕಟ್ಟಡವೂ ಎದ್ದು ನಿಂತಿತ್ತು, ಇದನ್ನು ಚಿತ್ರ ಸಮೇತ ಪತ್ರಿಕೆ ಬಯಲಿಗೆಳೆದದ್ದೇ ತಡ, ಮೊದಲ ದನಿಯಾಗಿ ನಿಂತಿದ್ದು ಜನಪರ ಹೋರಾಟಗಾರ್ತಿ ಮತ್ತು ಪತ್ರಕರ್ತೆ ನಾಗಲಕ್ಷ್ಮಿಬಾಯಿ. ಬಿಡಿಎ ನಿಯಮಾವಳಿ, ಬಿಬಿಎಂಪಿಯ ನಿಷ್ಠೂರ ನಡೆ ಎಲ್ಲವನ್ನೂ ದಾಖಲೆ ಸಮೇತ ಸಂಗ್ರಹಿಸಿದ ನಾಗಲಕ್ಷ್ಮಿಬಾಯಿ ನೇರವಾಗಿ ಹೈಕೋರ್ಟ್ ಮೆಟ್ಟಿಲೇರಿಬಿಟ್ಟರು.

ಸುಪ್ರೀಂಗೂ ದೋಖಾ

ಅದು 2012ರ ಅಕ್ಟೋಬರ್ 19ನೇ ತಾರೀಖು. ನಾಗಲಕ್ಷ್ಮಿ ಬಾಯಿಯವರ ಅರ್ಜಿಯನ್ನು ಕೂಲಂಕಷವಾಗಿ ವಿಚಾರಣೆ ನಡೆಸಿದ ಹೈಕೋರ್ಟ್ ಮೂರು ತಿಂಗಳೊಳಗೆ ಈ ಬಗ್ಗೆ ಕ್ರಮ ಜರುಗಿಸಿ ವರದಿ ನೀಡುವಂತೆ ಬಿಡಿಎಗೆ ಆದೇಶ ನೀಡಿತ್ತು, ಆ ಪ್ರಕಾರ ಬಿಡಿಎ ನಿರ್ದಾಕ್ಷಿಣ್ಯವಾಗಿ ಎರಡೂ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಹೀಗೆ ಮುಟ್ಟುಗೋಲು ಹಾಕಿಕೊಂಡ ನಿವೇಶನಗಳಿಗೆ ಬಿಡಿಎ ಯಾವುದೇ ಪರಿಹಾರವನ್ನೂ ನೀಡಬೇಕಿರಲಿಲ್ಲ, ಇದನ್ನು ಸೂಕ್ಷ್ಮವಾಗೇ ಗಮನಿಸಿದ ಸದಾನಂದಗೌಡರು ಎಲ್ಲಿ ತಮ್ಮ ಸ್ವತ್ತು ಕೈಬಿಡುತ್ತೋ ಎಂದು ಹೈಕೋರ್ಟ್ ಆದೇಶದ ವಿರುದ್ಧವೇ ಸುಪ್ರೀಂಕೋರ್ಟ್ ಮೊರೆ ಹೊಕ್ಕರು.


ಹೀಗೆ 2013ರ ಜನವರಿ 3 ರಂದು ಸುಪ್ರೀಂಕೋರ್ಟ್ ತಡೆಯಾಜ್ಞೆಗೆ ಸದಾನಂದಗೌಡ ಮತ್ತು ಜೀವರಾಜ್ ಮನವಿ ಸಲ್ಲಿಸಿದಾಗಲೂ ಸುಪ್ರೀಂಕೋರ್ಟ್ ಹೈಕೋರ್ಟ್ ಆದೇಶಕ್ಕೆ ತಡೆ ನೀಡಿತಾದರೂ ಕೆಲ ಷರತ್ತುಗಳನ್ನು ವಿಧಿಸಿತ್ತು, ಅದರಂತೆ ಈಗ ಏನು ಕಟ್ಟಡವಿದೆಯೋ ಅದರ ಹೊರತಾಗಿ ಯಾವುದೇ ಹೊಸ ಕಾಮಗಾರಿ ಮಾಡುವುದಾಗಲಿ, ಕಟ್ಟಡದ ವಿನ್ಯಾಸವನ್ನು ಬದಲಿಸುವುದಾಗಲಿ ಮಾಡುವಂತಿಲ್ಲ ಎಂದೇ ಸುಪ್ರೀಂಕೋರ್ಟ್ ಷರತ್ತು ಹಾಕಿತ್ತು.

ಆದರೆ ಅಧಿಕಾರ ಮತ್ತು ದುಡ್ಡಿನ ಮದಕ್ಕೆ ಬಿದ್ದ ಸದಾನಂದಗೌಡರಿಗೆ ಸುಪ್ರೀಂಕೋರ್ಟ್ ಆದೇಶ ಯಾವ ಲೆಕ್ಕ? ಇದಾಗಿ ಆರೇ ತಿಂಗಳಿಗೆ ಸಿಮೆಂಟ್ ಕಂಬಗಳ ಮಧ್ಯೆ ಚಪ್ಪಡಿ ಜೋಡಿಸಿದಂತಿದ್ದ ಕಟ್ಟಡಕ್ಕೆ ಏಕಾಏಕಿ ಗೋಡೆಗಳೆದ್ದವು. ರಾತ್ರೋರಾತ್ರಿ ಕಟ್ಟಡಕ್ಕೆ ಬಣ್ಣ ಬಳಿಯಲಾಯ್ತು. ಸದ್ದಿಲ್ಲದೆ ಒಳಗಿಂದೊಳಗೇ ಅಲಂಕಾರ, ಅಂತಸ್ತುಗಳ ನಿರ್ಮಾಣ, ಮಹಡಿ ಮೆಟ್ಟಿಲುಗಳು, ಅವುಗಳಿಗೆ ಗ್ರಿಲ್ಲು, ಗೋಡೆಗೆ ಪುಟ್ಟಿ, ಅದರ ಮೇಲೆ ಡಿಸ್ಟೆಂಪರ್, ಹೊರಗೆ ಸಜ್ಜಾಗಳ ನಿರ್ಮಾಣ, ಪೀಠೋಪಕರಣ, ಕಿಟಕಿ-ಬಾಗಿಲುಗಳ ಜೋಡಣೆ ಇತ್ಯಾದಿಗಳೆಲ್ಲ ಒಂದೊಂದಾಗಿ ರೂಪುಗೊಳ್ಳತೊಡಗಿದವು.

ಸುಪ್ರೀಂಕೋರ್ಟ್ ನೀಡಿದ ತಡೆಯಾಜ್ಞೆಗೆ ಹಾಕಿದ ಷರತ್ತುಗಳನ್ನು ನಿರ್ದಾಕ್ಷಿಣ್ಯವಾಗಿ ಉಲ್ಲಂಘಿಸಿದ್ದರು ಸದಾನಂದಗೌಡ. ಇದನ್ನು ಸೂಕ್ಷ್ಮವಾಗೇ ಗಮನಿಸುತ್ತಿದ್ದ ಪತ್ರಕರ್ತೆ ನಾಗಲಕ್ಷ್ಮಿಬಾಯಿ ಕೈಕಟ್ಟಿ ಕೂರಲಿಲ್ಲ. ನಿರ್ಮಾಣವಾಗುತ್ತಿದ್ದ ಕಟ್ಟಡದ ಕಾಮಗಾರಿಯ ವಿವಿಧ ಹಂತಗಳನ್ನು ತಮ್ಮ ಕ್ಯಾಮೆರಾದಲ್ಲಿ ಚಿತ್ರೀಕರಿಸಿಕೊಳ್ಳುತ್ತಲೇ ಬಂದರು. 2014ರ ಜೂನ್ 15ರ ಹೊತ್ತಿಗೆ ಸಿಮೆಂಟ್ ಅಸ್ಥಿಪಂಜರದಲ್ಲಿದ್ದ ಜೋಡಿ ಕಟ್ಟಡ ಸುಸಜ್ಜಿತ ಕಾಂಪ್ಲೆಕ್ಸ್ ಆಗಿ ಸಿಂಗಾರಗೊಂಡಿದ್ದಕ್ಕೆ ಫೋಟೋಗಳೇ ಪುರಾವೆ ಒದಗಿಸಿದ್ದವು. 2014ರ ಆಗಸ್ಟ್ 5ರಂದು ನೇರವಾಗಿ ಸುಪ್ರೀಂಕೋರ್ಟಿಗೇ ನ್ಯಾಯಾಲಯದ ಉಲ್ಲಂಘನೆಯ ದೂರು ದಾಖಲಿಸಿಬಿಟ್ಟರು.

ತಾನೇ ತೋಡಿದ ಹಳ್ಳಕ್ಕೆ

ಮೊದಲೇ ಹೈಕೋರ್ಟ್ ಆದೇಶದ ವಿರುದ್ಧ ತಡೆಯಾಜ್ಞೆ ಆದರಲ್ಲೂ ಮತ್ತೆ ಸುಪ್ರೀಂಕೋರ್ಟ್ ಆದೇಶ ಉಲ್ಲಂಘನೆಯೆಂದರೆ ಅದು ಸಣ್ಣ ತಪ್ಪೇನಲ್ಲ. ಇ... ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ ನ್ಯಾಯಾಲಯದ ಉಲ್ಲಂಘನೆ ವಿರುದ್ಧ ದೂರು ಕೊಟ್ಟಿದ್ದ ನಾಗಲಕ್ಷ್ಮಿಯವರಾದರೂ ಅದಕ್ಕೂ ಮುನ್ನ ಈ ಪ್ರಕರಣವ... ಸುಪ್ರೀಂಕೋರ್ಟಿಗೆ ತಂದಿದ್ದೇ ಸದಾನಂದಗೌಡರು. ಹೈಕೋರ್ಟ್ ಬಿಡಿಎಗೆ ನೀಡಿದ ಆಸ್ತಿ ಮುಟ್ಟುಗೋಲು ಕ್ರಮದ ಆದೇಶದ ವಿರುದ್ಧ ತಡೆ ಕೋರಿ ಅರ್ಜಿ ಸಲ್ಲಿಸುವಾಗಲೂ ಸದಾನಂದಗೌಡರು ಅದಕ್ಕೆ ಪುರಾವೆಯಾಗಿ ನೀಡಿದ್ದು ಕೇವಲ ಕಂಬ ಚಪ್ಪಡಿಗಳಷ್ಟೇ ಇದ್ದ ಅರ್ಧಂಬರ್ಧ...



IN THE SUPREME COURT OF INDIA

CIVIL APPELLATE JURISDICTION

SPECIAL LEAVE PETITION (CIVIL) No. 38453 OF 2012

In the matter of:

D. V. Sadananda Gowda ... Petitioner

Versus

Miss. K.G. Nagalaxmi Bai & Ors. ...Respondents

SUPPLEMENTARY AFFIDAVIT ON BEHALF OF RESPONDENT NO. 1

I, K.G. Nagalaxmi Bai, D/o K. C. Giriya Naik, Aged about 51 years, Residing at no. 8, 4th Cross, S.P. Extension, Malleswaram, Bangalore-560 003, do hereby solemnly affirm and state as under:

1. That I am the respondent No.1 in the above mentioned matter and being well conversant with the facts and circumstances of the case I am competent to swear the present affidavit.

2. That the respondent wishes to bring to the notice of this Hon'ble Court a significant development in the present matter whereby the petitioner of the captioned SLP as well as the petitioner in SLP No. 37226 of 2012 have willfully disobeyed this Court's order. It is pertinent to note that this Court by order dated 02-01-2013 had restrained the petitioners from carrying out further construction on the subject plots without the leave of the Court. The order dated 02-01-2013 reads as under:

"In the meantime, direction in the impugned order with regard to further action in terms of conditions No.4 and 10 in lease-cum-sale agreement shall remain stayed. However, the petitioners are also restrained from carrying on further construction on the subject plots without the leave of this Court."

However, the petitioner has completed the construction in all respects without taking leave ... the order was passed have been annexed with the counter affidavit filed by the present respondent.

ಸುಪ್ರೀಂಕೋರ್ಟ್ ಮುಂದೆ ಗೌಡ ಸಲ್ಲಿಸಿದ ಅರ್ಜಿ

Recent 14 photographs (taken on 15-06-2014) of the finished building, in contravention of the Hon'ble Supreme Court's order, are enclosed as Annexure - A to N.

Deponent

Verification:

I, the above named deponent do hereby verify at Bangalore on 22nd day of July, 2014 that the contents of the present counter affidavit is true to the best of my knowledge and belief and nothing material has been concealed there from.

Deponent

Shri Narendra Modiji,
Hon'ble Prime Minister of India,
10, Parliament House,
New Delhi-110001.

Respected Sir,

Sub.: Regarding Shri. D.V. Sadananda Gowda, Hon'ble Union Railway Minister. His assets doubled in just five months from Rs.9.88 crore at the time of Lokasabha nomination to Rs.20.35 crore now.

I had sent full details of the serious offences committed by Shri. Sadananda Gowda to your e-mail ID and also to B.J.P. National President Amit Shahji on 03-09-2014. However I am enclosing entire copy of those ... to you along with this letter.

The doubling of assets came to light when entire Press and Electronic ... in Karnataka exposed after an indepth analysis by the National Election Watch (NEW) and Association for Democratic Reforms (ADR) on 25-10-2014. Mr. Sadananda Gowda explains the reasons for his increase for the purchase of property on B.E.L. Road, Bangalore by borrowing a sum of Rs.8 crore ... Federal Bank and another Rs.2 crore as Rental Advance.

-2-

This bank is reputed in lending money to politicians. Secondly the ... institution which has paid an rental advance of Rs.2 crore is also ... examined.

ಪತ್ರಕರ್ತೆ ನಾಗಲಕ್ಷ್ಮಿ ಪ್ರಧಾನಿ ಮೋದಿಗೆ ನೀಡಿದ ದೂರು

ಡರಲ್ ಬ್ಯಾಂಕ್ ರಹಸ್ಯ ಮತ್ತು ಎಂ.ಎಸ್.ರಾಮಯ್ಯ ಧಣಿಗಳ ದಾರಿದ್ರ್ಯ? 0 ಕೋಟಿಯ ಸೊತ್ತನ್ನು 11 ಕೋಟಿಗೆ ಖರೀದಿಸಿದ ಮರ್ಮ!







ಳ್ಳ ಆಸ್ತಿ ಮತ್ತು ಕಪ್ಪು ಹಣದ ವಿಷಯಕ್ಕೆ ಬಂದರೆ ಸದಾನಂದಗೌಡರ ಪ್ಪುಗಳದ್ದೇ ಪ್ರತ್ಯೇಕ ಅಧ್ಯಾಯವಿದೆ. ಸದ್ಯ ಕೇಂದ್ರ ಮಂತ್ರಿಯಾದ ಐದೇ ಳಗೆ ದುಪ್ಪಟ್ಟಾದ ಅವರ ಆಸ್ತಿಯದ್ದೂ ಇದೇ ಕಥೆಯ.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಗೂ ಮುನ್ನ ತಮ್ಮ ಆಸ್ತಿ ಘೋಷಣಾ ಪತ್ನಿ ಪಾಟಿಯವರನ್ನೂ ಸೇರಿಸಿ ಸದಾನಂದಗೌಡರು ಲೆಕ್ಕ ಕೊಟ್ಟಿದ್ದು ಕೋಟಿಗೆ. ಅಂದರೆ ಕೇಂದ್ರ ರೈಲ್ವೇ ಮಂತ್ರಿಯಾಗಿ ಪ್ರಮಾಣ ಸ್ವೀಕಾರದ ಗೆ ಸದಾನಂದಗೌಡರ ಸ್ಥಿರ-ಚರಾಸ್ತಿಯ ಒಟ್ಟು ಮೊತ್ತ ಹೆಚ್ಚೂ ಕಮ್ಮಿ ಕೋಟಿ ಮಾತ್ರ. ಆದರೆ ಕೇಂದ್ರ ಮಂತ್ರಿಯಾದ ಐದೇ ತಿಂಗಳಲ್ಲಿ ರಾತ್ರೋರಾತ್ರಿ 20.35 ಕೋಟಿಗೇರಿದ ಪವಾಡವಾದರೂ ಎಂಥಾದ್ದು?

ಖುದ್ದು ಗೌಡರೇ ಪತ್ರಿಕಾಗೋಷ್ಠಿ ಕರೆದು ಮಾಡಿದ ಆಣೆ ಪ್ರಮಾಣದ ಪ್ರಕಾರ ಕೇವಲ ಬ್ಯಾಂಕ್ ಸಾಲ. ಬಿಇಎಲ್ ರಸ್ತೆಯಲ್ಲಿ ಬರೋಬ್ಬರಿ ಹತ್ತು ರೂಪಾಯಿಗಳ ಐಷಾರಾಮೀ ಕಾಂಪ್ಲೆಕ್ಸ್ ಖರೀದಿಸಿದ್ದಕ್ಕೆ ಮಂಗಳೂರಿನ ಫೆಡರಲ್ ಬ್ಯಾಂಕ್ ನೀಡಿದ 8 ಕೋಟಿಯ ಸಾಲ ಮತ್ತು ಕಾಂಪ್ಲೆಕ್ಸ್‌ನ ಬಾಡಿಗೆದಾರರು ನೀಡಿದ ಎರಡು ಕೋಟಿಯ ಮುಂಗಡದಿಂದಾಗಿ ತಾನು ಖರೀದಿಸಿದ ಸೊತ್ತಿನ ಮೊತ್ತದ ಫಲವಾಗಿ ತನ್ನ ಆಸ್ತಿ ಮೊತ್ತ ದುಪ್ಪಟ್ಟಾಗಿ ಕಾಣುವಂತೆಯಾದರೂ ವಾಸ್ತವವಾಗಿ ಅದು ಸಾಲವೇ ಹೊರತು ಸಂಪಾದನೆಯಲ್ಲ ಎನ್ನುವುದು ಗೌಡರ ವಾದ ತಾನೆ?

ಹಿಂದೆ ಬಿಜೆಪಿ ಸರ್ಕಾರವಿದ್ದಾಗ ಪ್ರಭಾವಿ ಮಂತ್ರಿಯಾಗಿದ್ದ ಶೋಭಾ ಕರಂದ್ಲಾಜೆ ಮೊದಲ ಬಾರಿಗೆ ಪ್ರಯೋಗಿಸಿದ ಕಪಟ ತಂತ್ರವಿದು. ತನ್ನ ಖಾಸಾ ದಂಧೆಯ ನಿಗೂಢ ಪಾಲುದಾರ ಆದರ್ಶ ಡೆವಲಪರ್ಸ್ ಧಣಿ ಜೈಶಂಕರ್‌ನಿಂದ ಮೂರು ಕೋಟಿಯಷ್ಟು ಸಾಲ ಪಡೆದು ತಾನು ಮಡಿಕೇರಿಯ ಕುಶಾಲನಗರದಲ್ಲಿ 160 ಎಕರೆ ಭೂಮಿ ಖರೀದಿಸಿದ್ದೇನೆಂದು ಕತೆ ಕಟ್ಟಿದ್ದರ ಹಿಂದಿನ ಮರ್ಮವೇ ಬೇರೆಯಿತ್ತು. ಅಸಲಿಗೆ ಸಾಲ ಪಡೆದಿದ್ದ ಜೈಶಂಕರ್‌ನ ಕಳ್ಳ ಹಣವೂ ಕೂಡಾ ಆ ವಿಳಾಸದಲ್ಲಿರಲಿಲ್ಲ. ಇದು ಹೊರ ಜಗತ್ತಿಗೆ ಗೊತ್ತಾಗುತ್ತಿದ್ದಂತೆ ಶೋಭಾ ಹೆಣೆದ ಹೊಸತಂತ್ರವೆಂದರೆ ಹೆಚ್‌ಎಸ್‌ಆರ್ ಲೇಔಟಿನಲ್ಲಿ ತಾನು ಪಡೆದಿದ್ದ 'ಜಿ' ಕ್ಯಾಟಗರಿ ಸೈಟನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ಒತ್ತೆ ಇಟ್ಟು ಮೂರು ಕೋಟಿಯ ಸಾಲ ಪಡೆದಿದ್ದೇನೆಂದು ಹೊಸಕತೆ ಹೊಡೆದಿದ್ದು. ವಿಚಿತ್ರವೆಂದರೆ ಎಸ್‌ಬಿಐನಿಂದ ಮೂರು ಕೋಟಿಯ ಸಾಲ ಪಡೆದಿದ್ದ ಅದೇ ಸೈಟಿನ ದಾಖಲೆ ಪತ್ರಗಳನ್ನೇ ಮತ್ತೆ ಫೆಡರಲ್ ಬ್ಯಾಂಕಿಗೆ ಕೊಟ್ಟು ಮತ್ತದ ಐದು ಕೋಟಿಯ ಸಾಲ ಪಡೆದಿದ್ದರು. ಅಂದರೆ ಎಸ್‌ಬಿಐನಿಂದ ಮೂರು ಕೋಟಿ ಸಾಲ ಮಾಡಿದ್ದು ಗೊತ್ತಾಗಿಯೂ ಫೆಡರಲ್ ಬ್ಯಾಂಕ್ ಮತ್ತೆ ಐದು ಕೋಟಿ ಸಾಲ ನೀಡಿತ್ತು. ದೇಶದ ಯಾವ ಬ್ಯಾಂಕೂ ಮಾಡದ ರಿಸ್ಕಿಗೆ ಫೆಡರಲ್ ಬ್ಯಾಂಕ್ ಕೈಹಾಕುತ್ತದೆಯೆಂದರೆ ಇಲ್ಲಿ ಮರ್ಮವೇ ಬೇರೆಯಿರಬೇಕಲ್ಲವೆ?

ಈಗ ಸದಾನಂದಗೌಡರು ನ್ಯೂ ಬಿಇಎಲ್ ರಸ್ತೆಯಲ್ಲಿ ಖರೀದಿಸಿದ 36 ಸಾವಿರ ಚದುರ ಅಡಿಗಳ ಕಾಂಪ್ಲೆಕ್ಸ್‌ನ ಮೌಲ್ಯವೇ 11.5 ಕೋಟಿಯಂತೆ. ಇದಕ್ಕೆಂದು ಮಂಗಳೂರಿನ ಫೆಡರಲ್ ಬ್ಯಾಂಕ್ 8 ಕೋಟಿಯ ಸಾಲ ನೀಡಿದ್ದೂ ಅಲ್ಲದೆ ಎಂ.ಎಸ್. ರಾಮಯ್ಯ ಫೌಂಡೇಶನ್ ಇದೇ ಕಟ್ಟಡಕ್ಕೆ ತಾನು ಬಾಡಿಗೆಗೆ ಬರುತ್ತೇನೆಂದು 2 ಕೋಟಿಯ ಅಡ್ವಾನ್ಸನ್ನೂ ಕೊಟ್ಟಿದೆಯಂತೆ. ಹೀಗೆ ಕೂಡಿ ಹಾಕಿದ ಹತ್ತು ಕೋಟಿಯನ್ನೇ ಕಟ್ಟಡದ ಮಾಲೀಕರಿಗೆ ನೀಡಿ ಗೌಡರು ಆಸ್ತಿ ಖರೀದಿಸಿದ್ದಾರಂತೆ. ವಿಚಿತ್ರವೆಂದರೆ ಕಟ್ಟಡದ ತಿಂಗಳ ಬಾಡಿಗೆಯೇ 18 ಲಕ್ಷವಂತೆ. ಹೀಗೆ ಬರುವ ಬಾಡಿಗೆಯಲ್ಲೇ ಸಾಲಕಟ್ಟಿಕೊಂಡು ಹೋಗುವುದು ಗೌಡರ ತಲೆಗಾರಿಕೆಯಂತೆ.

ಕೇಳಲು ಇದು ಚಂದವಾದರೂ ವಾಸ್ತವಕ್ಕೆ ಹೋಲಿಸಿದರೆ ಒಳ್ಳೇ ಚಂದಮಾಮಾ ಕತೆಯಂತಿದೆ. ಪ್ರತಿಷ್ಠಿತ ನ್ಯೂ ಬಿಇಎಲ್ ರಸ್ತೆಯಲ್ಲಿ 36 ಸಾವಿರ ಚದುರ ಅಡಿಯ ನಿರ್ಮಾಣಗೊಂಡ ಕಾಂಪ್ಲೆಕ್ಸನ್ನು ಕೇವಲ 11.5 ಕೋಟಿಗೆ ಯಾರಾದರೂ ಮಾರುತ್ತಾರೆಂದರೆ ಒಂದೋ ಆತನಿಗೆ ತಲೆಕೆಟ್ಟಿರಬೇಕು ಅಥವಾ ಕದ್ದ ಸೊತ್ತಾಗಿರಬೇಕು. ಎತ್ತಿಂದೆತ್ತ ಲೆಕ್ಕ ಹಾಕಿದರೂ ನ್ಯೂ ಬಿಇಎಲ್ ರಸ್ತೆಯ 36 ಸಾವಿರ ಚದುರ ಅಡಿಯ ಕಟ್ಟಡದ ಬೆಲೆ 40 ಕೋಟಿಗಿಂತಲೂ ಕಮ್ಮಿಯಿರಲು ಸಾಧ್ಯವೇ ಇಲ್ಲ. ಅಂಥಾದ್ದರಲ್ಲಿ 11.5 ಕೋಟಿಗೆ ಖರೀದಿಸಿದ್ದೇನೆಂದು ಸದಾನಂದಗೌಡರು ಹೇಳುತ್ತಿರುವುದೇ ಒಂದು ಕಪಟ ತಂತ್ರ.

ಇನ್ನೂ ತಮಾಷೆಯೆಂದರೆ ಆ ಕಟ್ಟಡಕ್ಕೆ 2 ಕೋಟಿ ಅಡ್ವಾನ್ಸ್ ಮತ್ತು ತಿಂಗಳಿಗೆ 18 ಲಕ್ಷದ ಬಾಡಿಗೆ ತೆತ್ತು ಅಲ್ಲಿಗೆ ಎಂ.ಎಸ್. ರಾಮಯ್ಯ ಫೌಂಡೇಷನ್ ಬಾಡಿಗೆಗೆ ಬರುವುದು. ಯಶವಂತಪುರ, ಮತ್ತಿಕೆರೆ, ಬಿಇಎಲ್ ರಸ್ತೆ ಸುತ್ತಮುತ್ತ ತಮ್ಮ ಖಾಲಿ ಬಿದ್ದ ಜಾಗೆಗಳನ್ನೇ ಇವತ್ತಿಗೂ ಕಟ್ಟಡ ನಿರ್ಮಿಸಿ ಬಳಸಿಕೊಳ್ಳಲಾರದಷ್ಟು ಶ್ರೀಮಂತವಾಗಿರುವ ಎಂ.ಎಸ್.ರಾಮಯ್ಯ ಸಂಸ್ಥೆಗೆ ಬಾಡಿಗೆಗೆ ಬರುವಂಥ ಯಾವ ದಾರಿದ್ರ್ಯವೂ ಇಲ್ಲ. ಎರಡು ಕೋಟಿ ಮತ್ತು 18 ಲಕ್ಷದ ಬಾಡಿಗೆ ಕೊಡಲು ಹುಚ್ಚೂ ಹಿಡಿದಿಲ್ಲ!

ಮೇಲುನೋಟಕ್ಕೆ ಸದಾನಂದಗೌಡರ ಆಸ್ತಿ ಖರೀದಿಯೊಂದು ಕಳ್ಳ ಲೆಕ್ಕವಾಗಿ ಗೋಚರಿಸುತ್ತದೆ. ಇನ್ನೂ ವಿಕಟವೆಂದರೆ ತಮ್ಮ ಆಸ್ತಿ ಘೋಷಣೆಯಲ್ಲಿ ಸದಾನಂದ ಗೌಡರು ಮಗ ಕಾರ್ತಿಕ್‌ಗೌಡನ ಪ್ರಸ್ತಾಪವನ್ನೇ ಮಾಡಿಲ್ಲ. ಅದರರ್ಥ ಗೌಡರ ಆಸ್ತಿಪಾಸ್ತಿಯ ವಿಷಯದಲ್ಲಿ ಮಗ ಕಾರ್ತಿಕ್‌ಗೌಡ ಈಗ ಸ್ವತಂತ್ರ ವ್ಯಕ್ತಿ. ಅಂದರೆ ತಂದೆಯ ಜೊತೆ ವಾಸವಿದ್ದೂ ಇನ್ನೂ ಮದುವೆ ಆಗದೆಯೇ ಪ್ರತ್ಯೇಕಗೊಂಡ ಲೆಕ್ಕಕ್ಕೇ ಸೇರಿಸಲ್ಪಟ್ಟಿದ್ದಾನೆ. ಕೇವಲ ಆಸ್ತಿ ಮುಚ್ಚಿಡುವ ಕಾರಣಕ್ಕಲ್ಲದೆ ಬೇರೆ ಯಾವುದೇ ಕಾರಣವಿಲ್ಲಿ ಕಾಣಿಸುತ್ತಿಲ್ಲ.

ಕಳೆದ ಚುನಾವಣೆಯಲ್ಲಿ ಬಾಗಲೂರಿನ ಗೋಮಾಳಕ್ಕೆ ಸೇರಿದ್ದ 7.5 ಗುಂಟೆ ಬಂಗಲೆಯನ್ನು ಗೌಡರ ಆಸ್ತಿಪಟ್ಟಿಗೆ ಸೇರಿಸಲಾಗಿತ್ತು. ಈಗ ವಿಕಾವಿಕಿ ಅದು ಆಸ್ತಿಪಟ್ಟಿಯಿಂದ ಮಾಯವಾಗಿದೆ. ಅಂದರೆ ಅದನ್ನು ಯಾರಿಗೆ ಮಾರಿದರು? ಎಷ್ಟು ದುಡ್ಡಿಗೆ ಮಾರಿದರು? ಮಗನ ಹೆಸರಿಗೆ ಮಾಡಿದ್ದಾರಾ? ಯಾವುದೂ ಗೊತ್ತಿಲ್ಲ. ಬಹುಶಃ ಇದನ್ನು ಮಾರಿದ ಕಪ್ಪು ಹಣದಲ್ಲೇ ಬಿಇಎಲ್ ರಸ್ತೆಯ ಕಾಂಪ್ಲೆಕ್ಸ್ ಖರೀದಿಸಿರಬಹುದೇ ಎಂದು ತಲೆಕೆಡಿಸಿಕೊಂಡರೆ ಅದಕ್ಕೂ ಆಸ್ಪದವಿಲ್ಲ. ಏಕೆಂದರೆ ಇಲ್ಲಿ 8 ಕೋಟಿಯ ಸಾಲವಿದೆ. ವಿಚಿತ್ರವೆಂದರೆ ಈ ಫೆಡರಲ್ ಬ್ಯಾಂಕಿನಿಂದಲೇ ಸದಾನಂದಗೌಡರು ಸಾಲ ಎತ್ತಿದ್ದೇಕೆ? ಶೋಭಾ ಕರಂದ್ಲಾಜೆಯೂ ಸೇರಿದಂತೆ ಬಿಜೆಪಿಯ ಯಡಿಯೂರಪ್ಪ ಮಗ ರಾಘವೇಂದ್ರ, ಕೆ.ಎಸ್. ಈಶ್ವರಪ್ಪ ಇವರೆಲ್ಲರೂ ತಾವು ಫೆಡರಲ್ ಬ್ಯಾಂಕಿನಿಂದಲೇ ಸಾಲ ಪಡೆದು ಹೊಸ ಹೊಸ ಆಸ್ತಿ ಖರೀದಿಸಿದ್ದೇವೆಂದು ಲೆಕ್ಕ ಕೊಡುತ್ತಾರೆ. ಫೆಡರಲ್ ಬ್ಯಾಂಕ್ ಎಂಬುದು ಬಿಜೆಪಿ ನಾಯಕರ ಪಾಲಿನ ಸ್ವಿಸ್ ಬ್ಯಾಂಕೆ? ಅಥವಾ ಅದರ ಮ್ಯಾನೇಜರ್‌ಗಳೆಲ್ಲ ಬಿಜೆಪಿಯವರ ಬೇನಾಮಿಗಳೆ? ತನಿಖೆ ಮಾಡುವವರ್‍ಯಾರು?

ಹಿಂದಿದ್ದ ಹೆಚ್‌ಎಸ್‌ಆರ್ ಲೇಔಟಿನ ಕಟ್ಟಡ



ಕೋರ್ಟ್ ಆದೇಶ ಉಲ್ಲಂಘಿಸಿ ಪೂರ್ಣಗೊಂಡ ನಂತರ





ಫೋಟೋ ಪ್ರತಿಗಳನ್ನೇ. ಹಾಗೊಮ್ಮೆ ಇಡೀ ಪೂರ್ಣಗೊಂಡಿದ್ದೇ ಆಗಿದ್ದರೆ ಅರ್ಜಿ ಸಲ್ಲಿಸುವಾಗಲೇ ಫೋಟೋಗಳಿರಬೇಕಿತ್ತು. ಅಂದರೆ ದಗೌಡರಿಲ್ಲಿ ರೆಡ್‌ಹ್ಯಾಂಡ್ ಸಿಕ್ಕಿಬಿದ್ದಿದ್ದಾರೆ.

ಹಾಕುವಾಗಲೇ ಕಳಿಬರದಂತಿದ್ದ ಕಟ್ಟಡದ ಗಳನ್ನು ಕೋರ್ಟಿಗೆ ಸಲ್ಲಿಸಿ ಈಗ 'ನಾವೇನು ಟಿಲ್ಲ, ಸುಪ್ರೀಂಕೋರ್ಟ್ ತಡೆಗೂ ಮೊದಲೇ ಮುಗಿದಿತ್ತು, ತನಿಯಾಜ್ಞೆಯ ನಂತರ ನಾವು ಮಗಾರಿಯನ್ನೂ ಮಾಡಿಲ್ಲ' ಎಂದರೆ ಸುಬಲು ಕೋರ್ಟ್ ಹಾಗೇ ಕಣ್ಣು ಮುಚ್ಚಿಕುಳಿತಿಲ್ಲವಲ್ಲ!

ಗೆ ಸದಾನಂದಗೌಡರೇ ಕೋರ್ಟಿಗೆ ಸುಳ್ಳು ರೆ ಮತ್ತು ನಿಚ್ಚಳವಾಗಿ ಸುಪ್ರೀಂಕೋರ್ಟ್ ನ್ನು ಉಲ್ಲಂಘಿಸಿದ್ದಾರೆ. ಅದೂ ಹಾದೇ ನೀಡಿದ ಮತ್ತು ಫೋಟೋಗಳ ಮೂಲಕ.

ದ್ರ ಮಂತ್ರಿಯೊಬ್ಬ ಉದ್ದೇಶಪೂರ್ವಕವಾಗಿ ರ್ಟ್ ಆದೇಶವನ್ನು ಉಲ್ಲಂಘಿಸುತ್ತಾನೆಂದರೆ, ಇಂಥ ಪ್ರಕರಣಗಳನ್ನು ಸುಪ್ರೀಂಕೋರ್ಟ್ ಲಘುವಾಗಿ ಪರಿಗಣಿಸುವ ಮಾತೇ ಇಲ್ಲ. ಈ ಹಿಂದೆ ಕರ್ನಾಟಕ ಸರ್ಕಾರದ ಮುಖ್ಯಕಾರ್ಯದರ್ಶಿಯಾಗಿದ್ದ ವಾಸುದೇವನ್‌ರಂಥ ಹಿರಿಯ ಐಎಎಸ್ ಅಧಿಕಾರಿಯನ್ನು ಬಿಡದೆ ಹೈಕೋರ್ಟ್ ಜೈಲಿಗಟ್ಟಿರುವಾಗ ಇನ್ನು ಸುಪ್ರೀಂಕೋರ್ಟ್ ಕೇಂದ್ರ ಮಂತ್ರಿಯನ್ನು ಬಿಡುತ್ತಾ?

ಕಾನೂನು ಗೊತ್ತಿದ್ದೂ, ಪಾಲಿಸಬೇಕಾದ ಜವಾಬ್ದಾರಿಯಿದ್ದೂ ಕೇಂದ್ರ ಮಂತ್ರಿಯೊಬ್ಬ ಸುಪ್ರೀಂಕೋರ್ಟ್ ಆದೇಶವನ್ನು ಧಿಕ್ಕರಿಸುತ್ತಾನೆಂದರೆ ಅದು ಅಧಿಕಾರದ ಅಟ್ಟಹಾಸವಲ್ಲದೆ ಮತ್ತೇನಲ್ಲ. ಬೇರೆ ಯಾವ ಪ್ರಕರಣವಲ್ಲದೆ ಹೋದರೂ ಈ ಪ್ರಕರಣದಲ್ಲಿ ಸದಾನಂದಗೌಡರು ತಪ್ಪಿನ ಅರಿವಿದ್ದೂ ಅದನ್ನು ಉಲ್ಲಂಘಿಸಿದ್ದಾರೆ. ಹೆಚ್ಚೆಂದರೆ ಜೈಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳಲು ಒಂದಷ್ಟು ಕಾಲಹರಣ ಮಾಡಬಹುದಷ್ಟೆ. ಆದರೆ ಇವತ್ತಲ್ಲ ನಾಳೆ ಜೈಲಿಗೆ ಹೋಗುವುದಂತೂ ಗ್ಯಾರಂಟಿ. ಅಷ್ಟೇ ಅಲ್ಲ ಬಿಡಿಎ ವತಿಯಿಂದ ಪಡೆದ ಎರಡೂ 'ಜಿ' ಕ್ಯಾಟಗರಿ ಸೈಟುಗಳು ಕೂಡ ಜಪ್ತಿ ಆಗುವುದೂ ಶತಸ್ಸಿದ್ಧ. ಏನೇ ಸತ್ಯಹರಿಶ್ಚಂದ್ರನ ಪೋಜು ಕೊಟ್ಟರೂ ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲವಂತೆ. ಸದಾನಂದಗೌಡರ ವಿಷಯದಲ್ಲಿ ಇದೀಗ ಒಂದೊಂದಾಗಿ ನಿಜವಾಗುತ್ತಿದೆ. ಭಾರತೀಯ ಪರಂಪರೆ, ಆದರ್ಶದ ಮಾತಾಡುತ್ತಲೇ ಅವರ ಮಗನ ಹೆಣ್ಣುಬಾಕತನ ಜಗಜ್ಜಾಹೀರಾಯಿತು. ಅಕ್ರಮ ಆಸ್ತಿಗಳು ಒಂದೊಂದಾಗಿ ಬೆಳಕಿಗೆ ಬಂದವು. ರಾಜಕೀಯವಾಗಿ ತನ್ನ ಕೈಹಿಡಿದು ರಾಜ್ಯದ ಮುಖ್ಯಮಂತ್ರಿ ಪಟ್ಟಕ್ಕೇರಿಸಿದ ಗಾಡ್‌ಫಾದರ್ ಯಡ್ಡಿಗೇ ವಿಶ್ವಾಸಘಾತ ಬಗೆದದ್ದೂ ಗೊತ್ತಾಯಿತು. ಈಗ ಪ್ರತಿಷ್ಠಿತ ರೈಲ್ವೇ ಮಂತ್ರಿಯಾಗಿದ್ದೂ ಸುಪ್ರೀಂಕೋರ್ಟ್ ಆದೇಶವನ್ನು ಧಿಕ್ಕರಿಸಿದ ದುರಹಂಕಾರ ಬೇರೆ.

ಸದಾನಂದಗೌಡರ ಜೊತೆ ಅವರ ಪರಮಾಪ್ತ ಜೀವರಾಜ್ ಕೂಡ ಹಾಡಿಕ್ಕೆ ಕಂದಾಯ ಕಟ್ಟಬೇಕಾಗಿರುವುದು ಎಷರಾನುವೇ ಸರಿ. ಹುತಕರ್ತ ನಾಗಲಕ್ಷ್ಮಿಯವರ ದಿಟ್ಟತನ ಮತ್ತು ಹೋರಾಟವನ್ನು ನಾಡಿನ ಪ್ರಜ್ಞಾವಂತರೆಲ್ಲರೂ ಬೆಂಬಲಿಸಲೇ ಬೇಕಿದೆ.

● ರಾ. ಸೋಮನಾಥ್







ಮೂಢನಂಬಿಕೆಗಳು ಬಸವಧರ್ಮಕ್ಕೆ ವಿರುದ್ಧ

ಮೂಢನಂಬಿಕೆ ಹೋಗಬೇಕಾದರೆ ವಿಚಾರಕ್ರಾಂತಿ ಯಾಗಬೇಕು. ಆದರೆ ದಯಾಭಾವವಿಲ್ಲದೆ ವಿಚಾರಕ್ರಾಂತಿ ಯಾಗದು. ಅಂತೆಯೆ ಬಸವಣ್ಣನವರು ದಯವೇ ಧರ್ಮದ ಮೂಲ ಎಂದು ತಿಳಿಸಿದ್ದಾರೆ. ದಯೆಯು ಧರ್ಮದ ಮೂಲವೂ ಆಗುವುದು, ಸಮಾನತೆಯ ಮೂಲವೂ ಆಗುವುದು, ಮೂಢನಂಬಿಕೆಗಳನ್ನು ಹೊಡೆದೋಡಿಸು ವುದಕ್ಕೂ ಇದೇ ಮೂಲವಾಗುವುದು.

ದಲಿತರನ್ನು ಕೆಲವರು ಮೇಲ್ಜಾತಿಯುವರು ಮುಟ್ಟಿಸಿಕೊಳ್ಳಲು ಹಿಂಜರಿಯುತ್ತಾರೆ. ಮುಟ್ಟಿದರೆ, ಮೈಲಿಗೆಯಾಗುವುದೆಂಬ ಮೂಢನಂಬಿಕೆಯಿಂದಾಗಿ ಅವರು ಮಾನಸಿಕವಾಗಿ ಹಿಂದುಳಿದವರಾಗಿರುತ್ತಾರೆ. ಆದರೆ ದಲಿತರ ಮಗುವೊಂದು ನೀರಿನಲ್ಲಿ ಮುಳುಗುತ್ತಿರುವ ಸಂದರ್ಭದಲ್ಲಿ ಅಂಥವರು ಆ ಮಗುವನ್ನು ರಕ್ಷಿಸಿದರೆ, ಮೂಢನಂಬಿಕೆಯಿಂದ ಹೊರಬಂದು ವೈಚಾರಿಕತೆಯ ಕಡೆಗೆ ಸಾಗುವಂಥವ ರಾಗುತ್ತಾರೆ. ಅಸ್ಪೃಶ್ಯತೆ ಕೂಡ ಮೂಢನಂಬಿಕೆ ಎಂಬುದರ ಅರಿವಾದಾಗ ಮಾತ್ರ ಮೇಲ್ಜಾತಿಯವರು ಅಂಥ ಅನಿಷ್ಟ ಪದ್ಧತಿಯಿಂದ ಹೊರಬರಲು ಸಾಧ್ಯ. ಹೀಗೆ ಪ್ರತಿಯೊಬ್ಬರಲ್ಲಿ ವಿಚಾರಕ್ರಾಂತಿಯಾದಾಗ ಬಸವಣ್ಣನವರು ಕಟ್ಟಿದ್ದ ಸಮಾನತೆಯ ಸಮಾಜ ಮತ್ತೆ ರೂಪ ತಾಳಲು ಸಾಧ್ಯ. ಹೀಗೆ ಎಲ್ಲ ರೀತಿಯ ಸಮಾನತೆಯನ್ನು ಬಯಸುವ ಮನುಷ್ಯರು ಮಾತ್ರ ವ್ಯಕ್ತಿತ್ವ ವಿಕಸನಗೊಂಡ ಮನುಷ್ಯರು.

ಜೀವಕಾರುಣ್ಯವಿಲ್ಲದೆ ವ್ಯಕ್ತಿತ್ವವಿಕಸನಗೊಳ್ಳದು. ವ್ಯಕ್ತಿತ್ವ ವಿಕಸನಗೊಳ್ಳದೆ ಸಮತಾಭಾವ ಬರುವುದಿಲ್ಲ. ಸಮತಾಭಾವ ಬರದೆ ದಾಸೋಹ ಭಾವ ಬರುವುದಿಲ್ಲ, ದಾಸೋಹ ಭಾವ ಬರದೆ ಲಿಂಗವಂತನಾಗುವುದಿಲ್ಲ, ಇದು ಲಿಂಗತತ್ವ. ಹೀಗೆ ಲಿಂಗವಂತನ ಮೂಲ ಹೃದಯವಂತಿಕೆ ಯಲ್ಲಿದೆ. ಈ ಹೃದಯವಂತಿಕೆ ಮೂಲಕವೇ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಮಾನವಧರ್ಮದ ಅರಿವು, ಸಮತಾಭಾವ ಮತ್ತು ವೈಚಾರಿಕಪ್ರಜ್ಞೆ ಮೂಡಲು ಸಾಧ್ಯ. ಆ ಮೂಲಕ ಮೂಢನಂಬಿಕೆಗಳಿಂದ ಹೊರಬರಲು ಸಾಧ್ಯ.

ಜಗತ್ತಿನಲ್ಲಿ ವಿವಿಧ ಧರ್ಮಗಳಿವೆ. ಅವುಗಳಲ್ಲಿ ಕೆಲವು ಹಿಂಸಾಭಕ್ತಿಯಿಂದ ಕೂಡಿವೆ. ಮತ್ತೆ ಕೆಲವು ದಯಾಭಕ್ತಿಯಿಂದ ಕೂಡಿವೆ. ಹಿಂಸಾಭಕ್ತಿಯಲ್ಲಿ ಬಲಿ ಕೊಡುವ ಪದ್ಧತಿ ಇದೆ. ವೈದಿಕರು ಯಜ್ಞಯಾಗಗಳಲ್ಲಿ ಪಶುಬಲಿ ಕೊಡುವ ಹಿಂಸಾ ಪದ್ಧತಿ ಇಂದಿಗೂ ಅಲ್ಲಲ್ಲಿ ಉಳಿದುಕೊಂಡು ಬಂದಿದೆ. ದೇವಿಗೆ ನರಬಲಿ ಮತ್ತು ಕೋಣಬಲಿ ಕೊಡುವ ಕ್ರೂರ ಪದ್ಧತಿ ಕೂಡ ಭಾರತದಲ್ಲಿ ಇಂದಿಗೂ ಜೀವಂತವಿದೆ. ಮಾಯಮಾಟಗಳಿಗೆ ಸಂಬಂಧಿಸಿ ದಂತೆ ಮಕ್ಕಳ ಬಲಿ ಕೊಡುವ ಸುದ್ದಿಗಳು ಆಗಾಗ ಪ್ರಕಟವಾಗುತ್ತಲೇ ಇರುತ್ತವೆ. ಕುರಿ ಕೋಳಿ ಬಲಿಯಂತೂ ಸಾಮಾನ್ಯವಾಗಿದೆ.

ಬೌದ್ಧ ಧರ್ಮದಿಂದಾಗಿ ಬ್ರಾಹ್ಮಣರು ಯಜ್ಞದಲ್ಲಿ ಪಶುಬಲಿ ಕೊಡುವ ಪದ್ಧತಿ ಬಹಳ ಕಡಿಮೆಯಾಯಿತು. ಆದರೆ ಅವರು ಆಹಾರ ಪದಾರ್ಥಗಳನ್ನು ಹಾಗೂ ರೇಷ್ಮೆ ಬಟ್ಟೆಗಳನ್ನು ಯಜ್ಞಕ್ಕೆ ಹಾಕಿ ಸುಡುವ ಪದ್ಧತಿ ಇಂದಿಗೂ ಜಾರಿಯಲ್ಲಿದೆ. ಬಲಿ ಕೊಡುವ ಮತ್ತು ಪ್ರಸಾದವನ್ನು ಬೆಂಕಿಗೆ ಸುರಿಯುವಂತೆ ಮಾಡುವ ಯಜ್ಞ ಪದ್ಧತಿಯನ್ನು ಬಸವಾದಿ ಶರಣರು ತೀವ್ರವಾಗಿ ವಿರೋಧಿಸಿದ್ದಾರೆ.


ಸುಗ್ಗಿಯ ದಿನಗಳಲ್ಲಿ ಶಾಖಾಹಾರಿ ರೈತರು ಕೂಡ ಮಾಂಸಾಹಾರಿಗಳ ಮೂಲಕ ರಾಶಿಗೆ ಕುರಿ ಬಲಿ ಕೊಡುವ ಪದ್ಧತಿ ಹೈದರಾಬಾದ ಕರ್ನಾಟಕ ಪ್ರದೇಶದ ಕೆಲವೆಡೆ ಇಂದಿಗೂ ಉಳಿದುಕೊಂಡು ಬಂದಿದೆ. ತೆಂಗಿನಕಾಯಿ, ಲಿಂಬೆಹಣ್ಣು ಮತ್ತು ಬೂದುಗುಂಬಳಕಾಯಿ ಮುಂತಾದ ಆಹಾರಪದಾರ್ಥಗಳನ್ನು ಬಲಿಕೊಡುವ ಪದ್ಧತಿಯನ್ನು ಬಹುಪಾಲು ಲಿಂಗವಂತರು ಕೂಡ ಇಂದಿಗೂ ಉಳಿಸಿ ಕೊಂಡು ಬಂದಿರುವುದು ದುಃಖಕರ ಸಂಗತಿ. ಈ ಹಣ್ಣು ಕಾಯಿಗಳು ಲಿಂಗವಂತಧರ್ಮದ ಪ್ರಕಾರ ಪ್ರಸಾದ ಎನ್ನಿಸಿಕೊಳ್ಳುವವು. ಪ್ರಸಾದವನ್ನು ಹಾಳು ಮಾಡುವುದು ಲಿಂಗವಂತಧರ್ಮಕ್ಕೆ ಲಿಂಗವಂತರೇ ಅಪಮಾನ ಮಾಡುವಂಥದ್ದು.

ತೆಂಗಿನಕಾಯಿ ಒಡೆಯುವುದರ ಮೂಲ ಹಿಂಸಾ ಪದ್ಧತಿಯಲ್ಲಿದೆ.. ಎಷ್ಟೋ ಜನರು ಪೂಜಾದಿನಗಳಲ್ಲಿ ತಮ್ಮ ಅಂಗಡಿಯ ಮುಂದಿರುವ ರಸ್ತೆಯಲ್ಲಿ ತೆಂಗಿನ ಕಾಯಿ ಒಡೆಯುವರು. ಆಗ ಆ ಕಾಯಿಗಳು ಚೂರುಚೂರಾಗಿ ಮಣ್ಣುಪಾಲಾಗುವವು. ಹೀಗೆ ಪ್ರಸಾದವು ಬಲಿಯಾಗುವ ಪದ್ಧತಿ ಲಿಂಗವಂತರಿಗಂತೂ ಗೌರವ ತರುವಂಥದ್ದಲ್ಲ. ಅಮಾವಾಸ್ಯೆ ಮುಂತಾದ ಸಂದರ್ಭದಲ್ಲಿ ಹಾಗೂ ಹೊಸ ವಾಹನಗಳನ್ನು ಖರೀದಿಸಿದಾಗ ವಾಹನಗಳ ಗಾಲಿಗಳ ಕೆಳಗೆ ಲಿಂಬೆ ಹಣ್ಣುಗಳನ್ನು ಇಟ್ಟು ಬಲಿಕೊಡುವ ಪದ್ಧತಿ ಕೂಡ ಭಾರತದಾದ್ಯಂತ ಜಾರಿಯಲ್ಲಿದೆ. ಹೀಗೆ ಪ್ರಸಾದವನ್ನು ಮಣ್ಣುಗೂಡಿಸುವ ಮತ್ತೊಂದು ಅಸಹ್ಯ ಪದ್ಧತಿ ಎಂದರೆ ದೀಪಾವಳಿ ಮತ್ತು ದಸರಾದಂಥ ಹಬ್ಬಗಳ ಸಂದರ್ಭದಲ್ಲಿ ಅಂಗಡಿ ಮಾಲೀಕರು ತಮ್ಮ ಅಂಗಡಿಗಳ ಮುಂದೆ ಕುಂಕುಮ ತುಂಬಿದ ಬೂದುಗುಂಬಳಗಳನ್ನು ಒಡೆದು ಬೀದಿಗೆ ಎಸೆಯುವುದು. ಗೃಹಪ್ರವೇಶದ ಸಂದರ್ಭದಲ್ಲಿ ಕೂಡ ಇದೇ ರೀತಿ ಬೂದುಗುಂಬಳವನ್ನು ಹಾಳುಗೆಡವುತ್ತಾರೆ. ಇದೊಂದು ವಿಕೃತ ಆಚರಣೆ. ಏಕೆಂದರೆ ಬೂದುಗುಂಬಳ ಬಹಳ ಉಪಯುಕ್ತ ಆಹಾರ ಪದಾರ್ಥವಾಗಿದೆ. ಅದರಲ್ಲಿನ ರಂಜಕದ ಅಂಶ ನಮ್ಮ ಮೆದುಳಿನ ಬೆಳವಣಿಗೆಗೆ ಅವಶ್ಯವಾಗಿದೆ. ಬೌದ್ಧಿಕ ಶಕ್ತಿಯನ್ನು ಹೆಚ್ಚಿಸುವ ಆಹಾರ ಅದಾಗಿದೆ. ಅಂಥ ಬೂದುಗುಂಬಳವನ್ನು ಮಣ್ಣುಪಾಲು ಮಾಡುವ ಪದ್ಧತಿ ನಮ್ಮ ಅನಾಗರಿಕ ಮನಸ್ಸಿನ ಪ್ರತೀಕವಾಗಿದೆ. ಹೀಗೆ ನಮ್ಮ ದೇಶದಲ್ಲಿ ಕೋಟ್ಯಂತರ ಲಿಂಬೆಹಣ್ಣು, ಬೂದುಗುಂಬಳ ಮತ್ತು ತೆಂಗಿನಕಾಯಿಗಳು ಜನರ ಬಾಯಿಗೆ ಹೋಗುವ ಬದಲು ಮಣ್ಣಿನ ಬಾಯಿಗೆ ಹೋಗುತ್ತವೆ. ಸ್ಥಾವರಲಿಂಗಕ್ಕೆ ಮತ್ತು ಇತರೆ ಮೂರ್ತಿಗಳಿಗೆ ಅಭಿಷೇಕದ ಹೆಸರಿನಲ್ಲಿ ಹಾಲು, ಮೊಸರು ಮತ್ತು ತುಪ್ಪ ಮುಂತಾದ ಪದಾರ್ಥಗಳನ್ನು ಚರಂಡಿಯ ಬಾಯಿಗೆ ಹೋಗುವಂತೆ ಮಾಡುವುದು ಕೂಡ ಅನಾಗರಿಕ ಪದ್ಧತಿಯೇ ಆಗಿದೆ.

ಇಷ್ಟಲಿಂಗ ಪೂಜೆಗೆ ಬೇಕಾಗಿರುವುದು ವಿಭೂತಿ, ಬಿಲ್ವಪತ್ರೆ, ನೀರು ಮುಂತಾದ ಪದಾರ್ಥಗಳು ಮಾತ್ರ. ಇವೆಲ್ಲ ಔಷಧೀಯ ಗುಣಗಳನ್ನು ಹೊಂದಿವೆ. ಇವುಗಳಲ್ಲಿ ಯಾವುದನ್ನೂ ಹಾಳು ಮಾಡಲಿಕ್ಕಾಗದು. ಅಷ್ಟೊಂದು ಎಚ್ಚರಿಕೆಯಿಂದ ಹಾಗೂ ಪ್ರಸಾದ ಪ್ರಜ್ಞೆಯಿಂದ ಇವುಗಳ ಬಳಕೆಯಾಗುತ್ತದೆ. ಯಾವ ವಸ್ತುಗಳನ್ನು ಲಿಂಗಪೂಜೆಗೆ ಬಳಸುವುದಿಲ್ಲವೋ ಅವುಗಳನ್ನು ಲಿಂಗವಂತರು ಪೂಜೆ ಹೆಸರಿನಲ್ಲಿ ಬಳಸಬಾರದು. ಬಲಿ ಪದ್ಧತಿಗೆ ವಿರುದ್ಧವಾಗಿ ದಯಾ ಪದ್ಧತಿಯನ್ನು ಬಸವಣ್ಣನವರು ಜಾರಿಗೆ ತಂದಿದ ತೆಂಗಿನಕಾಯಿ ಒಡೆಯುವುದು, ಲಿಂಬೆಹಣ್ಣುಗಳ ವಾಹನಗಳ ಚಕ್ರಗಳ ಕೆಳಗೆ ಇಡುವುದು ಮ ಬೂದುಗುಂಬಳವನ್ನು ವಿಕಾರವಾಗಿ ಸೀಳಿಹಾಕುವ ಮುಂತಾದ ಬಲಿಮೂಲದ ಪದ್ಧತಿಗಳು ಲಿಂಗವಂತ ಮತ್ತು ವಿಚಾರವಾದಿಗಳಿಗೆ ಸಮ್ಮತವಲ್ಲ.

ಪ್ರಾಣಿಬಲಿ ಕೊಡಲಾಗದವರು ತೆಂಗಿನಕಾ ಒಡೆಯುತ್ತಾರೆ. ಆ ಮೂಲಕ ಬಲಿ ಕೊಡುವ ಸಂಪ್ರದಾ ವನ್ನು ಉಳಿಸಿಕೊಳ್ಳುತ್ತಾರೆ. ಇಷ್ಟಲಿಂಗಕ್ಕೆ ಯಾರಾದ ತೆಂಗಿನಕಾಯಿ ಒಡೆಯುತ್ತಾರಾ? ಇಲ್ಲ, ಆದ್ದರಿಂದ ಬಸವ ಪರಂಪರೆಯಲ್ಲ, ಶರಣರ ಭಕ್ತಿ ಪ್ರೇಮಮ ಭಕ್ತಿ, ದಯಾಮಯ ಭಕ್ತಿ, ಬಲಿ ಕೊಡುವ ಭಕ್ತಿ ಅ

ಶರಣರ ಯಾವುದೇ ವಚನದಲ್ಲಿ ತೆಂಗಿನಕಾ ಲಿಂಬೆಕಾಯಿ ಮತ್ತು ಬೂದುಗುಂಬಳವನ್ನು ಪೂ ಬಳಸಬೇಕೆಂದು ಹೇಳಿಲ್ಲ, ಲಿಂಗವಂತರಿಗೆ ಇಷ್ಟಲಿಂಗವೇ ಪೂಜಾರ್ಹ. ಬಸವಣ್ಣನವರು ಗೌರವಾರ್ಹ. ಆದರೆ ಅಕ್ಕಗಳು, ಅಣ್ಣಗಳು, ಮಾತೆಗಳು ಮತ್ತು ಸ್ವಾಮಿ ಗುಡಿ ಕಟ್ಟಿ ಅಥವಾ ಗುಡಿಯಂಥ ಪ್ರದೇಶ ಬಸವಣ್ಣನವರ ಮೂರ್ತಿ ಇಟ್ಟು, ತೆಂಗಿನಕಾ ಒಡೆಯುತ್ತಾರೆ. ಭಕ್ತರಿಂದ ತೆಂಗಿನಕಾಯಿ ಒಡೆ ಹಚ್ಚುತ್ತಾರೆ. ಮಂದಿರ ಮತ್ತು ಮೂರ್ತಿಗಳನ್ನು ತಿರ 'ಸ್ಥಾವರ ಪ್ರತಿಷ್ಠೆ ನಾಯಕ ನರಕ' ಎಂದು ಹೇಳಿದ ಬಸ ಶರಣರ ತತ್ತ್ವಗಳಿಗೆ ಮಾಡುವ ಅಪಮಾನವಿದು ಎಂದು ಈ ಮೂರ್ತಿಪೂಜಾಪ್ರಿಯ ಲಿಂಗಾಯತ ಧರ್ಮದ ಇಂಥ ಪ್ರಚಾರಕರಿಗೆ ಯಾವಾಗ ಪ್ರಜ್ಞೆ ಮೂಡುವುದೊ ಗೊತ್ತಿಲ್ಲ.



● ರಂಜಾನ್ ದರ್ಗಾ

ಧೂತ್ತೇರಿ

▸ ಯಾಹೂ

ಥೂ ಕಾಮಾಲೆ ರೋಗದೋನೆ, ಮದ್ಹೋಗು ಇಲ್ಲಿಂದ

ಭವ್ಯ ಭಾರತದ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಯವರು ನಮ್ಮ ಪುರಾಣದ ಅಕರಾಳವಿಕರಾಳ ಪಾತ್ರಗಳಿಗೆಲ್ಲಾ ಅಸ್ತಿತ್ವ ಕಲ್ಪಿಸಿ ವೈಜ್ಞಾನಿಕವಾದ ಪುರಾವೆಗಳೊಂದಿಗೆ ವಕಾಲತ್ತು ವಹಿಸತೊಡಗಿದ್ದಾರಂತಲ್ಲಾ, "ನಮ್ಮ ಪುರೋಹಿತರ ಪರಂಪರೆಯ ಪೂರ್ವಜರು, ಅಸಾಮಾನ್ಯ ಚಿಕಿತ್ಸಕರಾಗಿದ್ದರು ಮತ್ತು ಪ್ಲಾಸ್ಟಿಕ್ ಸರ್ಜನ್‌ರಾಗಿದ್ದರು. ಇದಕ್ಕೆ ಹಲವಾರು ದುಷ್ಟಾಂತಗಳನ್ನ ಒದಗಿಸಬಹುದು. ಒದಗಿಸುವುದೇನು ನೀವೇ ಪುರೋಹಿತರ ಕಣ್ಣುಗಳಿಂದ ನೋಡಿದ್ದಾದರೆ- ಜಗತ್ತಿನ ವಿಸ್ಮಯವೊಂದು ಎದ್ದು ಕಾಣುತ್ತದೆ. ಆನೆಯ ತಲೆಗೆ ಮನುಷ್ಯನ ಶರೀರ ಸೇರಿಸಿ ಪ್ಲಾಸ್ಟಿಕ್ ಸರ್ಜರಿ ಮಾಡಿ ಗಣಪತಿಯನ್ನಾಗಿಸಿ ಪೂಜಿಸಿದ ಪರಂಪರೆ ನಮ್ಮದು" ಎಂದರಂತಲ್ಲಾ.


ಅದಷ್ಟೇ ಅಲ್ಲ "ವಿಷ್ಣುವಿನ ಹೊಕ್ಕಳ ತುಸು ಗೊಬ್ಬರ ಸೀರೆರೆದು, ಅದಕ್ಕೆ ಕಮಲದ ಬಳ್ಳಿ ಜನನೇಂದ್ರಿಯದ ಆಕಾರದಲ್ಲಿ ಮೇಲೇಳುವಂತೆ ಮಾಡಿ, ಪೂರ್ಣಾಕಾರದ ಕಮಲವೇ ಅರಳುವಂತೆ ಮಾಡಿದರು. ನಾವಾದರೋ ಆ ಕಮಲವನ್ನೇ ನಮ್ಮ ಪಕ್ಷದ ಚಿಹ್ನೆಯಾಗಿ ಬಳಸಿಕೊಂಡು ಅಧಿಕಾರಕ್ಕೆ ಬಂದಿದ್ದೇವೆ. ಆಗಿನ ಕಾಲದಲ್ಲಿ ನಮ್ಮ ಪರಂಪರೆಯ ವೈದ್ಯರು ಯಾವ ಯಾವ ಸರ್ಜರಿ ಮಾಡಿದರು ಎಂಬುದಕ್ಕೆ ಮತ್ತೊಂದು ಉದಾಹರಣೆ ಕೊಡುವುದಾದರೆ ವೀರಭದ್ರನಿಂದ ಶಿರಚ್ಛೇದನಕ್ಕೊಳಪಟ್ಟ ದಕ್ಷ ಬ್ರಹ್ಮನಿಗೆ ಒಗರಿನ ತಲೆ ತಂದು ಹೊಲಿಗೆ ಹಾಕಿ ಮರುಜೀವ ಕೊಡಲಾಯ್ತು, ಕುರುಕ್ಷೇತ್ರ ಯುದ್ಧದಲ್ಲಿ ತಲೆ ಕಳೆದುಕೊಂಡವರಿಗೆ ಹೀಗೆ ಮಾಡಲಾಗಲಿಲ್ಲ, ಏಕೆಂದರೆ ಆ ಯುದ್ಧದಲ್ಲಿ ವೈದ್ಯರೂ ಮಡಿದಿದ್ದರು" ಎಂದಿಲ್ಲವಂತಲ್ಲಾ, ಥೂತ್ತೇರಿ!

* * *

ಮೋದಿ ಮಹಾತ್ಮನ ಸರ್ಜರಿ ಕತೆ ಕೇಳಿದ ಅಮೆರಿಕದಲ್ಲಿನ ಬಸವನಗುಡಿಯ ಮಗುವೊಂದು ಮೋದಿ ಹೇಳಿಕೆಯ ಬಗ್ಗೆ ನಿಜವಾದ ಕತೆ ಕೇಳಲಾಗಿ ಮೋದಿ ಅಭಿಮಾನಿಯಾದ ಹಯಗ್ರೀವಾಚಾರಿ ಕತೆ ಹೇಳತೊಡಗಿ ದನಂತಲ್ಲಾ. "ಪಾರ್ವತಿ ಸ್ನಾನ ಮಾಡಬೇಕಾಯ್ತು, ಆಗ ಗಣಪತಿಯನ್ನ ಸೃಷ್ಟಿಸಿದಳು. ಅದೂ ತನ್ನ ಮೈಕೊಳೆಯಲ್ಲಿ" ಎಂದು ಹೇಳಿದರೆ ಮಗು ಮುಗಿಯಲಾರದ ಕತೆ ಹೇಳುವಷ್ಟು ಪ್ರಶ್ನೆ ಕೇಳೀತೆಂದು ಹೆದರಿ "ಪಾರ್ವತಿ ತನ್ನ ಮಗನಾದ ಗಣಪತಿಯನ್ನ ಬಾಗಿಲಲ್ಲಿ ಕೂರಿಸಿ 'ಯಾರನ್ನು ಒಳಬಿಡಬೇಡ' ಎಂದು ಸ್ನಾನಕ್ಕೆ ತೊಡಗಿದಳಂತೆ. ಆಗ ಬಂದ ಪರಮೇಶ್ವರ ಒಳನುಗ್ಗಲು ಯತ್ನಿಸಿದಾಗ 'ಏ ಯಾರೊ ನೀನು?' ಕೈಯ್ಯಲ್ಲಿ ಅಪಾಯಕಾರಿ ಆಯುಧ ಹಿಡಿದು ಒಳ ನುಗ್ಗುವವನನ್ನ 'ಅಲ್ಲಿ ನನ್ನ ತಾಯಿ ಸ್ನಾನ ಮಾಡುತ್ತಿದ್ದಾಳೆ' ಎಂದು ತಡೆದನಂತೆ. ಆಗ ಶಿವ ತ್ರಿಶೂಲದಿಂದ ಗಣೇಶನ ತಲೆ ಹಾರಿಸಿದ. ಇದನ್ನು ಕಂಡ ಗೌರಿ 'ನನ್ನ ಮಗ ಬೇಕೇಬೇಕು, ಬದುಕಿಸಿ ಕೊಡು' ಎಂದು ಅಳತೊಡಗಿದಳು. ಆಗ ಶಿವನು ಪೂರ್ವದಿಕ್ಕಿಗೆ ತಲೆಹಾಕಿ ಮಲಗಿರುವ ಆನೆಮರಿಯ ತಲೆ ಕತ್ತರಿಸಿ ತಂದು ಆ ದಿನ ಪ್ಲಾಸ್ಟಿಕ್ ಸರ್ಜರಿ ವೈದ್ಯರ ಸಹಾಯದಿಂದ ಗಣಪತಿಗೆ ಜೋಡಿಸಲಾಯ್ತು, ಅವನೇ ಗಣಪ" ಎಂದನಂತಲ್ಲಾ. ತುಸು ಯೋಚಿಸಿದ ಮಗು "ಕತ್ತರಿಸಿದ ತಲೆಯನ್ನೇ ತಂದು ಜೋಡಿಸಬಹುದಿತ್ತಲ್ಲ?" ಎಂದಿತಂತಲ್ಲಾ. ತಬ್ಬಿಬ್ಬಾದ ಹಯಗ್ರೀವ "ಹಾರಿದ ರುಂಡ ರಿಪೇರಿ ಕಾಣದಷ್ಟು ಛಿದ್ರವಾಗಿತ್ತು, ಅದಕ್ಕೆ ಆನೆಯ ತಲೆ ತರಲಾಯ್ತು" ಎಂದನಂತಲ್ಲಾ, ಆಗ ಮಗು "ಆನೆ ಮರಿಯ ತಾಯಿ ಅಳಲಿಲ್ಲವ?" ಎಂದು ಕೇಳಿತಂತಲ್ಲಾ, ಇಂತಹ ಪುರಾಣ ಕತೆಯು ಅರ್ಥವಾಗದ ಮೋದಿ ತಲೆ ತೆಗೆದು, ವಾಜಪೇಯಿ ತಲೆ ಜೋಡಿಸಿ, ಪ್ಲಾಸ್ಟಿಕ್ ಸರ್ಜರಿ ಮಾಡಿಸಿದರೆ ಹೇಗೆಂದು ಹಳೆ ಬಿಜೆಪಿಗಳು ಯೋಚಿಸುತ್ತಿವೆಯಂತಲ್ಲಾ, ಥೂತ್ತೇರಿ!

* * *

ನಮ್ಮ ಚೆಡ್ಡಿವೀರರ ಮೊದಲ ಟಾರ್ಗೆಟ್ ಮುಸ್ಲಿಮರು. ನಂತರ ಕ್ರಿಶ್ಚಿಯನ್ನರು. ಆಮೇಲೆ ದಲಿತರು. ಹೀಗಿರಲಾಗಿ ಮುಸ್ಲಿಮನೊಬ್ಬ ಆರೋಗ್ಯ ಸಚಿವನಾಗಿರುವುದು, ಹಾ ಕ್ರಿಶ್ಚಿಯನ್ನನೊಬ್ಬ ಗೃಹ ಸಚಿವನಾಗಿರುವುದು ಚೆ ಸಹಿಸಿಕೊಳ್ಳಲಾರದ ಸಂಗತಿಯಾಗಿದೆಯಂತಲ್ಲಾ, ಆ ಹೇಗಾದರೂ ಮಾಡಿ ಬದಲಾಯಿಸಬೇ ಕಿಡಿಗೇಡಿತನದಿಂದ ವೈದ್ಯರೆಲ್ಲಾ ರಾಜೀನಾಮೆ ಕೊಡು ಸಂಚು ರೂಪಿಸುವಲ್ಲಿ ಚೆಡ್ಡಿಗಳ ಭೂಗತ ಕುತ ಯಂತಲ್ಲಾ. ಏಕೆಂದರೆ ಕರ್ನಾಟಕ ಚರಿತ್ರೆಯಲ್ಲೇ ವೈದ್ಯರು ಈ ಪರಿಯಾಗಿ ರೋಗಿಗಳ ವಿರುದ್ಧ ವ ಉದಾಹರಣೆಗಳಿಲ್ಲ. ಆದರೂ ಇಂದಿನ ನಡವಳಿಕೆಯಲ್ಲಿ ಜೀವವಿರೋಧಿಗಳಾದ ಚೆ ಸಕ್ರಿಯರಾಗಿದ್ದರೆಂಬುದಕ್ಕೆ ಯಾವ ಪುರಾವೆಗಳೂ ಆದರೂ ಪ್ರಹ್ಲಾದ ಜೋಷಿ ತಮ್ಮದೇ ಸರಕಾರದ



ಸಚಿವನಾಗಿದ್ದ ಉಡುಪಿ ಆಚಾ ಉತ್ತಮನಾದ ಜಾರ್ಜ್‌ನನ್ನ "ನಾಳೆ ಬೆ ಬದಲಾಯಿಸಿ" ಎಂದು ರಾಜ್ಯ ಅರ್ಜಿಕೊಟ್ಟನಂತಲ್ಲಾ. ಇದೇ ಹೊತ್ತ ದಿಲ್ಲಿ ಚೆಡ್ಡಿಗಳು ರಾಷ್ಟ್ರದ ಕಂಬಗಳಲ್ಲಿರುವ ಗ್ರೀನ್ ಲೈಟ್ ಕೆಂಪಿನ ಬದಲು ... ಬಣ್ಣಕ್ಕೆ ತಿರು ಹೇಗೆ ಎಂದು ಚಿಂತಿಸುತ್ತಿದ್ದಾರಂತಲ್ಲಾ ಬಣ್ಣವೇ ಕೇಸರಿಯಾದನಂತರ ಕೇಸ ಕೇಸರಿ ಗೇಟ್, ಕೇಸರಿ ಬಾಗಿಲು ಮತ್ತು ಕೇಸರಿ ಬೆಡ್... ಹೀಗೆ ನಿರೋಧ್‌ವರೆಗೂ ಚೆಡ್ಡಿಗಳ ತಲೆ ಮಾಡುತ್ತಿದೆಯೆಂದು ತಲೆಬುರ ಸುದ್ದಿಯೊಂದು ನಮ್ಮ ಪತ್ರಿಕಾ ತಲುಪಿದೆಯಂತಲ್ಲಾ, ಕೇಸರಿ

ಪ್ರೇಮಲತಾ ಅತ್ಯಾಚಾರ ಪ್ರಕರಣ: ಕೆಲವು ಜಿಜ್ಞಾಸೆಗಳು





ಅಕ್ಟೋಬರ್ 21ರಂದು ಬೆಂಗಳೂರಿನ ಆರ್ಕಿಡ್ ...ಟರ್‌ನ್ಯಾಷನಲ್ ಶಾಲೆಯಲ್ಲಿ ಮೂರು ವರ್ಷದ ...ಣಿಯೊಬ್ಬಳು ಲೈಂಗಿಕ ದೌರ್ಜನ್ಯಕ್ಕೀಡಾದ ವಿಚಾರ ...ಯದವರು ಬಹುಶಃ ಯಾರೂ ಇಲ್ಲ. ಅಲ್ಲಿ ಕ್ಷಿಪ್ರವಾಗಿ ...ರ್ಯಾಚರಿಸಿದ ಪೊಲೀಸರು ಆರೋಪಿ ಗುಂಡಪ್ಪನನ್ನು ...ಚು, ಮೂರು ದಿನಗಳೊಳಗಾಗಿ ಪತ್ತೆ ಹಚ್ಚಿ ವಶಕ್ಕೆ ...ದುಕೊಂಡರು. ಇದೀಗ ಸಾಂದರ್ಭಿಕ ಸಾಕ್ಷ್ಯಗಳ ...ರದಲ್ಲಿ ಆತನನ್ನು ಅಧಿಕೃತವಾಗಿ ಬಂಧಿಸಲಾಗಿದೆಯೆಂದು ...ಟಿಯಾಗಿದೆ. ಜನ ಈಗ ಈ ಪ್ರಕರಣವನ್ನು ಪ್ರೇಮಲತಾ ...ಚಾರ ಪ್ರಕರಣದೊಂದಿಗೆ ಹೋಲಿಸುತ್ತಿದ್ದಾರೆ. ತಾತ್ವಿಕ ...ಯಲ್ಲಿ ಇವೆರಡು ಪ್ರಕರಣಗಳ ನಡುವೆ ವಿಶೇಷ ...ಸವೇನೂ ಇರದಾಗ ವಾರದೊಳಗಾಗಿ ಗುಂಡಪ್ಪನನ್ನು ...ಬಸುವ ವ್ಯವಸ್ಥೆ ಪ್ರೇಮಲತಾ ಪ್ರಕರಣದಲ್ಲಿ ಯಾಕಿಷ್ಟು ...ನಾಮೇಷ ಎಣಿಸುತ್ತಿದೆಯೆಂದು ತಲೆ ಕೆರೆದು ...ಸುತ್ತಿದ್ದಾರೆ.

ಪ್ರೇಮಲತಾ ಪ್ರಕರಣದಲ್ಲಿ ನಡೆಯುತ್ತಿರುವ ನಾನಾ ...ಮಾನಗಳನ್ನು ಗಮನಿಸುತ್ತಿರುವ ಸಾಮಾನ್ಯ ಜನರನ್ನು ...ಭದಿಂದಲೂ ಹಲವೊಂದು ಬಗೆಯ ಗೊಂದಲಗಳು, ...ಯಗಳು, ಪ್ರಶ್ನೆಗಳು ಕಾಡುತ್ತಲೇ ಬಂದಿವೆ. ರಾಘವೇಶ್ವರ ...ು ಬ್ಲಾಕ್‌ಮೇಲ್ ದೂರು ದಾಖಲಿಸುವುದೇ ತಡ ...ಮಲತಾ ದಂಪತಿಯನ್ನು ಕೂಡಲೆ ಬಂಧಿಸಿ ಸುಮಾರು ...ದಿನಗಳ ಕಾಲ ಬಂದಿಖಾನೆಯೊಳಗೆ ಇರಿಸಲಾಗುತ್ತದೆ! ...: ವೇಳೆ ಪ್ರೇಮಲತಾ ನೀಡುವ ಅತ್ಯಾಚಾರದ ದೂರು ...ೀರಿಯೊಳಗೆ ಸೇರುತ್ತದೆ! 'ಸತ್ಯ ಹೊರಬರಲಿ, ನ್ಯಾಯಕ್ಕೆ ...ಜಯವಾಗಲಿ' ಎಂದು ಹೇಳುವ ಸ್ವಾಮಿ ಮತ್ತೊಂದು ಕಡೆ ಹೆಜ್ಜೆಹೆಜ್ಜೆಗೂ ತನ್ನ ವಿಚಾರಣೆಗೆ, ಬಂಧನಕ್ಕೆ ತಡೆಯಾಜ್ಞೆ ತರುತ್ತಾರೆ! ಅದೂ ಚಿಟಿಕೆ ಹೊಡೆಯುವಷ್ಟರಲ್ಲಿ!! ತನ್ನಲ್ಲಿ ಅತ್ಯಾಚಾರದ ಪುರಾವೆಯಾಗಿ ಬಟ್ಟೆಗಳಿವೆ ಎಂದು ಪ್ರೇಮಲತಾ ಹೇಳುತ್ತಿದ್ದರೆ ಅತ್ತ ಸ್ವಾಮಿ ವೈದ್ಯಕೀಯ ಪರೀಕ್ಷೆಗೂ ತಡೆಯಾಜ್ಞೆ ಪಡೆದುಕೊಳ್ಳುತ್ತಾರೆ. ಸ್ವಾಮಿ ಪರ ವಕೀಲರ ವಾದ, ನ್ಯಾಯಮೂರ್ತಿಗಳ ಟಿಪ್ಪಣಿ, ಸ್ವಾಮಿ ಹೇಳಿಕೆ ಎಲ್ಲವೂ ವಿಚಿತ್ರವಾಗಿದೆ ಮತ್ತು ಅವೈಜ್ಞಾನಿಕ ಅನಿಸುತ್ತಿದೆ. ಸ್ವಾಮಿ ಪರ ವಕೀಲರು '......2010ರಷ್ಟು ಹಿಂದೆ ನಡೆದ ಘಟನೆಗೆ ಸಂಬಂಧಪಟ್ಟ ವೈದ್ಯಕೀಯ ಪರೀಕ್ಷೆಯನ್ನು ಈಗ ಇಷ್ಟೊಂದು ಸುದೀರ್ಘ ವಿಳಂಬದ ನಂತರ ನಡೆಸುವುದು ಸೂಕ್ತವಲ್ಲ ......ತನಿಖಾ ಸಂಸ್ಥೆ ಯಾವ ವಿಧದ ಪರೀಕ್ಷೆಗೊಳಪಡಬೇಕೆಂದು ಸೂಚಿಸಿಲ್ಲ ......ಉದ್ದೇಶಿತ ಪರೀಕ್ಷೆ ಸ್ವಾಮಿ ಹೆಸರಿಗೆ ಕಳಂಕ ಹಚ್ಚುವ ಯತ್ನ' ಎಂದೆಲ್ಲ ಹುರುಳಿಲ್ಲದ ವಾದ ಮಾಡಿದ್ದಾರೆ.

ಗೌರವಾನ್ವಿತ ಹೈಕೋರ್ಟ್ ನ್ಯಾಯಮೂರ್ತಿಯವರು "ಆರೋಪಿಯನ್ನು ಬಂಧಿಸಿ ತಕ್ಷಣ ಪರೀಕ್ಷೆ ಮಾಡಿದ್ದರೆ ತನಿಖೆಗೆ ಸಹಕಾರಿಯಾಗುತ್ತಿತ್ತು. ಈಗ ಪರೀಕ್ಷೆಗೆ ಒಳಪಡಿಸುವುದರಿಂದ ಪ್ರಯೋಜನವಿಲ್ಲ; ಪರೀಕ್ಷೆ ನಡೆಸಲು ಸೂಕ್ತ ಕಾರಣಗಳಿಲ್ಲ" ಎಂದಿರುವುದು ವಿಸ್ಮಯಕರವಾಗಿದೆ.

ವೈದ್ಯಕೀಯ ಪರೀಕ್ಷೆ ಮತ್ತು ಸಿಐಡಿ ವಿಚಾರಣೆಗಳ ಬಗ್ಗೆ ರಾಘವೇಶ್ವರರು ಇತ್ತೀಚೆಗೆ ನೀಡಿರುವ ಪ್ರತಿಕ್ರಿಯೆಗಳು ಉನ್ನತ ಸ್ಥಾನದಲ್ಲಿ ಇರುವವರೆನ್ನಲಾದ ಪೀಠಾಧಿಪತಿಯೊಬ್ಬನ ಬಾಯಲ್ಲಿ ಬರತಕ್ಕಂಥ ಮಾತುಗಳಲ್ಲ. 'ತಾನು ಸಾಮಾನ್ಯ ಮನುಷ್ಯ ಲೈಂಗಿಕ ಕ್ರಿಯೆ ನಡೆಸಲು ಸಾಮರ್ಥ್ಯ ಉಳ್ಳವನಾಗಿದ್ದೇನೆ ......ಪ್ರಸ್ತಾಪಿತ ವೈದ್ಯಕೀಯ ಪರೀಕ್ಷೆಯಿಂದ ತನ್ನ ಇಮೇಜು ಹಾಳಾಗಲಿದೆ' ಮತ್ತು 'ಈಗಾಗಲೆ ಆರು ದಿನ ತನಿಖೆ ನಡೆಸಿದ್ದೀರಾ. ಇನ್ನೂ ಎಷ್ಟು ದಿನ ನಡೆಸುತ್ತೀರಾ........, ಮತ್ತೆ ಮತ್ತೆ ವಿಚಾರಣೆಗೆ ಹಾಜರಾಗೋದ್ರಿಂದ ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತಿದೆ ....ಪ್ರೇಮಲತಾ ದಂಪತಿಯ ವಿಚಾರಣೆ ಎಷ್ಟು ಬಾರಿ ನಡೆಸಿದ್ದೀರಾ?' ಎಂಬಿತ್ಯಾದಿ ಹೇಳಿಕೆಗಳು ಅವರ ವೈಯಕ್ತಿಕ ಘನತೆಯನ್ನು ಕುಗ್ಗಿಸುವುದರೊಂದಿಗೆ ಬಹಳಷ್ಟು ಅನುಮಾನಗಳಿಗೂ ಎಡೆಮಾಡುತ್ತಿವೆ.

ಈ ರೀತಿ ವೈದ್ಯಕೀಯ ಪರೀಕ್ಷೆಗೆ, ತನಿಖೆಗೆ ಆಕ್ಷೇಪಿಸುತ್ತಿರುವುದು ಅತ್ಯಾಶ್ಚರ್ಯಕರವಷ್ಟೇ ಅಲ್ಲ, ಅಭೂತಪೂರ್ವ ಎನ್ನಬಹುದು. ಆರೋಪಿ ಸ್ಥಾನದಲ್ಲಿರುವ ಸಾಮಾನ್ಯ ವ್ಯಕ್ತಿಯೊಬ್ಬ ಹೀಗೆ ಕೇಳುವ ಧೈರ್ಯ ಮಾಡಿಯಾನೇ? ಒಂದು ವೇಳೆ ಮಾಡಿದನೆಂದೇ ಇಟ್ಟುಕೊಳ್ಳಿ, ಅವನಿಗೆ ಏನು ಗತಿ ಕಾದಿದೆಯೆಂದು ಬಿಡಿಸಿ ಹೇಳಬೇಕಾದ ಅಗತ್ಯವಿಲ್ಲ.

ಪೀಠಾಧಿಪತಿ ಆದ ಮಾತ್ರಕ್ಕೆ ಯಾರೂ ಸಂವಿಧಾನ, ಕಾನೂನು ಕಟ್ಟಳೆಗಳಿಗೆ ಅತೀತರಾಗುವುದಿಲ್ಲ. ಪೀಠಾಧಿಪತಿ, ಮಠಾಧಿಪತಿ, ಮುಲ್ಲಾ, ಪಾದ್ರಿ, ರಾಜಕಾರಣಿ ಸೇರಿದಂತೆ ಭಾರತದ ಪ್ರತಿಯೊಬ್ಬ ಪ್ರಜೆಯೂ ನೆಲದ ಕಾನೂನಿಗೆ ತಲೆಬಾಗಲೇಬೇಕು. ಕಾನೂನು ಮೇಲು ಕೀಳು, ಬಡವ ಬಲ್ಲಿದ, ಸ್ವಾಮಿ ಸಾಮಾನ್ಯ ಎನ್ನದೆ ಎಲ್ಲರಿಗೂ ಸಮಾನವಾಗಿ ಅನ್ವಯಿಸುತ್ತದೆ. ಅನ್ವಯಿಸಬೇಕು. ಕಾನೂನಿನ ಪ್ರಕ್ರಿಯೆಯಲ್ಲಿ ಯಾರಿಗೂ ವಿನಾಯಿತಿ ಇಲ್ಲ, ಇರಕೂಡದು.

ವ್ಯಕ್ತಿ ತಾನು ಅಮಾಯಕ, ತಾನೇನೂ ತಪ್ಪು ಮಾಡಿಲ್ಲವೆಂದು ಬರಿ ಬಾಯಿಮಾತಿನಲ್ಲಿ ಹೇಳಿದರೆ ಸಾಕಾಗುವುದಿಲ್ಲ. ತನ್ನನ್ನು ತಾನು ವಿವಿಧ ತನಿಖಾ ಪ್ರಕ್ರಿಯೆಗಳಿಗೆ ಒಡ್ಡಿಕೊಳ್ಳಲೇಬೇಕು. ತಾನು ನಿರ್ದೋಷಿ ಎನ್ನುವ ರಾಘವೇಶ್ವರ ಸ್ವಾಮಿಗೆ ಪರೀಕ್ಷೆ, ವಿಚಾರಣೆಗಳನ್ನು ಎದುರಿಸಲು ಇರುವ ಸಮಸ್ಯೆಯಾದರೂ ಏನು? ಇದರಿಂದ ಲಾಭವೇ ಹೊರತು ನಷ್ಟವೇನಿದೆ? ವೈದ್ಯಕೀಯ ಪರೀಕ್ಷೆಗೆ ಒಳಪಡುವುದರಿಂದ ಮಠದ ಪ್ರತಿಷ್ಠೆಗೆ ಕುಂದುಂಟಾಗುತ್ತದೆ ಎನ್ನಲಾಗಿದೆ. ಆದರೆ ಇದು ಜನರ ದಿಕ್ಕು ತಪ್ಪಿಸುವ ಯತ್ನದಂತೆ ಭಾಸವಾಗುತ್ತಿದೆ. ಏಕೆಂದರೆ ಸದ್ಯ ಪರೀಕ್ಷೆ ಆಗಬೇಕಿರುವುದು ಸ್ವಾಮಿಯ ಪುರುಷತ್ವದ್ದಲ್ಲ. ತಾನು ಪುರುಷನಲ್ಲವೆಂದು ಸಾಧಿಸಲೆತ್ನಿಸಿದ ಬಿಡದಿಯ ನಿತ್ಯಾನಂದ ಸ್ವಾಮಿ ಪ್ರಕರಣದಲ್ಲಾದರೆ ಪುರುಷತ್ವ ಪರೀಕ್ಷೆ ಅಗತ್ಯವಿತ್ತು. ಪ್ರಸಕ್ತ ಪ್ರೇಮಲತಾ ಪ್ರಕರಣದಲ್ಲಿ ಮುಖ್ಯವಾಗಿ ಬೇಕಾಗಿರುವುದು ಸ್ವಾಮಿಯ ರಕ್ತ ಮತ್ತು ವೀರ್ಯದ ಸ್ಯಾಂಪಲ್. ಡಿಎನ್‌ಎ ಪರೀಕ್ಷೆಗಾಗಿ. ಪ್ರೇಮಲತಾ ಬಳಿ ಇದೆಯೆನ್ನಲಾದ ಬಟ್ಟೆಯಲ್ಲಿರುವ ವೀರ್ಯದ ಕಲೆ ಸ್ವಾಮಿಯ ವೀರ್ಯದೊಂದಿಗೆ ಮ್ಯಾಚ್ ಆಗುತ್ತದೆಯೇ ಎಂದು ನೋಡಲು. ಈ 'ಅಗ್ನಿಪರೀಕ್ಷೆ'ಯನ್ನು ದಿಟ್ಟವಾಗಿ ಎದುರಿಸಿ ಇಮೇಜು ವೃದ್ಧಿಸಿಕೊಳ್ಳುವ ಬದಲು ತಡೆಯಾಜ್ಞೆ ತರುತ್ತಾರೆಂದರೆ ಏನರ್ಥ?


●ಸುರೇಶ್ ಭಟ್ ಬಾಕ್ರಬೈಲ್

...ೇಂದ್ರಿಯ ನೋಡಿದ ಮಹಿಳೆಯರು "ಥೂ ಕಾಮಾಲೆ ...ಗದವನೆ, ಮದ್ದು ಇಲ್ಲಿಂದ ತೊಲಗು" ಎನ್ನುವುದಿಲ್ಲ ...ಬದಕ್ಕೆ ಏನು ಗ್ಯಾರಂಟಿ, ಥೂತ್ತೇರಿ!!

* * *

...ನಮ್ಮ ಪತ್ರಿಕಾಲಯಕ್ಕೆ ಹಲವು ಜಿಲ್ಲೆಗಳಿಂದ ಜಿಲ್ಲಾ ...ಕೆಗಳು ಬರುತ್ತವೆ. ಹಾಗೆಯೇ ಶಿವಮೊಗ್ಗದಿಂದ ಬಂದ ...ಕೆಯೊಂದು ಹೊಟ್ಟೆ ಹುಣ್ಣಾಗುವಂತೆ ನಗಿಸಿತಲ್ಲಾ. ...ದು ಏನೆಂದರೆ ನಮ್ಮ ಮೆಚ್ಚಿನ ರಾಜಕಾರಣಿಯಾದ ...ಶ್ವರಪ್ಪನವರ ಅಗ್ರಜನಾಗಿದ್ದ ಗಂಗಾಧರಪ್ಪ ...ಹೋಗಿದ್ದಾರೆ. ಇವರ ಶ್ರದ್ಧಾಂಜಲಿ ಜಾಹೀರಾತೊಂದರಲ್ಲಿ ...ಹಗರ್ಜನೆಯ ಗಂಗಾಧರಪ್ಪ ಇನ್ನಿಲ್ಲ" ಎಂದಿದೆ. ...ಯೊಂದು ಜಾಹಿರಾತಿನಲ್ಲಿ "ಗಂಗಾಧರಪ್ಪ ಬೇಕಾದ್ದಾಗಲಿ ...! ಹುಟ್ಟಿ ಬಾ" ಎಂದಿದೆ. ನಮ್ಮ ನಗುವಿಗೆ ...ಕಾರಣವಾದದ್ದು ಇದೆ. ಸದರಿ ಗಂಗಾಧರಪ್ಪ ನಿಷ್ಠಾವಂತ ...ಸ್ ಕಾರ್ಯಕರ್ತ. ಆದರೆ ಈಶ್ವರಪ್ಪನಷ್ಟು ಅಪಾಯ ...ಬಲ್ಲ, ಏಕೆಂದರೆ ಬ್ರಾಹ್ಮಣನೊಬ್ಬ ಆರೆಸ್ಸೆಸ್ಸಿಗನಾದರೆ ...ತೊಂದರೆಯಿಲ್ಲ, ಕುರುಬನೊಬ್ಬ ಆರೆಸ್ಸೆಸ್ಸಿಗನಾದರೆ ...ಅಪಾಯಕಾರಿ ಎಂಬುದನ್ನು ಸಾಕ್ಷಿಸಮೇತ ಈಶ್ವರಪ್ಪ ...ಸಿದ್ದಾರೆ. ಇದೆಲ್ಲ ಹಳೆಯ ಮಾತು. ಆದರೆ ಈ ...ಗಳು ತೀರಿಕೊಂಡ ವ್ಯಕ್ತಿಗೆ ಶ್ರದ್ಧಾಂಜಲಿ ನೀಡುವಲ್ಲಿ ...ದುಷ ಕಿಡಿಗೇಡಿ ಕೆಲಸವನ್ನ ಯಾವ ಮುಂದುಮತಿಗಳೂ ...ಮಾಡರು. 'ಬೇಕಾದ್ದಾಗಲಿ ಮತ್ತೆ ಹುಟ್ಟಿ ಬಾ' ಎಂದರೆ ...ಏನಾದರೂ ಏಬರ್ಾಗಲಿ ಎಂಬ ಮಾತೆ? ಅಥವಾ ...ಕಷ್ಟವಾದರೂ ಅಡ್ಡಿಲ್ಲ, ಇರಬೇಡ ಬೇಗ ಬಾ ...? ಅಥವಾ ಇವರ ಬುದ್ಧಿ ಮಟ್ಟದ ಪ್ರಧಾನಿಯವರು ...ಮಾಡಿರುವಂತಹ ಪೈದ್ರರಾಜರ ಶಪುಟಿಂದ ಮತ್ತೆ ...ಬಾ ಎಂತಲೇ? ಆರೆಸ್ಸಿಗರೂ ಹಾಸ್ಯಗಾರರೆಂದೂ, ...ಜೊತೆ ಗಂಗಾಧರಪ್ಪ ಮತ್ತೆಷ್ಟಾದರೂ ...ಕೊಳ್ಳಬಾರದು ಎಂದೂ ಅವರ ಜಾಹಿರಾತೇ ...ಸುತ್ತಿದೆಯಲ್ಲಾ. ಥೂತ್ತೇರಿ!!! ●

ಬಲಿಯ ಕಾಲದಲ್ಲಿಯೇ ಆರ್ಯಪುತ್ರರು ಸೋಮಾರಿಗಳು



ನವೆಂಬರ್ 5, 2014ರ ಸಂಚಿಕೆಯಲ್ಲಿ 'ಅಸುರ ಬಲಿ ಮಹಾರಾಜನ ರಾಜ್ಯಕ್ಕಾಗಿ ದೀಪ ಬೆಳಗಿಸೋಣ' ಎಂಬ ಗೌರಿ ಲಂಕೇಶರ ಸಂಪಾದಕೀಯ ದೀಪಾವಳಿ ಹಬ್ಬಕ್ಕೆ ಸಮಯೋಚಿತ. ಭಾರತದ ಬುಡಕಟ್ಟು ಜನಾಂಗದ ಪ್ರಜಾಪ್ರಿಯ ರಾಜನಾಗಿದ್ದ ಬಲಿಯನ್ನು ರಾಕ್ಷಸ ಎಂದು ಬಿಂಬಿಸಿ ವಾಮನ ವೇಷದಲ್ಲಿ ಇಂದ್ರ ಮತ್ತು ಸುರರು (ಆರ್ಯರು) ಮಾಡಿದ ಮೋಸ ಹಾಗೂ ಭಾರತದ ಬುಡಕಟ್ಟು ಜನರಿಗೆ ಮಾಡಿದ ಘೋರ ಅನ್ಯಾಯ ನೆನೆದಾಗ ಮೈ ಉರಿಯುತ್ತದೆ.

ತಮ್ಮ ಮೋಸ ಮೂಲ ನಿವಾಸಿಗಳಿಗೆ ಗೊತ್ತಾಗಿ ಅವರು ತಮ್ಮ ಪ್ರೀತಿಯ ರಾಜ ಬಲೀಂದ್ರನ ಪರವಾಗಿ ದಂಗೆ ಏಳಬಾರದೆಂದು ಆರ್ಯರು ಬಲಿಯನ್ನು ಪಾತಾಳಕ್ಕೆ ಕಳುಹಿಸಿ (ತುಳಿದು) ಪಾತಾಳಲೋಕದ ರಾಜನಾಗಿ ಮಾಡಿದ ಕಟ್ಟುಕಥೆ ಕಟ್ಟಿದರು. ಮುಂದಿನ 'ಮನ್ವಂತರದಲ್ಲಿ' ಬಲಿಯೇ ದೇವಲೋಕದ ಇಂದ್ರನಾಗುತ್ತಾನೆ ಎಂದು ಮೂಗಿಗೆ ಬೆಣ್ಣೆ ಸಹ ಸವರಿದರು. ಒಂದು ಮನ್ವಂತರವೆಂದರೆ ಎಪ್ಪತ್ತೊಂದು (71) ಚತುರ್ಯುಗ ಮತ್ತು ಒಂದು ಚತುರ್ಯುಗ ಎಂದರೆ 4,32,000 ವರ್ಷಗಳು. ಇದರ ಅರ್ಥ ಬಲೀಂದ್ರನು ದೇವಲೋಕದ ರಾಜನಾಗಲು ಇನ್ನೂ ಮೂರು ಕೋಟಿ ಆರು ಲಕ್ಷಕ್ಕೂ ಹೆಚ್ಚು ವರ್ಷ ಕಾಯಬೇಕು. ಆಗ ಮನುಕುಲವೇ ಪೂರಾ ನಾಶವಾಗಿರುವ ಸಾಧ್ಯತೆ ಇದೆ ಅಲ್ಲವೇ!

ಮಾನವ ಕುಲದ ಉಗಮ ಆಗಿದ್ದು ಕೇವಲ ನಾಲ್ವತ್ತು ಲಕ್ಷ ವರ್ಷಗಳ ಹಿಂದೆ ಹಾಗೂ ನಾಗರಿಕತೆಗೆ ಮಾನವ ಕಾಲಿಟ್ಟಿದ್ದು ಕೇವಲ ಇಪ್ಪತ್ತು ಸಾವಿರ ವರ್ಷಗಳ ಹಿಂದೆ ಮಾತ್ರ. ಹಾಗಿರುವಾಗ ಚತುರ್ಯುಗ-ಮನ್ವಂತರ-ಕಲ್ಪಗಳ ಲೆಕ್ಕ ಇಡಲು ಆಗ ಮಾನವ ಎಲ್ಲಿದ್ದ? ಇನ್ನು ಮೂರು ಕೋಟಿ ವರ್ಷಗಳ ನಂತರ ಮಾನವ ಎಲ್ಲಿರುತ್ತಾನೆ ಎಂದು ಆ ನಗ್ನ ವಾಮನ ದೇವರಿಗೇ ಗೊತ್ತಿರಲಿಕ್ಕಿಲ್ಲ! ಹಾಗಿರುವಾಗ ವಾಮನ ದೇವರ ವಾಗ್ದಾನದಂತೆ ನಮ್ಮ ಪ್ರೀತಿಯ ರಾಜ ಬಲಿ ಚಕ್ರವರ್ತಿ ದೇವಲೋಕದ ರಾಜನಾಗುವುದನ್ನು ನೋಡಲು ನಮ್ಮ ದ್ರಾವಿಡ ಜನಾಂಗವೇ ಇರುತ್ತದೋ ಇಲ್ಲವೋ?

ಬಲಿ ಚಕ್ರವರ್ತಿ ತುಳುನಾಡಿನ (ಪಶ್ಚಿಮ ಕರಾವಳಿಯ) ಅತ್ಯಂತ ಜನಾನುರಾಗಿ ಅರಸನಾಗಿದ್ದ ಎಂಬುದು ನಮ್ಮ ಕರಾವಳಿಯ ಮೂಲನಿವಾಸಿಗಳ ನಂಬಿಕೆ. ವಾಮನನು ವಿಷ್ಣುವಿನ ಐದನೆಯ ಅವತಾರ. ಅಂದರೆ ಆಗಲೇ ಬಲಿಚಕ್ರವರ್ತಿ ಆಳುತ್ತಿದ್ದ ಪಶ್ಚಿಮ ಕರಾವಳಿ (ತುಳುನಾಡು) ಅಸ್ತಿತ್ವದಲ್ಲಿ ಇತ್ತೆಂದು ಪುರಾಣಕರ್ತರೇ ಒಪ್ಪಿಕೊಂಡಂತಾಯಿತು. ಪರಶುರಾಮನು ವಿಷ್ಣುವಿನ ಆರನೆಯ ಅವತಾರ, ಅಂದರೆ ವಾಮನ ಅವತಾರದ ನೂರಾರು ವರ್ಷಗಳ ನಂತರ ಹುಟ್ಟಿದ್ದು ಪರಶುರಾಮನ ಅವತಾರ. ಹಾಗಾದರೆ ಪರಶುರಾಮನಿಗಿಂತ ನೂರಾರು ವರ್ಷಗಳ ಮೊದಲೇ ಇದ್ದ ಬಲಿ ಮಹಾರಾಜ ಆಳುತ್ತಿದ್ದ ಪಶ್ಚಿಮ ಕರಾವಳಿಯನ್ನು (ತುಳುನಾಡನ್ನು) ನಂತರ ಪರಶುರಾಮನು ಪುನಃ ಸೃಷ್ಟಿಸುವುದು ಹೇಗೆ ಸಾಧ್ಯ? ಒಟ್ಟಾರೆ ನಮ್ಮ ಪಶ್ಚಿಮ ಕರಾವಳಿಯನ್ನು ಬ್ರಾಹ್ಮಣ ಪರಶುರಾಮ ಸೃಷ್ಟಿಸಿದ್ದು ಎಂಬ ಕಥೆ ಶುದ್ಧ ಸುಳ್ಳು ಎಂದು ವಿಷ್ಣು ಪುರಾಣ ಬರೆದವರೇ ಒಪ್ಪಿಕೊಂಡಂತಾಯಿತು ತಾನೇ!

ನಮ್ಮ ಕರಾವಳಿಯಲ್ಲಿ ಬಲೀಂದ್ರನ ಬಗ್ಗೆ ಇರುವ ಈ ಕೆಳಗಿನ ಕಥೆ ತುಂಬಾ ಅರ್ಥಪೂರ್ಣವಾಗಿದೆ - ಒಮ್ಮೆ ಮೂವರು ವಿಪ್ರರು ಬಲೀಂದ್ರನಲ್ಲಿ ಭೂಮಿಯನ್ನು ದಾನ ಕೊಡುವಂತೆ ಬೇಡುತ್ತಾರೆ. ಭೂಮಿ ಕೊಟ್ಟರೆ ಏನು ಮಾಡುವಿರಿ ಎಂದು ಬಲೀಂದ್ರ ಕೇಳಿದಾಗ ನಾವು ದೇವಸ್ಥಾನ ಕಟ್ಟುತ್ತೇವೆ, ಹೂವಿನ ಗಿಡ ನೆಡುತ್ತೇವೆ, ಹೂಗಳಿಂದ ದೇವರ ಮೂರ್ತಿ ಶೃಂಗರಿಸುತ್ತೇವೆ ಎಂದು ಹೇಳುತ್ತಾರೆ. ಆಗ ಮೂರು ಕೆಳ ಜಾತಿಯವರೂ ಬಲೀಂದ್ರನಲ್ಲಿ ಭೂಮಿ ದಾನವಾಗಿ ಕೇಳುತ್ತಾರೆ. ಭೂಮಿ ಕೊಟ್ಟರೆ ಏನು ಮಾಡುವಿರಿ ಎಂದು ಬಲೀಂದ್ರ ಕೇಳಿದಾಗ ಆ ಕೆಳ ಜಾತಿಯ ಮೂವರೂ ಹೇಳುತ್ತಾರೆ: 'ನಾವು ಕಷ್ಟಪಟ್ಟು ಭೂಮಿಯನ್ನು ಉತ್ತು-ಬಿತ್ತಿ ಅಲ್ಲಿ ದವಸಧಾನ್ಯ ಹಣ್ಣು ಹತ್ತಿ ಬೆಳೆಯುತ್ತೇವೆ. ಅವನ್ನು ಮಾರಿ ನಮ್ಮ ಉಪಜೀವನ ನಡೆಸುತ್ತೇವೆ ಮತ್ತು ದುಡಿಯಲು ಅಶಕ್ತರಾದವರಿಗೆ ಸಹಾಯ ಮಾಡುತ್ತೇವೆ.'

ಅಂದರೆ ಏನೂ ಕೆಲಸ ಮಾಡದೇ ದೇವರ ಹೆಸರಲ್ಲಿ ಸುಲಭವಾಗಿ ಹಣ ಗಳಿಸಿ ಸಮಾಜದ ಮೇಲೆ ಹಿಡಿತ ಸಾಧಿಸುವುದು ವಿಪ್ರರು ಆಗಲೂ ಮಾಡುತ್ತಿದ್ದ ಕೆಲಸ. ಹೀಗೆ ಬಲೀಂದ್ರನ ಕಾಲದಲ್ಲಿಯೇ ಸೋಮಾರಿ ಆರ್ಯಪುತ್ರ ವಿಪ್ರರು ಪರಾವಲಂಬಿಗಳಾಗಿ ಸಮಾಜಕ್ಕೆ ಭಾರವಾಗಿದ್ದರು ಹಾಗೂ ಕಷ್ಟಜೀವಿ ಭೂಮಿಪುತ್ರ ರೈತರು ಸ್ವಾವಲಂಬಿಗಳಾಗಿ ಸಮಾಜಕ್ಕೆ ಅತಿ ಉಪಯುಕ್ತವಾಗಿದ್ದರು ಎಂಬುದು ಈ ಕಥೆಯ ಸಾರ.

●ಆರ್.ಬಿ.ಶೇಣವ, ಮಂಗಳೂರು

ರೈತಾಪಿಗಳ ರಾಜ್ಯಾಧಿಕಾರದ ಹೋರಾಟ ಕಥನ


ಪುಸ್ತಕ ವಿಮರ್ಶೆ

ಒಂದು ವ್ಯವಸ್ಥೆಯಲ್ಲಿ ಅಸಮಾನತೆ, ಅನ್ಯಾಯ, ದಬ್ಬಾಳಿಕೆ ಮತ್ತು ಕ್ರೌರ್ಯಗಳು ಮಾತ್ರವೇ ಇರುವುದಿಲ್ಲ, ಅವು ಮೇರೆಮೀರಿದಾಗ ಅದುವರೆಗೆ ಪತ್ತಿಕ್ಕಲ್ಪಟ್ಟಿದ್ದ ಶಕ್ತಿಗಳು ಪರಿಣಾಮಕಾರಿಯಾಗಿ ಕ್ರಿಯಾಶೀಲವಾಗುತ್ತವೆ. ಪರಿಸ್ಥಿತಿಯ ಆಂತರಿಕ ವೈರುಧ್ಯಗಳೇ ಇದನ್ನು ಸೃಷ್ಟಿಸುತ್ತವೆ. ಹಾಗಾಗಿ ಪರಿಸ್ಥಿತಿಯು ಸಂದರ್ಭವನ್ನು ಮಾತ್ರ ಕಾಯುತ್ತಿರುತ್ತದೆ. ಆಂಧ್ರದ ತೆಲಂಗಾಣ ಪ್ರಾಂತ್ಯದ ರೈತಾಪಿಗಳು 1946ರಿಂದ 1951ರವರೆಗೆ ಹೈದರಾಬಾದ್ ನಿಜಾಮನ ಜಮೀನ್ದಾರಿಕೆಯ ವಿರುದ್ಧ ವೀರೋಚಿತ ಸಶಸ್ತ್ರ ಹೋರಾಟ ನಡೆಸಿದರು. ಇದಕ್ಕೆ ಆಗಿನ ಅವಿಭಜಿತ ಕಮ್ಯುನಿಸ್ಟ್ ಪಕ್ಷ ನಾಯಕತ್ವ ನೀಡಿತ್ತು. ಇದನ್ನು ಕುರಿತು ತೆಲುಗಿನಲ್ಲಿ ಹತ್ತಾರು ಪುಸ್ತಗಳು ಬಂದಿವೆ. ಅವುಗಳಲ್ಲಿ 'ವೀರ ತೆಲಂಗಾಣ ವಿಪ್ಲವ ಹೋರಾಟಂ: ಗುಣಪಾಠಾಲು' ಎಂಬುದು ಮುಖ್ಯವಾದುದು. ಆ ಹೋರಾಟದಲ್ಲಿದ್ದೂ, ಭೂಗತರಾಗಿದ್ದ ಪುಚ್ಚಲಪಲ್ಲಿ ಸುಂದರಯ್ಯ ಅವರು 1973ರಲ್ಲಿ ಇದನ್ನು ಬರೆದರು. ಇದು ಎಂ.ಎಲ್ ಚಳವಳಿಗಳಿಗೆ ಸ್ಫೂರ್ತಿದಾಯಕ ರಾಜಕೀಯ ಕೈಪಿಡಿಯಾಗಿದೆ. ಬಿ. ಸುಜ್ಞಾನಮೂರ್ತಿಯವರು ಕನ್ನಡಕ್ಕೆ ತಂದಿರುವ ಇದನ್ನು ಪಲ್ಲವ ಪ್ರಕಾಶನ ಪ್ರಕಟಿಸಿದೆ.

ಹೈದರಾಬಾದ್ ನಿಜಾಮನ ದಬ್ಬಾಳಿಕೆ, ಕ್ರೌರ್ಯಗಳನ್ನು; ಶೋಷಿತ ರೈತಾಪಿಗಳು ಎದೆಗಾರಿಕೆಯಿಂದ ಅದನ್ನು ಎದುರಿಸಿ ಹೋರಾಡಿದ್ದನ್ನು, ಹೋರಾಟಗಾರರಿಗೆ ಮಿಲಿಟರಿ ಕೊಟ್ಟ ಅಮಾನುಷ ಹಿಂಸೆಗಳನ್ನು; ಕಮ್ಯುನಿಸ್ಟ್ ಪಕ್ಷದ ಶಕ್ತಿ ಮತ್ತು ಹೋರಾಟದ ಮಿತಿಗಳನ್ನು; 17 ಅಧ್ಯಾಯಗಳ 550 ಪುಟಗಳಲ್ಲಿ ಈ ಬರವಣಿಗೆ ಎಳೆಎಳೆಯಾಗಿ ಬಿಚ್ಚಿಟ್ಟಿದೆ.

ಭಾರತದ ಆಧುನಿಕ ಚರಿತ್ರೆ ಎಂದರೆ ಸ್ವಾತಂತ್ರ್ಯ ಹೋರಾಟವನ್ನು ಮಾತ್ರ ನಮ್ಮ ಔಪಚಾರಿಕ ಪಠ್ಯಗಳಲ್ಲಿ ಹೇಳಿಕೊಡಲಾಗುತ್ತಿದೆ. ಆದರೆ ಭಾರತದ ಒಳಗೇ ನಿಜಾಮನ ಜಮೀನ್ದಾರಿಕೆಯ ಕ್ರೌರ್ಯದ ವಿರುದ್ಧ ರೈತಾಪಿಗಳು ನಡೆಸಿದ ಈ ಹೋರಾಟವನ್ನು ಮುಚ್ಚಿಡಲಾಗಿದೆ. ಬ್ರಿಟಿಷರು ಭಾರತಕ್ಕೆ ಅಧಿಕಾರ ಹಸ್ತಾಂತರ ಮಾಡುವಾಗ ಭಾರತದಲ್ಲಿ 560 ಸಂಸ್ಥಾನಗಳಿದ್ದವು. ಅವುಗಳಲ್ಲಿ ಹೈದರಾಬಾದ್ ನಿಜಾಮನದೂ ಒಂದು. ಹೈದರಾಬಾದ್ ಸಂಸ್ಥಾನದಲ್ಲಿ ತೆಲುಗು, ಮರಾಠಿ, ಕನ್ನಡ ಮತ್ತು ಉರ್ದು ಭಾಷೆ ಮಾತನಾಡುವವರಿದ್ದರು. ತೆಲುಗು ಮಾತನಾಡುವವರು 90 ಲಕ್ಷವಿದ್ದರೆ, ಉರ್ದು ಮಾತನಾಡುವವರು 21 ಲಕ್ಷವಿದ್ದರು. ಆದರೂ ನಿಜಾಮನು ಆಡಳಿತ, ಕೋರ್ಟು ಮತ್ತು ಶಿಕ್ಷಣದಲ್ಲಿ ಉರ್ದು ಭಾಷೆಯನ್ನು ಬಲವಂತವಾಗಿ ಹೇರಿದ್ದ, ತನ್ನದೇ ಕರೆನ್ಸಿಯನ್ನು ಜಾರಿಗೊಳಿಸಿದ್ದ. ಸಂಸ್ಥಾನದಲ್ಲಿ ಒಂದು ಲಕ್ಷ ಎಕರೆಗೂ ಹೆಚ್ಚು ಭೂಮಿ ಹೊಂದಿದ್ದ ಭೂಮಾಲಿಕರಿದ್ದರು. ದಲಿತರು ಅವರ ಬಿಟ್ಟಿಚಾಕರಿ ಮಾಡಬೇಕಿತ್ತು. ಅವರು ಪ್ರಯಾಣ ಮಾಡುವಾಗ ಕೆಳಜಾತಿಯವರು ಜಮೀನ್ದಾರ ಮಹಿಳೆಯರನ್ನು ಮತ್ತು ಪುರುಷರನ್ನು ಪಲ್ಲಕ್ಕಿಗಳಲ್ಲಿ, ಮೇನೆಗಳಲ್ಲಿ ಮತ್ತು ಭುಜಗಳ ಮೇಲೆ ಹೊತ್ತುಕೊಂಡು ಹೋಗಬೇಕಿತ್ತು, ವಿವಿಧ ಕೈಕಸುಬಿನವರು ತಮ್ಮ ಉತ್ಪನ್ನಗಳ ಸ್ವಲ್ಪ ಭಾಗವನ್ನು ಅವರಿಗೆ ಬಿಟ್ಟಿಯಾಗಿ ಕೊಡಬೇಕಿತ್ತು. ಸಾಹಿತ್ಯ, ಶಿಕ್ಷಣ ಮುಂತಾದ ವಿಷಯಗಳ ಸಭೆ ನಡೆಸುವುದಕ್ಕೂ ಸ್ಥಳೀಯ ಅಧಿಕಾರಿಗಳ ಅನುಮತಿ ಪಡೆಯಬೇಕಿತ್ತು, ಎಲ್ಲಾ ಹಂತಗಳಲ್ಲಿ ನಿರಂಕುಶ ಆಡಳಿತ ತೀವ್ರವಾಗಿತ್ತು, ಗುಲಾಮಗಿರಿ ಮೇರೆಮೀರಿತ್ತು, ನಿಜಾಮನ ಈ ಫ್ಯೂಡಲ್ ದೌರ್ಜನ್ಯದ ವಿರುದ್ಧ ಜನರಲ್ಲಿ ಅಸಹನೆ ಮಡುಗಟ್ಟಿತ್ತು, ಇಂತಹ ಪರಿಸ್ಥಿತಿಯಲ್ಲಿ 1928ರಲ್ಲಿ 'ಆಂಧ್ರ ಮಹಾಸಭೆ' ಸ್ಥಾಪನೆಯಾಯಿತು. ಮೊದಲು ಉದಾರವಾದಿ ಆಶಯದಿಂದ ಆರಂಭಿಸಿದ ನಾಯಕರು 1940ರ ಹೊತ್ತಿಗೆ ಇದನ್ನು ಕಮ್ಯುನಿಸ್ಟ್ ಚಳವಳಿಯಲ್ಲಿ ವಿಲೀನಗೊಳಿಸಿದರು. ಯುವಜನರು, ರೈತರು, ವ್ಯಾಪಾರಿಗಳು ಮತ್ತು ಕೈಕಸುಬುದಾರರನ್ನು ಸೇರಿಸಿಕೊಂಡು ಇದನ್ನು ನಿಜಾಮ್ ವಿರೋಧಿ ಸಮರಶೀಲ ಒಕ್ಕೂಟವನ್ನಾಗಿ ಮಾರ್ಪಡಿಸಿದರು. ಇದರಿಂದ ಕಮ್ಯುನಿಸ್ಟ್ ಪಾರ್ಟಿಯ ಶಕ್ತಿ ಮತ್ತು ಗಾತ್ರ ಎರಡೂ ದೊಡ್ಡದಾಯಿತು.

ಜನಗಾಮ ತಾಲೂಕಿನ ಸಂಘದ ನಾಯಕಿ ಐಲಮ್ಮನ ಹೊಲದ ಬೆಳೆಯನ್ನು ದರೋಡೆ ಮಾಡಲು ವಿಸುನೂರು ದೇಶಮುಖ್‌ನ ಗೂಂಡಾಗಳು ಬಂದರು. ಅವರ ವಿರುದ್ಧ ಹೊಡೆದಾಟ ನಡೆಯಿತು. ಅದರಲ್ಲಿ 1946ರ ಜುಲೈ 4ರಂದು ದೊಡ್ಡಿ ಕೊರಮಯ್ಯ ಎಂಬಾತ ಆತ್ಮಾರ್ಪಣೆ ಮಾಡಿದ. ಅಲ್ಲಿಗೆ ಪೊಲೀಸು ಪ್ರವೇಶವಾಯಿತು. ಅದುವರೆಗೆ ಬೂದಿಮುಚ್ಚಿದಂತಿದ್ದ ವರ್ಗ ಸಂಘರ್ಷವು ಬೆಂಕಿಯ ಜ್ವಾಲೆಯಾಗಿ ಭುಗಿಲೆದ್ದಿತು. ಮುಂದೆ ರೈತಾಪಿಗಳು ಒಂದು ಕಡೆಯಾದರೆ; ರಜಾಕಾರರು, ಗೂಂಡಾಗಳು, ಪೊಲೀಸರು ಮತ್ತೊಂದು ಕಡೆಯಾದರು. ಇವರ ನಡುವೆ ಪರಸ್ಪರ ಸಂಘರ್ಷ ದಿನನಿತ್ಯದ ಚಟುವಟಿಕೆಯಾಯಿತು. ಬಡಿಗೆ, ಕಲ್ಲು, ಕವಣೆ, ಕೊಡಲಿ, ಈಟಿ, ಭರ್ಜಿ, ಕತ್ತಿ ಮುಂತಾದುವು ರೈತಾಪಿಗಳ ಶಸ್ತ್ರಗಳಾದರೆ; ನಿಜಾಮನ ಗೂಂಡಾಗಳಿಗೆ ಮತ್ತು ಪೊಲೀಸರಿಗೆ ಆಧುನಿಕ ಅಸ್ತ್ರಗಳೇ ಇದ್ದವು. ಕಮ್ಯುನಿಸ್ಟ್ ಪಾರ್ಟಿಯು ಇದಕ್ಕೆ ಸರಿಯಾದ ನಾಯಕತ್ವವನ್ನು ಕೊಟ್ಟು, ಶತ್ರುಗಳನ್ನು ಸದೆಬಡಿಯಲು ಬೇಕಾದ ಗೆರಿಲ್ಲಾ ದಳಗಳನ್ನು ರಚನೆ ಮಾಡಿತು. ಅವರು ಸೂಕ್ತವಾದ ಅಡಗುದಾಣ ಸೇರಿದರು. ದಳಗಳು ಸಶಸ್ತ್ರ ಹೋರಾಟಕ್ಕೆ ಮುಂದಾದವು. ಪರಿಣಾಮವಾಗಿ ಹೋರಾಟಗಾರರನ್ನು ವಿಚಿತ್ರವಾಗಿ ಹಿಂಸಿಸತೊಡಗಿದರು. ಇದನ್ನು ಲೇಖಕರು ಚಿತ್ರಿಸಿರುವ ಬಗೆ ಹೀಗಿದೆ: "ಆತನನ್ನು ಲಾರಿಗೆ ಕಟ್ಟಿ ದೇಹ ಚೂರುಚೂರಾಗುವಂತೆ ಎಳೆದಾಡಿದರು. ದಳ ಸದಸ್ಯನನ್ನು ಎತ್ತಿನ ಗಾಡಿಯ ಚಕ್ರಕ್ಕೆ ಕಟ್ಟಿ ಎತ್ತುಗಳನ್ನು ಮುಂದಕ್ಕೆ ಓಡಿಸಿದರು. ಕಾಮ್ರೇಡ್ ಹರಿಜನ್ ಮುತ್ತಯ್ಯನ ಕಣ್ಣುಗುಡ್ಡೆಯನ್ನು ಕಿತ್ತರು. ವೃಷಣವನ್ನು ಕುಯ್ದು ಅವನ ಬಾಯಲ್ಲಿ ತುರುಕಿದರು. ನಂತರ ಅವನನ್ನು ತುಂಡುತುಂಡಾಗಿ ಕಡಿದರು. ನಡಿಗಡ್ಡ ತಾಂಡಾದಲ್ಲಿ ಹತ್ತು ಮಂದಿ ಮಹಿಳೆಯರನ್ನು ಅವರ ಗಂಡಂದಿರ ಎದುರೇ ಮಾನಭಂಗ ಮಾಡಿದರು. ಹೋರಾಟಗಾರರಿಗೆ ಊಟ ಒದಗಿಸಿದರೆಂದು ಅನುಮಾನಿಸಿ ಅಂತವರನ್ನು ಬಂಧಿಸಿ ಕ್ಯಾಂಪುಗಳಲ್ಲಿಟ್ಟು, ಕೈಬೆರಳ ಉಗುರ ಕೆಳಗೆ ಗುಂಡುಸೂಜಿಯಿಂದ ಚುಚ್ಚುವುದು, ಪಾದಗಳ ಮೇಲೆ ಕಬ್ಬಿಣದ ಮೊಳೆ ಹೊಡೆಯುವುದು, ಮರ್ಮಾಂಗಗಳಿಗೆ ಕಾರದ ಪುಡಿ ತೂರುವುದು, ಬಾಯಲ್ಲಿ ಮೂತ್ರ ವಿಸರ್ಜನೆ ಮಾಡುವುದು – ಇವು ಅವರು ಹಿಂಸಿಸುತ್ತಿದ್ದ ರೀತಿಗಳು". ಇಂತಹ ಹತ್ತಾರು ಚಿತ್ರಣಗಳು ಇದರ ಪುಟಪುಟಗಳಲ್ಲೂ ಸಿಗುತ್ತವೆ. ಪೊಲೀಸು ಮತ್ತು ಮಿಲಿಟರಿ ನಡೆಸಿದ ಪಾಶವೀಕೃತ್ಯ ಊಹೆಗೂ ಮೀರಿದ್ದು, ಜೈಲುಗಳ ನರಕಯಾತನೆ, ಬಯಲಿನಲ್ಲಿ ವಿದ್ಯುತ್ ತಂತಿಬೇಲಿ ಹಾಕಿ ಸಾವಿರಾರು ಹೋರಾಟಗಾರರನ್ನು ಕೂಡಿಟ್ಟಿದ್ದು, ಜೈಲಿನೊಳಗೂ ನಡೆಸಿದ ಹೋರಾಟಗಳು ಮುಂತಾದವನ್ನು ಚಿತ್ರಿಸಿದೆ. ವೀರೋಚಿತವಾಗಿ ಹೋರಾಡಿದ ಮಹಿಳೆಯರು, ರಜಾಕಾರರ ವಿರುದ್ಧ ಹೋರಾಡಿದ ಮುಸ್ಲಿಮರು, ಎರಡೂ ಕಡೆಯವರ ದೈಹಿಕ ಮತ್ತು ಮಾನಸಿಕ ತೊಳಲಾಟ, ಹಿಮ್ಮೆಟ್ಟುವಿಕೆ ಮತ್ತು ಚೇತರಿಸಿಕೊಳ್ಳುವಿಕೆ ಇವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದೆ. ಹೋರಾಟದ ಪ್ರಭೆಯಲ್ಲಿ ಹುಟ್ಟಿದ ಹಾಡು ಮತ್ತು ಕವಿತೆಗಳನ್ನು ದಾಖಲಿಸಿದೆ.



ತೆಲಂಗಾಣ ಹೋರಾಟ
ಮೂಲ ತೆಲುಗು: ಪಿ. ಸುಂದರಯ್ಯ
ಕನ್ನಡಕ್ಕೆ: ಬಿ. ಸುಜ್ಞಾನಮೂರ್ತಿ
ಪಲ್ಲವ ಪ್ರಕಾಶನ
ಪುಟಗಳು: 14+554, ಬೆಲೆ: 400/-

ತೆಲಂಗಾಣ ಹೋರಾಟದ ಭೌತಿಕ ವಿವರಗಳಿಗೆ ಮಾತ್ರ ಇದು ಸೀಮಿತವಾಗಿಲ್ಲ. ಅಂತರರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯ ಚರ್ಚೆ, ಭಾರತದ ಕ್ರಾಂತಿಗೆ ರಷ್ಯಾದ ದಾರಿಯೊ ಅಥವಾ ಚೈನಾದ ದಾರಿಯೊ ಎಂಬ ಚರ್ಚೆ, ಪಾರ್ಟಿ ಮತ್ತು ಸಶಸ್ತ್ರ ಹೋರಾಟದ ಏಳುಬೀಳುಗಳ ಮೌಲ್ಯಮಾಪನ ಇವನ್ನು ರಾಜಕೀಯ ಪ್ರಬುದ್ಧತೆಯಲ್ಲಿ ನಡೆಸಲಾಗಿದೆ. ಹೋರಾಟವನ್ನು ಪ್ರಭುತ್ವ, ಜನತೆ, ಮಹಿಳೆಯರು ಮತ್ತು ಸೈನಿಕರ ನೆಲೆಯಲ್ಲಿ ನಿಂತು ನೋಡಲಾಗಿದೆ. ನಿಜಾಮನನ್ನು ಭಾರತದ ಒಕ್ಕೂಟದಲ್ಲಿ ಸೇರಿಸಬೇಕು ಎಂಬ ನೆಪದಲ್ಲಿ ಭಾರತದ ಸೇನೆ 1948ರ ಸೆಪ್ಟೆಂಬರ್ 13ರಂದು ತೆಲಂಗಾಣವನ್ನು ಪ್ರವೇಶಿಸಿತು. ಅದರ ವಿರುದ್ಧವೂ ಗೆರಿಲ್ಲಾ ದಳಗಳು ಹೋರಾಡಿದವು. ಕೊನೆಕೊನೆಗೆ ಸಶಸ್ತ್ರ ಹೋರಾಟವನ್ನು ಮುಂದುವರಿಸಬೇಕೆ, ಹಿಂಪಡೆಯಬೇಕೆ ಎಂಬ ಬಗ್ಗೆ ಚರ್ಚೆಗಳು ನಡೆದವು.


ಭಾರತದ ಸೇನೆಯ ವಿರುದ್ಧ ಗೆರಿಲ್ಲಾ ದಳಗಳು ವೀರೋಚಿತವಾಗಿ ಹೋರಾಡಿದಾಗಲೂ ಅದರ ಆಧುನಿಕ ಯುದ್ಧಾಸ್ತ್ರಗಳು, ಸಂಪರ್ಕ ಮತ್ತು ಕುಟಿಲ ತಂತ್ರಗಳನ್ನು ಎದುರಿಸುವುದು ಕಷ್ಟವಾಗಿಯೇ ಕಂಡಿತು. ಆದರಿಂದ ಸಶಸ್ತ್ರ ಹೋರಾಟವನ್ನು ಮುಂದುವರಿಸಲಾಗಲಿಲ್ಲ. ಅಂತಿಮವಾಗಿ 1951, ಅಕ್ಟೋಬರ್ 21ರಂದು ಸಶಸ್ತ್ರ ಹೋರಾಟವನ್ನು ಹಿಂದಕ್ಕೆ ಪಡೆದಿರುವುದಾಗಿ ಪ್ರಕಟಿಸಲಾಯಿತು.

ಈ ಹೋರಾಟದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಕಮ್ಯುನಿಸ್ಟರು, ರೈತಯೋಧರು ಪ್ರಾಣಾರ್ಪಣೆ ಮಾಡಿದರು. ಹತ್ತು ಸಾವಿರಕ್ಕೂ ಹೆಚ್ಚು ಕಮ್ಯುನಿಸ್ಟ್ ಕಾರ್ಯಕರ್ತರನ್ನು, ಹೋರಾಟಗಾರರನ್ನು ಮೂರು ನಾಲ್ಕು ವರ್ಷಗಳ ಕಾಲ ಬಂಧನದಲ್ಲಿಡಲಾಯಿತು. ಕನಿಷ್ಠ ಐವತ್ತು ಸಾವಿರಕ್ಕೂ ಹೆಚ್ಚು ಜನರನ್ನು ಪೊಲೀಸ್ ಮತ್ತು ಮಿಲಿಟರಿ ಕ್ಯಾಂಪುಗಳಿಗೆ ಎಳೆದುಕೊಂಡುಹೋಗಿ ತಿಂಗಳುಗಟ್ಟಲೆ ಚಿತ್ರಹಿಂಸೆ ಕೊಡಲಾಯಿತು. ಸುಮಾರು ಮೂವತ್ತು ಲಕ್ಷ ಜನಸಂಖ್ಯೆಯ ಮೂರು ಸಾವಿರ ಗ್ರಾಮಗಳ ವ್ಯಾಪ್ತಿಯಲ್ಲಿ ಈ ಹೋರಾಟ ನಡೆಯಿತು. ಅಸಹಾಯಕರಲ್ಲಿ ಹೋರಾಟದ ಕಿಚ್ಚನ್ನು ಹತ್ತಿಸಿತು. ಜಮೀನ್ದಾರಿಕೆಯ ವಿರುದ್ಧ ಸೆಟೆದುನಿಲ್ಲುವ ಎದೆಗಾರಿಕೆಯನ್ನು ತಂದಿತು. ಹತ್ತು ಲಕ್ಷ ಎಕರೆ ಭೂಮಿಯನ್ನು ರೈತರಿಗೆ ಹಂಚಿತು. ಬಿಟ್ಟಿಚಾಕರಿಯನ್ನು ರದ್ದುಪಡಿಸಿತು. ಬಡ್ಡಿ ವ್ಯಾಪಾರದ ಮೋಸವನ್ನು ಕೊನೆಗಾಣಿಸಿತು. ಕೃಷಿಕಾರ್ಮಿಕರ ದಿನಗೂಲಿಯನ್ನು ಹೆಚ್ಚಿಸಿತು. ಲಕ್ಷಾಂತರ ಜನರು ತಮ್ಮ ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ಎರಡು ಹೊತ್ತು ಊಟ ಮಾಡುವ ಪರಿಸ್ಥಿತಿ ನಿರ್ಮಾಣವಾಯಿತು. ರೈತಾಪಿಗಳಿಗೆ ಹಾಗೂ ದುಡಿಯುವ ಜನರಿಗೆ ನಿಜವಾದ ಶತ್ರುಗಳು ಮತ್ತು ಮಿತ್ರರು ಯಾರೆಂಬುದನ್ನು ತೋರಿಸಿತು. ಭಾರತಕ್ಕೆ ಹಸ್ತಾಂತರವಾದ ಅಧಿಕಾರದ ದರ್ಪದ ರುಚಿಯನ್ನು ತೋರಿಸಿತು. ಪೊಲೀಸು, ಸೈನ್ಯ ಯಾರನ್ನು ಸಂರಕ್ಷಿಸುತ್ತದೆ ಮತ್ತು ಯಾರನ್ನು ಸಂಹರಿಸುತ್ತದೆ ಎಂಬುದನ್ನು ಖಚಿತಪಡಿಸಿತು. ಸಶಸ್ತ್ರ ಹೋರಾಟದ ಶಕ್ತಿಯನ್ನೂ, ಮಿತಿಯನ್ನೂ ಗೊತ್ತುಪಡಿಸಿತು. ರಾಜಿರಹಿತ ಹೋರಾಟವನ್ನು ಶೋಷಿತ ಜನತೆ ಅಪ್ಪಿಕೊಳ್ಳುವ ಮತ್ತು ಒಪ್ಪಿಕೊಳ್ಳುವ ಸ್ವಯಂಪ್ರೇರಿತ ಸ್ವಭಾವವ[...] ಅನಾವರಣ ಮಾಡಿತು. ವರ್ಗ ಅಸಮಾನತೆಯ[...] ಅಳಿಸುವುದೆಂದರೆ ಕಾರ್ಮಿಕ ವರ್ಗದ ರಾಜ್ಯಾಧಿಕಾರ ಸ್ಥಾ[...] ಎಂಬುದನ್ನು ಒತ್ತಿಹೇಳಿತು.

ಈ ಹೋರಾಟ ವಿಶಾಲಾಂಧ್ರ ರಚನೆಗೆ ಮ[...] ಭಾಷಾವಾರು ರಾಜ್ಯಗಳ ಹಕ್ಕೊತ್ತಾಯಕ್ಕೆ ಭದ್ರವಾದ ತಳ[...] ಹಾಕಿತು. ಭಾರತದ ನೆಲದಲ್ಲಿ ಮೊಟ್ಟಮೊದಲ ಬಾ[...] ಗೆರಿಲ್ಲಾ ಯುದ್ಧ ತಂತ್ರವನ್ನು ರೂಪಿಸಿತು. 'ಉಳುವವ[...] ಭೂಮಿ' (ಭೂ ಒಡೆಯ ಅಲ್ಲ) ಎಂಬ ದುಡಿಯ[...] ರೈತಾಪಿಗಳ ಎದೆಯಾಳದ ಭಾವನೆಗೆ ಸೈದ್ಧಾಂ[...] ರೂಪಕೊಟ್ಟಿತು. 'ಗುಲಾಮನಾಗಿ ಹಿಂಸೆ ಅನುಭವಿ[...] ಇಲ್ಲವೆ ಎದೆಯೆತ್ತಿ ಹೋರಾಡು' ಎಂಬ ಆಯ್ಕೆಯ[...] ಜನತೆಯ ಮುಂದಿಟ್ಟಿತು. ಪಿ. ಸುಂದರಯ್ಯನವರ ಗ[...] ಅಸಾಮಾನ್ಯವಾದ ಚಿತ್ರಕ ಶಕ್ತಿ ಇದೆ. ಹೋರಾಟದ ಸ[...] ವಿವರಗಳನ್ನು, ಭಿನ್ನಭಿನ್ನ ನೆಲೆಗಳಲ್ಲಿ ನಿಂತು, ಭಾವನಾತ್ಮಕ[...] ರಾಜಕೀಯವಾಗಿ ಚರ್ಚೆ, ವಿಮರ್ಶೆ ಮತ್ತು ಮೌಲ್ಯಮಾ[...] ಸಮೇತ ಮಂಡಿಸಿದ್ದಾರೆ. ಭಾರತದ ಎಂ.ಎ[...] ಹೋರಾಟಗಾರರು ಇದನ್ನು 'ವೀರ ತೆಲಂಗಾಣ ಹೋ[...] ಎಂದೇ ಕರೆಯುತ್ತಾರೆ. ಯಾಕೆಂದರೆ ಮುಂದೆ [...] ಕ್ರಾಂತಿಕಾರಿ ಹೋರಾಟಗಳಿಗೆ ಇದೊಂದು ಮ[...] ಮೈಲಿಗಲ್ಲು. ಈ ಹೋರಾಟವನ್ನು ಕುರಿತ ವಿ[...] ಮತ್ತು ಮೌಲ್ಯಮಾಪನ ಇನ್ನೂ ನಡೆಯುತ್ತಲೇ [...] ಬಹುತೇಕ ಈ ಹೋರಾಟದ ಬೆಳಕಿ[...] ಚಾರುಮಜುಂದಾರ್ ಅವರು 1970ರಲ್ಲಿ "ಪರಿ[...] ವಿರೋಧಿ ಚಾರಿತ್ರಿಕ ಪ್ರಸಿದ್ಧ ಎಂಟು ದಸ್ತಾವೇಜು" ಎಂಬ ಕೃತಿಯನ್ನು ಬರೆದರು. 1951ರಲ್ಲಿ ತೆಲಂ[...] ಹೋರಾಟ ತನ್ನ ಸಶಸ್ತ್ರ ಹೋರಾಟವನ್ನು ಹಿ[...] ಪಡೆಯಿತೆಂಬುದು ಒಂದು ಹಂತ ಅಷ್ಟೆ. ಯಾಕೆ[...] 'ತಡೆಯಲಾಗದು ಹಿಡಿಯಲಾಗದು ದುಡಿವ [...] ಯುದ್ಧವೊ ಧೀರ ಯೋಧರ ವೀರವಾ[...] ನೂರುಭುಜಗಳು ಎದ್ದವೊ' ಎಂಬ ಕ್ರಾಂ[...] ಆಶಯದಂತೆ ಈ ಹೋರಾಟ ಮುಂದಿನ ನಕ್ಸ[...] ಮತ್ತು ಶ್ರೀಕಾಕುಳಂ ಹೋರಾಟಗಳಿಗೆ ಕ್ರಾಂ[...] ರಾಜಕೀಯದ ಸ್ಫೂರ್ತಿಯೂ, ಮಾರ್ಗವೂ ಆ[...] ಕನ್ನಡದ ಚರಿತ್ರೆ, ವಿಚಾರ ಮತ್ತು ಪ್ರಗತಿಪರ ಸಾ[...] ಈ ಕೃತಿ ಒಂದು ಅಮೂಲ್ಯ ಕೊಡುಗೆ.

■ ಡಾ. ಬಿ.ಎಂ. ಪುಟ್ಟ[...]

ಅನುರಣನ



ಡಾ. ಟಿ.ಎಸ್. ಚನ್ನೇಶ್
channeshts@gmail.com

ಮನುಕುಲದ ಹಳೆಯ ಗೆಳೆಯ

ಭಾರತದಲ್ಲಿ ಹುಟ್ಟಿ ಇಲ್ಲಿಯೇ ತನ್ನ ಎಳೆತನವನ್ನು ...ದು ಇಂಗ್ಲೆಂಡಿಗೆ ಹೋಗಿ ಇದ್ದು ಮತ್ತೆ ವಾಪಸ್ ...ದು ನಮ್ಮಲ್ಲಿಯೇ ಒಂದಷ್ಟು ದಿನಕಳೆದ ಇಂಗ್ಲಿಷ್ ...ಖಕ ರುಡ್ಯಾರ್ಡ್ ಕಿಪ್ಲಿಂಗ್ ಅವರ ಪ್ರಸಿದ್ಧ ಕೃತಿ 'ಜಂಗಲ್ ...ಕ್'. ಅದು ಮೋಗ್ಲಿ ಎಂಬ ಬಾಲಕನನ್ನು ತೋಳಗಳೆರಡು ...ಮ್ಮದೇ ಮಗುವಿನಂತೆ ಬೆಳೆಸುವುದರೊಂದಿಗೆ ಕಾಡಿನ ...ತೆಯ ಸಹಚರ್ಯದ ಅದ್ಭುತ ಪರಿಚಯ ಕೊಡುವ ...ನಕ. ನಮ್ಮ ಜನಪದದಲ್ಲಿ ತೋಳಗಳು ಮಕ್ಕಳನ್ನು ...ಕೊಂಡು ಹೋಗುತ್ತವೆ ಎಂಬ ಸೂಚನೆಗಳೇ ಈ ಕಥೆಯ ...ಟ್ಟಿಗೆ ಕಾರಣವಿದ್ದೀತು. ಅಚ್ಚರಿಯೆಂದರೆ ಜೀವವಿಕಾಸದಲ್ಲಿ ...ವನ್ನು ಬೇರೊಂದು ಬಗೆಯಲ್ಲಿ ಪುಷ್ಟೀಕರಿಸುವ ...ಗತಿಗಳಿವೆ. ವಾಸ್ತವವಾಗಿ ತೋಳಗಳು ಮಕ್ಕಳನ್ನು ...ಕೊಂಡು ಹೋಗುವುದಿಲ್ಲ, ಆ ಕೆಲಸವನ್ನು ಮನುಷ್ಯನೇ ...ಡಿದ್ದಾನೆ. ಅಂದರೆ ತೋಳಗಳನ್ನು ಎತ್ತಿಕೊಂಡು ಬಂದು ...ದ್ದಾನೆ. ಹಾಗೆ ಸಾಕಿದ ತೋಳಗಳೆ ವಿಕಾಸಗೊಂಡು ...ದು ನಮ್ಮ ನಿಮ್ಮೆಲ್ಲರ ಜತೆಗಾರರಾಗಿ, ಮನುಕುಲದ ...ಂತ ಹಳೆಯ ಹಾಗೂ ಆತ್ಮೀಯವಾದ "ನಾಯಿ"ಗಳಾಗಿ ...ಮ್ಮೊಂದಿಗೆ ಇವೆ. ಇಂದು ನಮ್ಮೊಂದಿಗಿರುವ ಈ ...ಯಿಗಳು ವಿಕಾಸದಲ್ಲಿ ತೀರ ಇತ್ತೀಚಿಗಿನವು. ಅಲ್ಲದೇ ...ಪ್ರಾಣಿಗಳನ್ನು ಪಳಗಿಸಿ ತಮ್ಮ ಜತೆಗಾರರನ್ನಾಗಿ ಮಾಡಿ ...ಂಡ ಇತರೇ ಜೀವಿಗಳಲ್ಲಿ "ಈ ತೋಳ(ನಾಯಿ)" ಕ್ಕೆ ...ಶೇಷ ಸ್ಥಾನ. ಇದೆಲ್ಲಾ ಸಾಧ್ಯವಾಗಿದ್ದ ಬಗೆಯಲ್ಲಿ ನಮ್ಮ ... ಬದುಕನ್ನು ನಾಗರಿಕತೆಯೆಡೆಗೆ ಕೊಂಡೊಯ್ದ ...ಗತಿಗಳಿವೆ.

...ಮಾನವರು ನಾಗರಿಕತೆಯೆಡೆಗೆ ಕಾಲನ್ನಿಟ್ಟು ಬದುಕನ್ನು ...ಲಾಯಿಸತೊಡಗಿದ್ದು ಒಂದು ಕೂತೂಹಲದ ಕಥೆ. ...ಸಂಚಾರಿಯಾಗಿದ್ದ ಮಾನವರು, ನೆಲೆ ಕಂಡುಕೊಂಡದ್ದು ...ಮಾಜದ ರಚನೆಯಲ್ಲಿ ಹೊಸತೊಂದು ಆಯಾಮ ...ಗೆ ಕಾರಣವಾಗಿತ್ತು. ಅದಕ್ಕೂ ಮೊದಲು ವನ್ಯಪ್ರಾಣಿಗಳ ... ಅವುಗಳಂತೆಯೇ ಜೀವನವನ್ನು ಸಾಗಿಸುತ್ತಿದ್ದ ಕ್ಷಣಗಳು ...ಣಿಗಳನ್ನೂ ತನ್ನಿಚ್ಛೆಗೆ ಪಳಗಿಸಿ ಬಳಸಿದ್ದು ಒಂದು ...ಚಕ ಸಂಗತಿಯೆ. ಬಹಳ ಹಿಂದೆಯಲ್ಲ, ತೀರ ಇತ್ತೀಚೆಗೆ ...ದರೆ ಸರಿಸುಮಾರು ಕೇವಲ 20,000 ವರ್ಷಗಳಷ್ಟು ...ದೆಯಷ್ಟೇ ನಾವೀಗ ಕಾಡುಗಳಲ್ಲಿ ಅಥವಾ ಅಭಯಾರಣ್ಯ ...ಲ್ಲಿ ನೋಡುವ ಕಾಡೆಮ್ಮೆ, ಕಾಡುಕೋಣಗಳು ತಮಗಿಂತ ...ಕವಾಗಿ ಆಕಾರ ಹಾಗೂ ಬಲದಲ್ಲೂ ಕಡಿಮೆಯೆನಿಸಿದ್ದ ...ಡು ಜೀವಿಗಳಿಂದ ನಿರಂತರವಾಗಿ ತೊಂದರೆಗೆ ...ಳಾಗುತ್ತಿದ್ದವು. ಈ ಎರಡೂ ಜೀವಿಗಳೆಂದರೆ ಮಾನವರು ...ತ್ತು ತೋಳಗಳು. ಮಾನವ ಕಾಡೆಮ್ಮೆಯ ಬೇಟೆಗಾಗಿ ... ತೋಳಗಳ ಜತೆಗೆ ಸ್ಪರ್ಧಿಸುತ್ತಿದ್ದನು. ಮನುಷ್ಯರು ...ತ್ತು ತೋಳಗಳು ಕಾಡೆಮ್ಮೆಯ ಬೇಟೆಯಲ್ಲಿ ಹೆಚ್ಚೂಕಡಿಮೆ ...ದೆ ಬಗೆಯ ತಂತ್ರಗಳನ್ನು ಬಳಸುತ್ತಿದ್ದ ಕಾರಣಗಳಿಂದ ...ಗಾಗುತ್ತಿತ್ತು ಎಂದು ನಂಬಲಾಗಿದೆ. ಏಕೆಂದರೆ ಮಾನವರು ...ತ್ತು ತೋಳಗಳ ವನ್ಯ ಜೀವನ ಕ್ರಮದಲ್ಲಿ ಹಲವಾರು ...ದಯಲ್ಲಿ ಸಾಮ್ಯವಿದೆ. ಇದರಿಂದಾಗಿಯೇ ಕೆಲವು ವಿಕಾಸದ ...ಗತಿಯಲ್ಲಿ ಅವುಗಳು ಬಳಕೆಗೊಂಡಿವೆ.

...ಮನುಕುಲದ ಇತಿಹಾಸದಲ್ಲಿ ಈಗ್ಗೆ 20,000-...000 ವರ್ಷಗಳ ಹಿಂದೆ ನಡೆದ ಸಂಗತಿಗಳು ಇಂದಿನ ...ಪಾಲು ಜೀವನ ಕ್ರಮ ಮತ್ತು ಶೈಲಿಯನ್ನು ...ಸಗೊಳಿಸಿವೆ. ಬೇಟೆಯಲ್ಲಿ ಅಲೆದಾಡುತ್ತಿದ್ದ ಮಾನವ ...ಂಪಗಳು ಒಂದು ಬಗೆಯ ಸಮಾಜವನ್ನು ...ಸಗೊಳಿಸಿಕೊಳ್ಳುವುದಕ್ಕೆ ಅವರ ನಡುವೆಯೇ ...ಜಾದ ಕುಟುಂಬಗಳೂ ನೆರವಾಗಿವೆ. ಈ ಮಾನವ ...ಂಬದ ಸಂರಚನೆಗಳು ತೋಳಗಳ ಜೀವನಕ್ಕೂ ಕೆಲವು ...ಗಳಲ್ಲಿ ಹೋಲಿಕೆಗಳಿವೆ. ಎರಡೂ ಜೀವಿಗಳೂ ಗುಂಪು ...ವನವನ್ನು ನಡೆಸುತ್ತಾ ವಿಕಾಸಗೊಂಡಿವೆ. ಎರಡೂ ...ವಿಗಳ ಗುಣಗಳು ಅದೆಷ್ಟು ಒಂದೇ ಎಂದರೆ ಇಬ್ಬರೂ ...ಂಬಪ್ರಿಯರು. ಒಂದು ಕುಟುಂಬದಲ್ಲಿ ಅನ್ಯೋನ್ಯತೆ, ...ರೆ ಮತ್ತೊಂದು ಗುಂಪಿನ ಬಗ್ಗೆ ಅನುಮಾನ. ಒಂದು ...ಂಬದ ಎಲ್ಲರೂ ಸೇರಿ ಮಕ್ಕಳನ್ನು ನೋಡಿಕೊಳ್ಳುವ ... ಹಾಗೆಯೇ ಬಹಳ ಮುಖ್ಯವಾಗಿ ಮತ್ತೊಂದು ...ಯ ಅಥವಾ ಗುಂಪಿನ ಚಹರೆಯನ್ನು ಬಿಡಿಸಿಕೊಂಡು ...ಮಾಡಿಕೊಳ್ಳುವ ಚಾಲಾಕಿತನ. ಈ ಚಹರೆಯು ಮುಖ ...ದವಾಗಿರಬಹುದು ಅಥವಾ ದೇಹ ಭಾಷೆಯಿಂದಿ ...ಬಹುದು. ಎರಡನ್ನೂ ಅರ್ಥೈಸಿಕೊಂಡು ತಿಳಿಯುವ ...ಕಲೆ ಇಬ್ಬರಲ್ಲೂ, ಎರಡರಲ್ಲೂ ಗುಂಪು ನಾಯಕನಂತಿದ್ದು ...ಂಬದ ಯಜಮಾನ ಎನಿಸಿಕೊಂಡು ಆ ಗುಂಪನ್ನು ...ಸುತ್ತಾ ಜವಾಬ್ದಾರಿ ಹೊರುತ್ತಾರೆ. ಹಾಗೆಯೇ ಆಯಾ ...ಂಬದ ನಾಯಕ ಅಥವಾ ಹೆಣ್ಣಿನ ಮೇಲೂ ...ಪತ್ಯ ಸಾಧಿಸುವುದರಲ್ಲೂ ಜಯಶಾಲಿಯಾಗಿದ್ದಾರೆ.

ಅದರ ಜತೆಯಲ್ಲಿ ಇಡೀ ಕುಟುಂಬದ ಒಳಗೆ ಎಲ್ಲರ ನಡುವೆಯೂ ಒಂದು ಬಗೆಯ ಹೊಂದಾಣಿಕೆ ವಿಕಾಸಗೊಂಡು ಒಬ್ಬರನ್ನೊಬ್ಬರ ನಡುವಣ ನಂಬಿಕೆಗಳು ಗಟ್ಟಿಗೊಳ್ಳುತ್ತಾ ಬೆಳೆದಿವೆ. ಅಲ್ಲದೆ ಇತರೇ ಗುಂಪಿನ ಮೇಲೆ ಒಂದು ಬಗೆಯ ಅನುಮಾನ ಮತ್ತು ಸ್ಪರ್ಧೆಯೂ ವಿಕಾಸಗೊಂಡು ಇಂದಿಗೂ ಈ ಬಗೆಯ ಬೆಳವಣಿಗೆಗಳು ಉಳಿದುಕೊಂಡಿರುವುದನ್ನು ಕಾಣುತ್ತೇವೆ. ತೋಳಗಳೂ ಹೀಗೆಯೇ ಗುಂಪು ಜೀವನವನ್ನು ಪ್ರೀತಿಸುತ್ತವೆ. ಈ ಎರಡೂ ಗುಂಪಿನ ನಡವಳಿಕೆಗಳೂ ಹೆಚ್ಚೂಕಡಿಮೆ ಒಂದೇ ಬಗೆಯಲ್ಲಿ ವಿಕಾಸಗೊಂಡು ಇದನ್ನೇ ಜೀವನ ಕ್ರಮ ಅಥವಾ ತಂತ್ರವಾಗಿಯೂ ಬಳಸಿದ್ದಾರೆ. ಆದ್ದರಿಂದಲೇ ಇದನ್ನೇ ಬೇಟೆಗಳಲ್ಲಿಯೂ ಬಳಸುತ್ತಿದ್ದರು. ಸಾಮಾನ್ಯವಾಗಿ ಈ ಎರಡೂ ಜೀವಿಗಳಿಗಿಂತ ಎಮ್ಮೆಗಳು ಬಲಿಶಾಲಿ. ಇದನ್ನೇ ಬೇಟೆಗೆ ಬಲಿಯಾಗಿಸುವುದೆಂದರೆ, ಒಂದು ಹೀನಬಲದ ಪ್ರಾಣಿಯಾಗಿ ಸಾಧ್ಯಗೊಳಿಸಲು ಉಪಯೋಗಿಸಬಹುದಾದ ತಂತ್ರವೆಂದರೆ ಗುಂಪಾಗಿ ಮೇಲೆ ಬೀಳುವುದು. ಇದನ್ನೇ ಇಬ್ಬರೂ ಮಾಡುತ್ತಿದ್ದುದು.


ಹೊಂದಾಣಿಕೆಯ ವಿಕಾಸ

ತೋಳಗಳು ಮಕ್ಕಳನ್ನು ಹೊತ್ತೊಯ್ದದ್ದು ಕಥೆಗಳಲ್ಲಿ, ಆದರೆ ನಿಜಜೀವನದಲ್ಲಿ ತೋಳಗಳನ್ನೇ ತಂದು ಮನುಷ್ಯ ಸಾಕಿ ಹೊಂದಿಸಿಕೊಂಡಿದ್ದಾನೆ. ಒಂದು ಕಾಲಕ್ಕೆ ಇಬ್ಬರೂ ಒಂದೇ ಬೇಟೆಯಲ್ಲಿ ಗುರಿ ಇಟ್ಟವರು. ಹಾಗಾಗಿ ಇಬ್ಬರೂ ಸೇರಿಕೊಂಡು ಒಂದಾದರೆ ಲಾಭ ಹೆಚ್ಚಲ್ಲವೇ? ಇದೇ ಒಂದು ಪ್ರಮುಖ ಕಾರಣವಾಯಿತು. ತೋಳಗಳಿಗೆ ಮನುಷ್ಯರ ಜಾಣತನ ವಿಶೇಷ ತಂತ್ರಗಾರಿಕೆಯ ಜತೆಗೆ ಅವರು ಬಳಸುವ ಆಯುಧಗಳ ಆಸಕ್ತಿ ಇತ್ತು. ಮಾನವರಿಗಾದರೋ ತೋಳಗಳ ಒರಟುತನ ಮತ್ತು ಬಿರುಸುತನಗಳು ಉತ್ತಮ ಆಯುಧಗಳಂತೆಯೇ ಕಂಡವು. ಹೀಗಾಗಿ ಇಬ್ಬರೂ ಒಂದಾಗಿದ್ದಾರೆ. ಮನುಷ್ಯರಿಗೆ ತಮಗೆ ಹೊಂದಿಕೊಂಡ ಜೀವಿಯ ಮೇಲೆ ವಾತ್ಸಲ್ಯ ಪ್ರೀತಿಯುಂಟಾಗಿದ್ದರೆ, ಜತೆಗೆ ತೋಳದ ಮರಿಗೆ ಮಾನವರ ಜತೆಗಿನ ತಂತ್ರಗಳ ಕಲಿವ ಜಾಣತನವಿತ್ತು. ಈ ಕಾರಣಗಳ ಮೂಲಕವೇ ಬಗೆಬಗೆಯಾದ ಈಗಿರುವ ಎಲ್ಲಾ ನಾಯಿಯ ತಳಿಗಳು ವಿಕಾಸಗೊಂಡವು.

ಆಹಾರದ ಬೇಟೆಯ ತಂತ್ರಗಾರಿಕೆಯಲ್ಲಿ ಒಂದೇ ಬಗೆಯನ್ನು ಬಳಸುತ್ತಿದ್ದುದರಿಂದಲೇ ಸಹಜವಾಗಿ ಇಬ್ಬರಲ್ಲೂ ಪೈಪೋಟಿಯ ಸಂದರ್ಭಗಳು ಹೆಚ್ಚಾಗಿದ್ದವು. ಇದನ್ನು ಕೊನೆಗಾಣಿಸಿ ಲಾಭ ಮಾಡಿಕೊಳ್ಳಲು ಅವುಗಳ ನಡುವಿನಲ್ಲೇ ಹೆಚ್ಚು ವಿಕಾಸಗೊಂಡ ಮನುಷ್ಯ ಹೊಸ ಬಗೆಯೊಂದನ್ನು ಬಳಸಿದ. ಅಂದರೆ ಮಾನವ ಮಾಡಿದ್ದೇನೆಂದರೆ ತೋಳಗಳನ್ನು ಬೇಟೆಗಾಗಿಯೇ ಸಾಕಿ ಬಳಸಿಕೊಂಡು ಅದರಿಂದ ಲಾಭ ಪಡೆದದ್ದು. ಇದನ್ನು ಹಂತಹಂತವಾಗಿ ಸಾಧಿಸಿ ಹೊಸತೊಂದು ವಿಕಾಸಕ್ಕೆ ನೆರವಾದರು. ಹಾಗಾಗಿ ಮೊದಮೊದಲು ಬಹುಶಃ ತೋಳಗಳ ಒಂದಂಶದ ಸ್ನೇಹ ಸಂಪಾದಿಸಲು ಪ್ರಯತ್ನಿಸಿರಬಹುದು. ಆ ಮೂಲಕ ನಡುವಣ ಸ್ಪರ್ಧೆಗಳನ್ನು ಕಡಿಮೆಗೊಳಿಸಿ ಇಬ್ಬರೂ ಲಾಭ ಪಡೆದಿರಬಹುದು. ಆದರೆ ಇದಕ್ಕಿಂತಲೂ ಅಧಿಕ ಲಾಭದ ಸಂಗತಿ ಎಂದರೆ ಎಳವೆಯಲ್ಲಿಯೇ ತೋಳಗಳನ್ನು ತಮ್ಮಿಚ್ಛೆಗೆ ಸಹಾಯವಾಗುವಂತೆ ರೂಪಿಸುವುದಾಗಿರಬೇಕು. ಅದಕ್ಕೆಂದು ಪುಟ್ಟ ತೋಳಗಳನ್ನು ಗುಂಪಿನಿಂದ ಬೇರ್ಪಡಿಸಿ ತಾನು ಸಾಕಿ ತನಗೆ ಅನುಕೂಲ ಆಗುವಂತೆ ಪಳಗಿಸಿಕೊಂಡ. ಹೀಗೆ ತಾನು ಮಾಡಿದ್ದಕ್ಕೆ ಸಹಜವಾಗಿ ಅವೂ ಮಾಡಬಹುದೆಂಬ ಅವ್ಯಕ್ತ ಭಯ ಮಾನವರ ಮನಸ್ಸಿನಲ್ಲಿ ಉಳಿದಿರಬೇಕು. ಅದಕ್ಕೆ ತೋಳಗಳು ಮಕ್ಕಳನ್ನು ಎತ್ತಿಕೊಂಡ ಹೋದ ಜನಪದ ಕಥೆಗಳು ಹುಟ್ಟಿಕೊಂಡಿವೆ. ಅದೇನೇ ಇರಲಿ, ಮಾನವ ಹೀಗೆ ತಂದು ಸಾಕಿದ "ತೋಳ"ಗಳು ಕ್ರಮೇಣ ಮನುಷ್ಯರ ಸಹಚರ್ಯದಲ್ಲಿ ಬದಲಾಗುತ್ತಾ ಸಾಗಿದವು. ಅವೇ ಮುಂದೊಂದು ದಿನ ಇಂದಿನ ನಾಯಿಗಳಂತಾದವು. ಒಂದು ಅಂದಾಜಿನಂತೆ ಈಗಿರುವ ನಾಯಿಗಳು ಹೆಚ್ಚೂ ಕಡಿಮೆ ಸುಮಾರು 12,000-15,000 ವರ್ಷಗಳ ಹಿಂದೆ ವಿಕಾಸಗೊಂಡವು. ಮಾತ್ರವಲ್ಲ ಅವುಗಳ ಸಾಕಾಣಿಕೆಯಿಂದಲೂ ಬದಲಾಗುತ್ತಲೇ ವಿಕಾಸಗೊಳ್ಳುತ್ತಲೇ ಬೆಳೆದವು. ಏಕೆಂದರೆ ಸಾಕಾಣಿಕೆಯು ಬಹಳ ದೊಡ್ಡ ಬದಲಾವಣೆಯನ್ನು ತರಬಲ್ಲದು. ಅವೇ ಈಗಲೂ ನಾವು ಕಾಣುತ್ತಿರುವ ತಳಿಗಳ ನಡುವಣ ವ್ಯತ್ಯಾಸಗಳಾಗಿವೆ.

ಅತ್ಯಂತ ಹಳೆಯ ದಾಖಲೆಯೆಂದರೆ ಇಂದಿನ ಇರಾಕ್‌ನಲ್ಲಿನ ಗುಹೆಗಳಲ್ಲಿ ದೊರೆತ ಈಗಿರುವ ನಾಯಿಯ ದವಡೆಯನ್ನು ಹೋಲುವ ಎಲುಬುಗಳು ಸುಮಾರು 12,000 ವರ್ಷದವೆಂದು ಅಂದಾಜು. ಅವು ಸಹಜವಾಗಿಯೇ ತೋಳಗಳಿಗಿಂತಲೂ ಭಿನ್ನವಾಗಿದ್ದವು. ಮನುಷ್ಯರ ಜತೆ ಜೀವಿಸಿದ ತೋಳಗಳು ಹೇಗಾದವೆಂದರೆ, ಅವರ ಸಹಚರ್ಯದಿಂದಲೇ ನಾಯಿಗಳು ಹೆಚ್ಚು ಬೊಗಳುವುದನ್ನೂ ಕಲಿತಿವೆ. ತೋಳಗಳು ನಾಯಿಗಳಷ್ಟು ನಿರಂತರವಾಗಿ ಬೊಗಳಲಾರವು. ಈ ಬೊಗಳುವಿಕೆಯಲ್ಲೂ ಸ್ನೇಹದ, ವಿರೋಧದ, ಜಗಳದ, ಪ್ರೀತಿಯನ್ನು ತೋರುವ ಹೀಗೆ ಅನೇಕ ಬಗೆಯ ಸಂವಹನವನ್ನು ನಾಯಿಗಳು ಸಾಧಿಸಿವೆ. ಸಾಕಾಣಿಕೆಯ ವಿಕಾಸದಿಂದ ನಾಯಿಗಳು ಕಲಿತುಕೊಂಡ ಗುಣಗಳು ಇವು. ಮಾತ್ರವಲ್ಲ ತಮ್ಮನ್ನು ಸಲುಹಿದ ಜೀವಿಗೆ ನಿಷ್ಠೆ. ಇದು ತೋಳಗಳಿಂದ ಒದಗಿದ್ದ ಪಾಠ. ಉಪಯುಕ್ತವಾದ ಗುಣಗಳು ನಿರಂತರವಾಗಿಸಿಕೊಂಡು ಬೆಳೆದಿವೆ.

ಹೀಗೆ ಹತ್ತಿರವಾದ ನಾಯಿಗಳು ಅನೇಕ ಬಗೆಯಲ್ಲಿ ಮಾನವರ ಸಾಮೀಪ್ಯ ಪಡೆದಿವೆ. ಈಜಿಪ್ಟರ ಚಿತ್ರಕಲೆಗಳಲ್ಲಿ



ನಾಯಿಗಳು ಸ್ಥಾನ ಪಡೆದುಕೊಂಡಿವೆ. ಆರ್ಯರ, ರೋಮನ್ನರ ಶಿಲ್ಪಕಲೆಗಳಲ್ಲಿ ನಾಯಿಗಳನ್ನು ಕಾಣಬಹುದು. ನಾಯಿಗಳು ಮಾನವರ ತೊಡೆಯನ್ನೇರಿದ್ದೇ ರೋಮನ್ನರ ಕಾಲದಲ್ಲಿ. ರೋಮ್‌ನ ಹೆಂಗಸರು ನಾಯಿಗಳ ಪ್ರೀತಿಗೆ ಮಾರು ಹೋಗಿದ್ದರು. ಎಷ್ಟೆಂದರೆ ನಾಯಿಗಳ ಹತ್ತಿರವಿದ್ದಲ್ಲಿ ಹೊಟ್ಟೆಯ ನೋವು ನಿವಾರಿಸುವುದೆಂಬ ನಂಬಿಕೆಗಳು ಅವರಲ್ಲಿದ್ದವು. ಹಾಗೆಯೆ ನಾಯಿಗಳ ಬಣ್ಣಗಳ ಕುರಿತೂ ಕಾರಣಗಳನ್ನು ಹೇಳುತ್ತಿದ್ದವರಲ್ಲಿ ರೋಮನ್ನರು ಮೊದಲಿಗರು. ಉದಾಹರಣೆಗೆ ಕಳ್ಳಕಾಕರನ್ನು ಹೆದರಿಸಲು ಕಪ್ಪು ನಾಯಿಯ ಬಯಕೆಯಲ್ಲಿ ಆಸಕ್ತರಾಗಿದ್ದರು.

ಹೀಗೆ ನಾಯಿಗಳು ಮಾನವರ ಆದ್ಯತೆಯನ್ನು ಪಡೆದ ಪ್ರಾಣಿಗಳು. ನಾಗರಿಕತೆಯನ್ನು ಆರಂಭಿಸುವ ದಿಕ್ಕಿನಲ್ಲಿ ನಾಯಿಗಳ ಕೊಡುಗೆಯು ಮಹತ್ವದ್ದು. ಮಾನವರಿಗೆ ಹೊಂದಾಣಿಕೆಯಿಂದ ತಂತ್ರಗಳ ಬೆಳೆಸಿಕೊಂಡು, ತಮ್ಮ ಲಾಭಕ್ಕೆ ಬಳಸುವ ವ್ಯವಹಾರಿಕೆಯ ಮೊದಲ ಪಾಠಕ್ಕೆ ನಾಯಿಗಳು ಕಾರಣವಾದವು. ಅದರ ನಂತರವೇ ಇತರೇ ಪ್ರಾಣಿಗಳನ್ನೂ ಪಳಗಿಸುವುದನ್ನು ಕಲಿತು ತಮ್ಮ ಜೊತೆಗಾರರನ್ನಾಗಿ ಮಾಡಿಕೊಂಡಿದ್ದಾನೆ. ಸಾಕಿದ ಮೇಲೆ ಹೊಂದಾಣಿಕೆಯ ಸಂಕೀರ್ಣತೆಗಳಿಂದಾದ ತಳಿ ಅಭಿವೃದ್ಧಿಯು ಒಂದು ಹಿಡಿತಕ್ಕೆ ಒಳಪಟ್ಟಿದ್ದು ಲಾಭದ ಹಿನ್ನೆಲೆಯನ್ನು ಹೊಂದಿರುತ್ತದೆ. ಇದನ್ನೆಲ್ಲಾ ನಿಭಾಯಿಸಿ ಉಳಿದು, ಬೆಳೆಯಬೇಕೆಂದರೆ ತಮ್ಮ ವನ್ಯ ಸಂಬಂಧಿಗಳಿಂದ ಭಿನ್ನವಾಗಿ ವಿಕಾಸಗೊಂಡು ಬೆಳೆದದ್ದರಲ್ಲಿ ಆಶ್ಚರ್ಯವಿಲ್ಲ, ಜತೆಯಲ್ಲಿ ತಮ್ಮ ವನ್ಯ ಸಂಬಂಧಿಗಳ ಸಂಖ್ಯೆಯನ್ನೂ ಮೀರಿದ್ದು ಆಶ್ಚರ್ಯವಿಲ್ಲ.

ಜಗತ್ತಿನಾದ್ಯಂತ ಹಲವಾರು ನಾಯಿತಳಿಗಳ ವಿಕಾಸವಾಗಿದೆ. ಮುಖ್ಯವಾಗಿ ಕಾಯುವ ಕೆಲಸಕ್ಕೆ, ಅಂದಕ್ಕೆ ಇತ್ಯಾದಿಯ ಆಸಕ್ತಿಗೆಂದೇ ಬಗೆಬಗೆಯ ತಳಿಗಳು ಸಿಗುತ್ತವೆ. ಜರ್ಮನ್ ಶೆಫರ್ಡ್ ಅಂತೂ ಕುರಿ ಕಾಯುವ ನಾಯಿ ಎಂದೇ ಹೆಸರು ಪಡೆದಿದೆ. ಹಾಗೆಯೇ ಅನೇಕ ತಳಿಗಳು ಜನಪ್ರಿಯವಾಗಿವೆ.

ನಮ್ಮ ನೆಲದ ಕೊಡುಗೆ


ಕರ್ನಾಟಕವೂ ಸೇರಿದಂತೆ ಭಾರತದ ಇತಿಹಾಸದಲ್ಲಿ ನಾಯಿಗಳ ಕಾಣಿಕೆಯು ಸಾಕಷ್ಟಿದೆ. ಕ್ರಿ.ಪೂ. 500ರ ನಂತರ ನಮ್ಮ ದೇಶವೂ ಆಹಾರ ಮುಂತಾದ ಅನೇಕ ಕಾರಣಗಳಿಂದ ವಿದೇಶೀಯರ ಆಸಕ್ತಿಗೆ ಒಳಗಾಗಿದೆ. ಇದು ವ್ಯಾಪಾರ ಮತ್ತು ಹಲವಾರು ಸಂಬಂಧಗಳನ್ನು ಬೆಳೆಸಿತು. ಮನುಷ್ಯರ ಜತೆಯಾಗಿಯೇ ನಿರಂತರವಾಗಿದ್ದ ನಾಯಿಗಳೂ ಅವರ ಜತೆಯಲ್ಲಿಯೇ ವಿದೇಶದಿಂದಲೂ ಬಂದವು. ನಮ್ಮ ಸ್ವದೇಶೀ ನಾಯಿಗಳ ಜತೆಗೆ ವಿದೇಶಿ ನಾಯಿಗಳ ಸಹಚರ್ಯ ಉಂಟಾಯಿತು. ಇವುಗಳ ಸಂಸಾರದಿಂದಾಗಿ ಒಂದಷ್ಟು ಬದಲಾವಣೆಗಳಾದವು. ಅದೂಅಲ್ಲದೆ ಮುಖ್ಯವಾಗಿ ಆ ಕಾಲಕ್ಕೂ ನಾಯಿಗಳ ಉಡುಗೊರೆ ಮತ್ತು ಕೊಡಕೊಳ್ಳುವಿಕೆಯೂ ಇತ್ತು. ಇಂತಹ ಕೊಡುಕೊಳ್ಳುವಿಕೆಯು ಭಾರತದಿಂದ ಪರ್ಶಿಯಾ, ಟರ್ಕಿ ಮೊದಲಾದ ದೇಶಗಳ ನಡುವೆ ನಡೆದವು. ಇಂತಹ ಕೊಡುಕೊಳ್ಳುವಿಕೆಯಿಂದ ವಿಕಾಸವಾಗಿರಬಹುದೆಂದು ನಂಬಲಾದ ಖ್ಯಾತ ನಾಯಿ ತಳಿ ನಮ್ಮದೇ ಆದ 'ಮುಧೋಳ ಹೌಂಡ್'' ಅಥವಾ ಮುಧೋಳ ನಾಯಿ.

ಕಾಲಕ್ರಮೇಣ ಆಯಾ ಪ್ರಾದೇಶಿಕ ಗುರುತಿಸುವಿಕೆಯಿಂದಾಗಿ ಮುಧೋಳ ಎಂದು ಹೆಸರಾಗಿರಬೇಕು. ಮುಧೋಳ ನಮ್ಮ ರಾಜ್ಯದ ಬಾಗಿಲುಕೋಟೆ ಜಿಲ್ಲೆಯ ತಾಲ್ಲೂಕು ಸ್ಥಳ. ಒಂದು ಕಾಲಕ್ಕೆ ಮುಧೋಳ ಕೂಡ ಪುಟ್ಟ ರಾಜ್ಯವಾಗಿತ್ತು, ಆಗಿನ ಆಳುವ ಮನೆತನಗಳು ಈಗಿನ ನಾಯಿ ತಳಿಯನ್ನು ರಕ್ಷಿಸಿಕೊಂಡಿರುವ ಸಾಧ್ಯತೆಗಳಿವೆ. ಇಲ್ಲಿಂದಲೇ ವರ್ಗಾವಣೆಗೊಂಡ ನಾಯಿಗಳಿಗೆ 'ಮುಧೋಳ' ನಾಯಿಗಳೆಂಬ ಹೆಸರು ಶಾಶ್ವತವಾಗಿ ಉಳಿಯಿತು. ಆಗಿನ ಕಾಲಕ್ಕೆ ರಾಜ ಮಾಲೋಜಿರಾವ್ ಘೋರ್ಪಡೆ ಎಂಬವರು ಐದನೇ ಜಾರ್ಜ್‌ಗೆ ಈ ಮುಧೋಳ ನಾಯಿಮರಿಗಳನ್ನು ಬಹುಮಾನವಾಗಿ ಕೊಟ್ಟ ಬಗ್ಗೆ ಉಲ್ಲೇಖಗಳಿವೆ ಎಂದು ಇತಿಹಾಸ ಹೇಳುತ್ತದೆ. ನಾಯಿಮರಿಗಳನ್ನು ಕಂಡ ಆಂಗ್ಲ ದೊರೆ ಅದೆಷ್ಟು ಖುಷಿಗೊಂಡನಂತೆ ಎಂದರೆ ಮುಧೋಳದ ಈ ಮರಿಗಳಿಗೆ ಮುಧೋಳ ಹೌಂಡ್ ಎಂದು ಹೆಸರಿಸಿದನೆಂದು ಹೇಳಲಾಗಿದೆ. ಮುಧೋಳ ನಾಯಿಗೆ ನಮ್ಮ ಅಂಚೆ ಚೀಟಿಯಲ್ಲೂ ಗೌರವ ಸಿಕ್ಕಿದೆ.

ಈ ಮುಧೋಳದ ನಾಯಿಗಳ ಹಿರಿಮೆ ಅಲ್ಲಿಗೇ ಮುಗಿಯಲಿಲ್ಲ, ಛತ್ರಪತಿ ಶಿವಾಜಿ ಮಹಾರಾಜ್ ಅವರ ನಂಬುಗೆಯ ಕಾವಲುಗಾರ ನಾಯಿಗಳು ಮುಧೋಳವನ್ನೇ ಹೋಲುತ್ತಿದ್ದವೆಂದೂ ಸಂಗತಿಗಳಿವೆ. ಮಾತ್ರವಲ್ಲ, ಶಿವಾಜಿ ತಂದೆ ಷಹಜಿ ಮಹಾರಾಜರ ಮೇಲೆ ನುಗ್ಗಿದ್ದ ಹುಲಿಯೊಂದನ್ನು ಮುನ್ನುಗ್ಗಿ ಕೊಂದು ರಾಜನನ್ನು ಬದುಕಿಸಿದ್ದೂ ಮುಧೋಳ ಎಂಬ ಬಗ್ಗೆಯೂ ಕಥೆಗಳುಂಟು. ಮುಂದೆಯೂ ಮುಧೋಳದ ಘೋರ್ಪಡೆ ದೊರೆಗಳು ಈ ಮುಧೋಳದ ತಳಿ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಈ ಮುಧೋಳ ನಾಯಿಗಳು ಅಪಾರ ಚುರುಕುಮತಿಯವಾಗಿದ್ದು, ತಕ್ಷಣವೇ ಮೇಲೆ ಬೀಳುವ ಗುಣವನ್ನು ಹೊಂದಿವೆ. ನೀಳವಾದ ದೇಹವನ್ನು ಹೊಂದಿದ್ದು, ಪುಟ್ಟ ತಲೆಯಿಂದ ಕೂಡಿದೆ. ಇದರ ಉದ್ದನೆಯ ದೇಹ ಆಕರ್ಷಕ, ಜತೆಗೆ ತೆಳುವಾದ ನೋಟವುಳ್ಳದ್ದು. ಅಷ್ಟೇ ಗಟ್ಟಿಗ, ಹಸುಡು-ಹಲ್ಲುಗಳೋ ಬಲು ಗಟ್ಟಿ, ಬಾಯಿ ಹಾಕಿತೆಂದರೆ ಒಳ್ಳೆಯ ಗರಗಸದಂತೆ ಕತ್ತರಿಸಿದಂತೆ ಕಚ್ಚುತ್ತದೆ. ತಳ್ಳಗೆ ನೀಳಕಾಯವಾದ ತಳಿ ಬುದ್ಧಿವಂತಿಕೆಯ ನೋಟದ ಲಕ್ಷಣಗಳನ್ನು ಹೊಂದಿದೆ. ತೆಳುವಾದ ಅಲ್ಲಾಡುವ ಕಿವಿಗಳು, ದೇಹವನ್ನೇ ಚಾಚಿಕೊಂಡಂತಹ ನೇರವಾದ ಬಾಲ, ಜೋರಾಗಿ ಓಡಲು ಅನುವಾಗುವಂತಹ ಉದ್ದನೆಯ ಮುಂಗಾಲುಗಳಿಂದ ಇಡೀ ದೇಹ ಮಾಟದಿಂದ ಕೂಡಿದ್ದಾಗಿದೆ. ಸ್ನಾಯುಗಳಿಂದ ಬಲಿಷ್ಠವಾದ ಕುತ್ತಿಗೆ ಜಿಗಿತಕ್ಕೆ ಅನುಕೂಲವಾಗುವಂತಿದೆ. ಮುಂಗಾಲುಗಳು ಉದ್ದವಾಗಿರುವುದರಿಂದ ಓಡುವುದಕ್ಕಿಂತ ಹೆಚ್ಚಾಗಿ ಹಾರಿದಂತೆ, -ಹಾಗೇ ತೇಲಿದಂತೆ ರಭಸದಿಂದ ಮುನ್ನುಗ್ಗಬಲ್ಲದು. ಇದರಿಂದ ಓಟದ ಜೂಜಿಗೆ ಮತ್ತು ಬೇಟೆಗೆ ಇದು ಅತ್ಯಂತ ಸೂಕ್ತವಾಗಿದೆ. ಇಡೀ ದೇಹವನ್ನು ಒಪ್ಪವಾಗಿ ಜೋಡಿಸಿಟ್ಟಂತೆ ಮೈಗೆ ಹಚ್ಚಿಕೊಂಡ ಮೈಚರ್ಮ, ನಾಯಿಯನ್ನು ಸದೃಢ ಎನ್ನಿಸಲು ಸಹಾಯಕವಾಗಿವೆ. ಹೆಚ್ಚೂ ಕಡಿಮೆ ಮುಕ್ಕಾಲು ಮೀಟರ್ ಎತ್ತರಕ್ಕೆ ಬೆಳೆಯಬಲ್ಲ ಈ ತಳಿಯ ನಾಯಿಯು ಸಾಕಷ್ಟು ವ್ಯಾಯಾಮವನ್ನು ಬಯಸುತ್ತದೆ. ಸುಮ್ಮನೆ ಕಟ್ಟಿ ಹಾಕಿ ಬೆಳೆಸುವುದಕ್ಕೆ ಇದು ಒಗ್ಗಿಕೊಳ್ಳಲಾರದು. ಏನಿದ್ದರೂ ಓಡಾಡಿಸುತ್ತಾ ಕೆಲಸ ಕೊಡುತ್ತಿರಬೇಕು. ಇದು ಬಹಳ ಒಳ್ಳೆಯ ಜೊತೆಗಾರ. ತಮ್ಮ ಒಡೆಯ/ಒಡತಿಯರಿಗೆ ತುಂಬು ನಿಷ್ಠೆಯ ಪ್ರಾಣಿ. ನುಣುಪಾದ ಮೈಹೊಂದಿರುವ ಆಕರ್ಷಕ ನಾಯಿ ಮುಧೋಳ ಹೌಂಡ್ ಅಥವಾ ಮುಧೋಳ ನಾಯಿ.

ನಾಯಿಗಳು ಸುಮ್ಮನೆ ನಿಧಾನವಾಗಿ ನಡೆದುಹೋಗುತ್ತಿರುವುದನ್ನು ಎಂದಾದರೂ ನೋಡಿದ್ದೀರಾ. ಬಹಳ ಎಂದರೆ ಒಂದಷ್ಟು ದೂರ ಮಾತ್ರವೇ ಹಾಗೆ ಹೋದಾವು. ಮತ್ತೆ ತಕ್ಷಣವೇ ಅದೇನು ಕೆಲಸವಿದೆಯೋ ಎಂಬಂತೆ ಲಗುಬಗೆಯಿಂದ ಕಾಲನ್ನಿಟ್ಟು ಓಡಲು ಆರಂಭಿಸುತ್ತವೆ. ನಡೆಯುವುದೂ ಕೂಡ ಒಂದು ರೀತಿಯಲ್ಲಿ ಓಡಿದಂತೆಯೇ ಇರುತ್ತದೆ. ಏಕೆಂದರೆ ಅವುಗಳ ಪಾದಗಳು ವಿಕಾಸಗೊಂಡಿರುವ ಪರಿಯೇ ಹಾಗೆ. ಒಂದೆಡೆ ಸುಮ್ಮನೆ ನಿಲ್ಲಗೊಡುವುದಿಲ್ಲ, ಕಾಲೂರಿದ ತಕ್ಷಣ ಮೇಲೆತ್ತುವಂತೆ ಅನ್ನಿಸುತ್ತಿರುತ್ತದೆ. ಅದರ ಫಲವಾಗಿ ಅವುಗಳ ನಡಿಗೆಯೇ ಓಡುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ■

ದುರಂತದಲ್ಲಿ ಕೊನೆಯಾದ ಬೇಟೆಯ ಪ್ರಯತ್ನ




ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್
nvasanth1@hotmail.com

ಸುಮಾರು 11 ಗಂಟೆಯಾದಾಗ ಎಲ್ಲಾ ಕಡೆ ಪೂರ್ಣ ಮೌನ ಆವರಿಸಿದ್ದು ನಾನು ಮಲಗಿಕೊಳ್ಳಲು ಸಿದ್ಧನಾಗುತ್ತಿದ್ದೆ. ಆಗ ಯಾರೋ ಏಳುತ್ತಾ ಬೀಳುತ್ತಾ ಓಡಿ ಬರುತ್ತಿರುವ ಸದ್ದು ಕೇಳಿಬಂತು. ಸಂಜೆಯಿಂದ ನನ್ನಲ್ಲಿ ಕಾಡುತ್ತಿದ್ದ ಭಯ ನಿಜವಾಗಿರಬಹುದೇ ಎನ್ನುವ ಆತಂಕದಲ್ಲಿ ನನ್ನ ಗನ್ ಮತ್ತು ಟಾರ್ಚ್‌ನ್ನು ಕೈಗೆತ್ತಿಕೊಂಡು ಹೊರಗೆ ಓಡಿದೆ.

ಓಡಿಬರುತ್ತಿದ್ದ ವ್ಯಕ್ತಿ ಆ ಯುವಕರಲ್ಲಿ ದೊಡ್ಡವನಾದ ಇನ್ಸ್ ಆಗಿದ್ದ. ಆಗಾಗ ಹಿಂದೆ ನೋಡುತ್ತಾ ಓಡಿಬರುತ್ತಿದ್ದ ಅವನು ಬೆವರಿನಿಂದ ತೊಯ್ದು ಹೋಗಿದ್ದ. ಬಟ್ಟೆಯೆಲ್ಲಾ ಗಲೀಜಾಗಿತ್ತು. ಎಡವಿ ಬೀಳುವುದರಲ್ಲಿದ್ದ ಅವನ







ಭುಜವನ್ನು ಹಿಡಿದುಕೊಂಡು ಅವನ ಸಹಚರನ ಬಗೆಗೆ ವಿಚಾರಿಸಿದೆ. ಮಾತನಾಡಲಾಗದಷ್ಟು ಸುಸ್ತಾಗಿದ್ದ ಅವನು ತೊದಲುತ್ತಾ "ಹುಲಿ ಅವನನ್ನು ಹಿಡಿಯಿತು, ಎತ್ತಿಕೊಂಡು ಹೋಯಿತು" ಎಂದು ಹೇಳುತ್ತಾ ದುಃಖವನ್ನು ತಾಳಲಾಗದೆ ಮಗುವಿನಂತೆ ನನ್ನ ಹೆಗಲ ಮೇಲೆ ತಲೆಯಿಟ್ಟು ಜೋರಾಗಿ ಅಳತೊಡಗಿದ.

ನಾನು ಅವನನ್ನು ಬಂಗಲೆಗೆ ಕರೆದುಕೊಂಡು ಹೋಗಿ ಮ್ಯಾಕ್ಬವಿಷ್ ದಂಪತಿಗಳನ್ನು ಎಬ್ಬಿಸಿದೆ. ಭಯದಿಂದ ತೀವ್ರವಾಗಿ ಕಂಪಿಸುತ್ತಿದ್ದ ಅವನಿಗೆ ಸ್ವಲ್ಪ ಹೆಚ್ಚೇ ಬ್ರಾಂಡಿ ಕುಡಿಸಿ ಎರಡು ಕಂಬಳಿಯನ್ನು ಹೊದಿಸಿದೆವು. ಸ್ವಲ್ಪ ಸುಧಾರಿಸಿಕೊಂಡು ಆತ ಹೇಳಿದ ಕಥೆ ಭಯಾನಕವಾಗಿತ್ತು.

ಇನ್ನೇನು ಕತ್ತಲಾಗುತ್ತಿದೆ ಎನ್ನುವಾಗ ಇನ್ಸ್ ದೂರದ ಬೆಟ್ಟದ ಇಳಿಜಾರಿನ ಪೊದೆಗಳಲ್ಲಿ ಯಾವುದೋ ಉದ್ದವಾದ ಕೆಂಚು ಪ್ರಾಣಿ ಚಲಿಸುತ್ತಿದ್ದುದನ್ನು ನೋಡಿದ. ಅವನ ಸಹಚರ ಟಾಡ್ ಕುಳಿತ ಸ್ಥಳದಿಂದ ಇದು ಕಾಣುತ್ತಿರಲಿಲ್ಲ, ಆದರೆ ಅವನಿಗೆ ಈ ಮಾಹಿತಿಯನ್ನು ನೀಡುವ ಸ್ಥಿತಿಯಲ್ಲಿ ಇನ್ಸ್ ಇರಲಿಲ್ಲ, ಸ್ವಲ್ಪ ಸಮಯದ ನಂತರ ಆ ಪ್ರಾಣಿ ಕಣ್ಮರೆಯಾಗಿತ್ತು.

ನಂತರ ಕತ್ತಲು ಆವರಿಸಿ ಸಮಯ ಕಳೆಯುತ್ತಾ ಸುಮಾರು 10 ಗಂಟೆಯಾಯಿತು. ಸುತ್ತಲೂ ನೆರಳು ಆವರಿಸಿಕೊಂಡಿದ್ದರಿಂದ ನಕ್ಷತ್ರಗಳ ಬೆಳಕಿನಲ್ಲಿ ಹತ್ತಿರದ ಪರಿಸರ ಮಾತ್ರ ಕಾಣುತ್ತಿತ್ತು, ಆಗ ಇನ್ಸ್‌ಗೆ ಏನನ್ನೋ ಎಳೆಯುತ್ತಿರುವ ಶಬ್ದ ಕೇಳಿದಂತೆ ಅನ್ನಿಸಿತು. ನಂತರ ಮೂಳೆಗಳನ್ನು ಅಗೆಯುವ ಸದ್ದು ಸ್ಪಷ್ಟವಾಗಿ ಕೇಳಿತು. ಹುಲಿ ತನ್ನ ಬಲಿಯ ಅವಶೇಷಗಳನ್ನು ತಿನ್ನುತ್ತಿದೆ ಎಂದು ಊಹಿಸಿಕೊಂಡ ಇನ್ಸ್ ಹುಲಿಯಿಂದ ತನ್ನಷ್ಟೇ ದೂರದಲ್ಲಿದ್ದ ಟಾಡ್‌ನಿಗೆ ಗುಂಡುಹಾರಿಸುವ ಅವಕಾಶವನ್ನು ಬಿಟ್ಟು ಕಾಯತೊಡಗಿದ.

ಸಾಕಷ್ಟು ಸಮಯವಾದರೂ ಟಾಡ್ ಏಕೆ ಗುಂಡುಹಾರಿಸಲಿಲ್ಲ ಎಂದು ಗೊತ್ತಾಗಲೇ ಇಲ್ಲ, ತನ್ನ ಸಹಚರ ನಿದ್ದೆ ಮಾಡಿರಬಹುದು ಎಂದು ಯೋಚಿಸಿದ ಇನ್ಸ್ ತಾನೇ ಗುಂಡು ಹಾರಿಸಲು ಸಿದ್ಧನಾದ. ಸದ್ದು ಬರುತ್ತಿದ್ದ ದಿಕ್ಕಿನಲ್ಲಿ ಬಂದೂಕನ್ನು ಗುರಿಮಾಡಿ ಟಾರ್ಚ್ ಬೆಳಗಿಸಿದಾಗ ಭಾರೀ ಗಾತ್ರದ ಹುಲಿಯೊಂದು ಎಮ್ಮೆಯ ಶವವನ್ನು ತಿನ್ನುತ್ತಿರುವುದು ಕಂಡಿತು.

ಅದೇ ಕ್ಷಣದಲ್ಲಿ ಟಾಡ್‌ನಿಂದ ಒಂದು ಕರ್ಣಭೇದಕವಾದ ಕೂಗು ಕೇಳಿಬಂತು. ನಂತರ ಒಂದು ಭಯಾನಕ ಘರ್ಜನೆ, ಎಳೆದಾಡಿದ ಸದ್ದು, [illegible] ಕೂಗು ಕೇಳಿಬಂದು ಮೌನ ಆವರಿಸಿತು. ಕೂಡಲೇ ಇನ್ಸ್, ಟಾರ್ಚ್‌ನ ಬೆಳಕನ್ನು ಟಾಡ್ ಕುಳಿತಿದ್ದ ಬಂಡೆಯ ಕಡೆ ತಿರುಗಿಸಿದ. ಆಗ ಹುಲಿ ಪೊದೆಗಳಲ್ಲಿ ಮರೆಯಾಗುತ್ತಿದ್ದುದು ಮಾತ್ರ ಕಾಣಿಸಿತು.

ಆದರೆ ಟಾಡ್‌ನ ಸುಳಿವೇ ಇರಲಿಲ್ಲ, ಸ್ನೇಹಿತನ ಹೆಸರನ್ನು ಕರೆಯುತ್ತಾ ಇನ್ಸ್ ಅವನು ಕುಳಿತಿದ್ದ ಬಂಡೆಯ ಕಡೆ ಓಡಿದ. ಅಲ್ಲಿ ಅವನ ಗನ್, ನೀರಿನ ಬಾಟಲಿ ಮತ್ತು ಅರ್ಧತಿಂದ ಸ್ಯಾಂಡ್‌ವಿಚ್ ಮಾತ್ರ ಇದ್ದವು. ಸ್ನೇಹಿತನನ್ನು ಹುಲಿ ಹೊತ್ತೊಯ್ದಿದೆ ಎಂದು ಅರಿವಾದ ಕೂಡಲೇ ಇನ್ಸ್ ಹುಚ್ಚನಂತೆ ಅವನನ್ನು ಹುಡುಕುತ್ತಾ ಕಾಡಿನಲ್ಲಿ ಓಡತೊಡಗಿದ. ದುಃಖ ಮತ್ತು ಹತಾಶೆಯಲ್ಲಿ ಓಡುತ್ತಾ ಅವನು ಕಾಡಿನಲ್ಲಿ ದಾರಿ ತಪ್ಪಿದ. ಅದೃಷ್ಟವಶಾತ್ ದೋಬಿಗಳು ಉಪಯೋಗಿಸುತ್ತಿದ್ದ ಕಾಲುದಾರಿ ಅವನಿಗೆ ಸಿಕ್ಕಾಗ ಅದೇ ಜಾಡಿನಲ್ಲಿ ಓಡುತ್ತಾ ಬಂಗಲೆಗೆ ಬಂದು ತಲುಪಿದ್ದ.

ನಾವು ಎದುರಿಸಬೇಕಾಗಿರುವುದು ಎರಡು ಹುಲಿಗಳು ಎಂದು ಇನ್ಸ್ ಹೇಳಿದ ಕಥೆಯಿಂದ ನನಗೆ ಖಾತ್ರಿಯಾಯಿತು. ಅವುಗಳಲ್ಲಿ ಒಂದು ಸಾಕುಪ್ರಾಣಿಗಳನ್ನು ಕೊಲ್ಲುವ ಹುಲಿಯಾಗಿದ್ದರೆ ಮತ್ತೊಂದು ಭಯಾನಕ ನರಭಕ್ಷಕನಾಗಿತ್ತು, ಇವುಗಳಲ್ಲಿ ಒಂದು ಗಂಡು ಮತ್ತು ಇನ್ನೊಂದು ಹೆಣ್ಣಾಗಿದ್ದು ಅವು ಸಂಗಾತಿಗಳಾಗಿರುವ ಸಾಧ್ಯತೆಗಳಿದ್ದವು. ಇಂತಹ ವಿಚಿತ್ರ ಜೋಡಿಯನ್ನು ನಾನು ಇಲ್ಲಿಯವರೆಗೆ ಭೇಟಿಯಾಗಿರಲಿಲ್ಲ, ಒಂದೇ ತಾಯಿಯಿಂದ ಜನಿಸಿದ ಎರಡು ಪ್ರೌಢ ಹುಲಿಗಳು ಇವು ಆಗಿರಲೂ ಸಾಧ್ಯವಿತ್ತು, ಸಾಕುಪ್ರಾಣಿಗಳ ಕಳ್ಳನನ್ನು ಇನ್ಸ್ ನೋಡಿದ್ದರೂ ನರಭಕ್ಷಕನನ್ನು ಯಾರೂ ನೋಡಿರಲಿಲ್ಲ.

ಹದಿನೈದು ನಿಮಿಷಗಳಲ್ಲಿ ಊರಿನ ಜನರ ಗುಂಪೊಂದನ್ನು ಒಟ್ಟುಗೂಡಿಸಿ ಟಾಡ್ ಕುಳಿತಿದ್ದ ಬಂಡೆಯ ಕಡೆ ಹೊರಟೆವು. ಅಲ್ಲಿ ಹುಡುಕಾಡಿದಾಗ ಟಾಡ್‌ನ ಒಂದು ಬೂಟು ಬಿದ್ದಿರುವುದು ಕಂಡಿತು. ಅಲ್ಲಿಂದ ಮುಂದೆ ಹುಲಿ ಹತ್ತಿರದ ಗುಡ್ಡದ ಕಡೆ ಹೋಗಿತ್ತು. ಹಾಗೆಯೇ ಮುಂದುವರೆದಾಗ ಹುಲಿ ಟಾಡ್‌ನ ಶವವನ್ನು ನೆಲಕ್ಕೆ ಹಾಕಿರುವುದರ ಸೂಚನೆಗಳು ಕಂಡಿತು. ಆದರೆ ಇನ್ಸ್‌ನ ಕೂಗಾಟವನ್ನು ಕೇಳಿ ಅದು ತಕ್ಷಣ ಮುಂದೆ ಹೋಗಿರಬೇಕು. ರಕ್ತದ ಜಾಡನ್ನು ಹಿಡಿದು ನಾವು ಗುಡ್ಡದ ಬುಡಕ್ಕೆ ಬಂದೆವು.

ಹಾಗೆಯೇ ಎಚ್ಚರಿಕೆಯಿಂದ ಮುಂದುವರಿಯುತ್ತಾ ಬೆಳಗಿನ ಜಾವ 3.30ರ ಹೊತ್ತಿಗೆ ಹುಲಿ ಅರ್ಧ ತಿಂದು ಬಿಟ್ಟು ಹೋಗಿದ್ದ ಶವದ ಬಳಿ ಬಂದೆವು. ಅಲ್ಲಿನ ದೃಶ್ಯ ಭಯಾನಕವಾಗಿತ್ತು. ದುಃಖವನ್ನು ಭರಿಸಿಕೊಳ್ಳಲಾರದ ಇನ್ಸ್ ಜೋರಾಗಿ ಅಳುತ್ತಾ ಎಚ್ಚರ ತಪ್ಪಿದ.

ಮುಂಜಾವಿನ 6 ಗಂಟೆಯ ಹೊತ್ತಿಗೆ ಶವದ ಅವಶೇಷಗಳನ್ನು ಒಟ್ಟುಮಾಡಿಕೊಂಡು ತಂದು ಕಾರಿನಲ್ಲಿ ಹಾಕಿಕೊಂಡು ಚಿತ್ರದುರ್ಗಕ್ಕೆ ಹೊರಟೆವು. ಇಡೀ ದಿನ ಕಾನೂನಿನಡಿ ಅಗತ್ಯವಾದ ಪ್ರಕ್ರಿಯೆಗಳನ್ನು ನಿಭಾಯಿಸುವುದರಲ್ಲಿ ಕಳೆದು ಸಂಜೆ ಆಯಾಸದಿಂದ ಬಂಗಲೆಗೆ ಹಿಂತಿರುಗಿದೆವು. ದುಃಖ ಮತ್ತು ಹತಾಶೆಗಳ ಮಧ್ಯೆಯೂ ನಾವು ಹುಲಿಯ ವಿರುದ್ಧ ಪ್ರತೀಕಾರವನ್ನು ತೆಗೆದುಕೊಳ್ಳಲೇಬೇಕೆಂದು ನಿರ್ಧರಿಸಿದೆವು.

ಕೊಪ್ಪರಿಗೆಯೊಳಗಿನ ಬೇಟೆಗಾರರು!

ಮರುದಿನ ಬೆಳಗ್ಗೆ ಮತ್ತೆ ದುರಂತ ನಡೆದ ಸ್ಥಳಕ್ಕೆ ಭೇಟಿನೀಡಿ ಪುರಾವೆಗಳನ್ನು ಕಲೆಹಾಕತೊಡಗಿದೆವು. ಗಟ್ಟಿಯಾದ ನೆಲದಲ್ಲಿ ಹೆಜ್ಜೆ ಗುರುತುಗಳು ಮೂಡಿರಲಿಲ್ಲ. ಹಾಗಾಗಿ ಹುಲಿಯ ಆಕಾರ, ಲಿಂಗ ಮುಂತಾದವುಗಳನ್ನು ಪತ್ತೆಹಚ್ಚುವುದು ಸಾಧ್ಯವಿರಲಿಲ್ಲ. ಇನ್ಸ್‌ನ ವಿವರಣೆಯನ್ನು ನೋಡಿದರೆ ಸಾಕುಪ್ರಾಣಿಗಳ ಕೊಲೆಗಾರ ಗಂಡು ಎನ್ನಿಸುತ್ತಿತ್ತು, ಹಾಗಾಗಿ ನರಭಕ್ಷಕ ಹೆಣ್ಣಾಗಿರುವ ಸಾಧ್ಯತೆಗಳು ಹೆಚ್ಚಾಗಿದ್ದವು. ಆದರೆ ಇಡೀ ಪ್ರದೇಶದಲ್ಲಿ ಹೆಜ್ಜೆಗುರುತುಗಳು ಎಲ್ಲೂ ಸ್ಪಷ್ಟವಾಗಿ ಮೂಡಿರಲಿಲ್ಲ, ಇತ್ತ ಎಮ್ಮೆಯ ಅವಶೇಷಗಳನ್ನೂ ಹದ್ದುಗಳು ತಿಂದು ಮುಗಿಸಿದ್ದರಿಂದ ನಾವು ನಮ್ಮ ಪ್ರಯತ್ನವನ್ನು ಹೊಸದಾಗಿ ಪ್ರಾರಂಭಿಸಬೇಕಾಗಿತ್ತು.

ಎಲ್ಲವನ್ನೂ ಚರ್ಚಿಸಿದ ಮೇಲೆ ಹೊಸ ಯೋಜನೆಯನ್ನು ರೂಪಿಸಿದೆವು. ದೋಬಿ ಸಾವಿಗೀಡಾಗಿದ್ದ ಸ್ಥಳದ ಹತ್ತಿರ ಮತ್ತೊಂದು ಎಮ್ಮೆಯನ್ನು ಬಲಿಯಾಗಿ ಕಟ್ಟಿ ಮ್ಯಾಕ್ ಅದರ ಹತ್ತಿರ ಕಾಯುವುದು ಮತ್ತು ನಾನು ಟಾಡ್ ಸಾವಿಗೀಡಾದ ಬಂಡೆಯ ಹತ್ತಿರದ ಮತ್ತೊಂದು ಬಂಡೆಯ ಮೇಲೆ ಕುಳಿತಿರುವುದು ನಮ್ಮ ಉದ್ದೇಶವಾಗಿತ್ತು, ಇದರಿಂದ ನರಭಕ್ಷಕ ಈ ಎರಡರಲ್ಲಿ ಯಾವುದೇ ಸ್ಥಳಕ್ಕೆ ಆಗಮಿಸಿದರೂ [illegible]ಗೆ ಬೇಟೆಯಾಡುವುದು ಸಾಧ್ಯವಾಗುತ್ತಿತ್ತು.

ಆದರೆ ಮ್ಯಾಕ್ ಕುಳಿತುಕೊಳ್ಳಬೇಕಾಗಿದ್ದ ಸ್ಥಳದ ಹತ್ತಿರ ಯಾವುದೇ ಮರಗಳಿರಲಿಲ್ಲ, ಹಾಗಾಗಿ ನಾವು ಬೇರೆಯ ಉಪಾಯವನ್ನು ಮಾಡಿದೆವು. ನೆಲದಲ್ಲಿ ಸಾಕಷ್ಟು ದೊಡ್ಡ ಗುಂಡಿಯನ್ನು ತೋಡಿ ಅದರ ಮೇಲೆ ಕಬ್ಬಿನ ಹಾಲಿನಿಂದ ಬೆಲ್ಲವನ್ನು ಮಾಡಲು ಬಳಸುವ ಕೊಪ್ಪರಿಗೆಯನ್ನು ಬೋರಲು ಹಾಕಿದೆವು. ಕೊಪ್ಪರಿಗೆಯನ್ನು ನೆಲದಿಂದ 6 ಇಂಚು ಮೇಲೆ ನಿಲ್ಲುವಂತೆ ಮಾಡಲು ನಾಲ್ಕು ಕಡೆ ಕಲ್ಲುಗಳ ಆಧಾರವನ್ನು ನೀಡಿದೆವು. ಹೀಗೆ ನೆಲ ಮತ್ತು ಕೊಪ್ಪರಿಗೆಯ ಮಧ್ಯದಲ್ಲಿ ಉಂಟಾದ ಸಂದಿಯಿಂದ ಒಳಗೆ ಕುಳಿತವರು ಗುಂಡು ಹಾರಿಸುವುದಕ್ಕೆ ಅವಕಾಶವಾಗುತ್ತಿತ್ತು, ಕೊಪ್ಪರಿಗೆಯ ಹೊರಮುಖಕ್ಕೆ ಟಾರ್ಪಲಿನ್ ಹಾಕಿ, ಮರಳನ್ನು ಹರಡಿ ಮುಳ್ಳಿನ ಗಿಡಗಳನ್ನು ಇಟ್ಟು ದೂರದಿಂದ ನೋಡಿದರೆ ನೆಲದ ಮೇಲಿನ ಸಣ್ಣ ದಿಬ್ಬದಂತೆ ಕಾಣಿಸುವಂತೆ ಮಾಡಿದೆವು.

ಶ್ರೀಮತಿ ಮ್ಯಾಕ್ ತಾನೂ ಕೂಡ ಕೊಪ್ಪರಿಗೆಯ ಒಳಗೆ ಕುಳಿತುಕೊಳ್ಳುವೆನೆಂದು ಹಟ ಹಿಡಿದಳು. ಅವಳನ್ನು ದೂರ ಇಡುವ ನಮ್ಮ ಪ್ರಯತ್ನ ವಿಫಲವಾದಾಗ ನಾವು ಇಬ್ಬರನ್ನೂ ಕೊಪ್ಪರಿಗೆಯ ಒಳಗೆ ಕೂರಿಸಿ ಹೊರಗಿನಿಂದ ಅದನ್ನು ಮೊದಲಿನ ರೂಪಕ್ಕೆ ತಂದೆವು. ಕೊಪ್ಪರಿಗೆಯ ಒಳಗಿನ ಸ್ಥಳ ಪೂರ್ಣ ಸುರಕ್ಷಿತವಾಗಿತ್ತು, ಬಲಿಯನ್ನು ಅದರ ಜಾಗದಲ್ಲಿ ಕಟ್ಟಿದೆವು. ಮ್ಯಾಕ್ ಅಗತ್ಯವಿದ್ದಾಗ ಮೂರು ಶಿಳ್ಳೆಗಳ ಮೂಲಕ ನನಗೆ ಸೂಚನೆ ನೀಡಬೇಕೆಂದು ನಿರ್ಧಾರವಾಯಿತು.

ಸುಮಾರು 5 ಗಂಟೆಯ ಹೊತ್ತಿಗೆ ನಾನು ಬಂಡೆಯ ಮೇಲಿನ ನನ್ನ ಸ್ಥಳದಲ್ಲಿ ಕುಳಿತೆ. ಹಗಲಿಡೀ ಸೂರ್ಯನ ಶಾಖಕ್ಕೆ ಮೈಚಾಚಿದ್ದ ಬಂಡೆ ಬಹಳ ಬಿಸಿಯಾಗಿತ್ತು. ಗಂಟೆಗಳು ಕಳೆದಂತೆ ಇಡೀ ಕಾಡು ಸಂಪೂರ್ಣ ಮೌನವಾಗಿತ್ತು, ನಕ್ಷತ್ರಗಳು ಬೆಳಗುತ್ತಾ ಬೆಳಕನ್ನು ಹರಿಸಿದ್ದವು. ನಾನು ದುರಂತ ಸಾವಿಗೀಡಾದ ಬಡಪಾಯಿ ಟಾಡ್‌ನ ಬಗೆಗೆ ಯೋಚಿಸುತ್ತಿದ್ದೆ.

ಮಧ್ಯರಾತ್ರಿಯ ನಂತರ ಒಮ್ಮೆಲೆ ನನಗೆ ಮ್ಯಾಕ್‌ನಿಂದ ಶಿಳ್ಳೆಯ ಕರೆ ಬಂದಿತು. ಮ್ಯಾಕ್ ದಂಪತಿಗಳಿಗೆ ಏನಾಗಿರಬಹುದೆಂದು ಯೋಚಿಸುತ್ತಾ ಬಂಡೆಯಿಂದ ಇಳಿದು ಟಾರ್ಚ್‌ನ್ನು ಬೆಳಗಿಸಿ ಎಚ್ಚರಿಕೆಯಿಂದ ಅವರಿದ್ದ ಸ್ಥಳದ ಕಡೆ ಹೊರಟೆ. ಕೊಪ್ಪರಿಗೆಯನ್ನು ಉರುಳಿಸಿ ಹೊರಬಂದಿದ್ದ ಅವರು ಇನ್ನೂ ಜೀವಂತವಿದ್ದ ಎಮ್ಮೆಯ ಬಳಿ ನಿಂತಿದ್ದರು. ಅವರು ನನಗೆ ಹೇಳಿದ್ದು ಇಷ...

ಕೊಪ್ಪರಿಗೆಯ ಕೆಳಗಿದ್ದ ಗುಂಡಿಯಲ್ಲಿ ಮ್ಯಾಕ್ ಬಲಿಗೆ ಮುಖಮಾ... ಕುಳಿತಿದ್ದರೆ ಶ್ರೀಮತಿ ಮ್ಯಾಕ್ ಅವರಿಗೆ ಬೆನ್ನುಮಾಡಿ ಕುಳಿತಿದ್ದರು. ಮಧ್ಯರಾತ್ರಿ... ನಂತರ ಶ್ರೀಮತಿ ಮ್ಯಾಕ್‌ಗೆ ಸಣ್ಣದಾದ ನರಳಿಕೆಯ ಮತ್ತು ಉಸಿರಾಟ... ಸದ್ದು ಕೇಳಿತು. ಸುತ್ತಲೂ ಸೂಕ್ಷ್ಮವಾಗಿ ನೋಡಿದಾಗ ಅವರಿಗೆ ಹತ್ತಿರದ... ಒಂದು ಸಣ್ಣ ಬಂಡೆಯಂತಹ ವಸ್ತು ಕಂಡಿತು. ತಾವು ಸಂಜೆ ಒಳ... ಕುಳಿತುಕೊಳ್ಳುವಾಗ ಅಂತಹ ವಸ್ತು ಅಲ್ಲಿ ಇರದಿದ್ದುದನ್ನು ನೆನಪಿಸಿಕೊಳ್ಳ... ಶ್ರೀಮತಿ ಮ್ಯಾಕ್ ಇನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದೊಂದು ಕಾಲುಚಾ... ಮಲಗಿದ್ದ ಹುಲಿಯಾಗಿತ್ತು! ಭಯಾಶ್ಚರ್ಯಗಳಿಂದ ಅವರು ತಮ್ಮ ಪತಿ... ಗಮನವನ್ನು ಸೆಳೆಯಲು ಹಿಂದಿನಿಂದ ಪಕ್ಕೆಗೆ ಚುಚ್ಚತೊಡಗಿದರು. ಗುಂ... ಇಬ್ಬರ ಚಲನೆಗೆ ಚಿಕ್ಕದಾಗಿತ್ತು, ಹಾಗಾಗಿ ಮ್ಯಾಕ್ ತನ್ನ ಬಂದೂಕನ್ನು ಎತ್ತಿಹಿಡಿ... ನಿಧಾನವಾಗಿ ತಿರುಗುವಾಗ ಅದರ ನಳಿಕೆ ಕೊಪ್ಪರಿಗೆಗೆ ಬಡಿದು ಲೋಹ... ಸದ್ದು ಮಾಡಿತು. ತಕ್ಷಣ ಹುಲಿ "ವೂಫ್" ಎನ್ನುವ ಕೂಗಿನೊಂದಿಗೆ ಜಿಗಿ... ಮಾಯವಾಗಿತ್ತು.

ಹುಲಿಗಳೆಷ್ಟು-ಎರಡೋ, ಮೂರೋ?

ಇನ್ನು ಅಲ್ಲಿಯೇ ಕಾಯುವುದು ವ್ಯರ್ಥವೆಂದು ನಿರ್ಧರಿಸಿದ ನಾ... ಬಲಿಯನ್ನು ಅಲ್ಲಿಯೇ ಬಿಟ್ಟು ಬಂಗಲೆಗೆ ಹಿಂತಿರುಗಿದೆವು. ಮರುದಿನ ಬೆ... ಹುಲಿ ಆ ಬಲಿಯನ್ನು ಕೊಂದು ಸಂಪೂರ್ಣವಾಗಿ ತಿಂದು ಮುಗಿ... ಎನ್ನುವ ಆಶ್ಚರ್ಯಕರ ಸುದ್ದಿ ಬಂದಿತು. ಸೂಕ್ಷ್ಮವಾಗಿ ಪರೀಕ್ಷಿಸಿದಾಗ ಎರ... ಹುಲಿಗಳು ಸೇರಿ ಎಮ್ಮೆಯನ್ನು ತಿಂದು ಮುಗಿಸಿದ್ದವು.

ಈ ಬೆಳವಣಿಗೆಯಿಂದ ನನಗೆ ಒಂದು ವಿಚಾರ ಹೊಳೆಯಿತು. ನರಭ... ಹುಲಿ ಸಾಕುಪ್ರಾಣಿಗಳ ಕೊಲೆಗಡುಕನೂ ಹೌದು. ಅಥವಾ ಇಲ್ಲಿ ಎರ... ಸಾಕುಪ್ರಾಣಿ ಭಕ್ಷಕಗಳು ಮತ್ತು ಒಂದು ನರಭಕ್ಷಕ, ಹೀಗೆ ಮೂ... ಹುಲಿಗಳಿರಬೇಕು.

ಅವತ್ತಿನ ರಾತ್ರಿ ಕೂಡ ನಾವು ಹಳೇ ಯೋಜನೆಯನ್ನೇ ಮುಂದುವರಿ... ನಿರ್ಧರಿಸಿದೆವು. ಬಲಿಯನ್ನು ಅದೇ ಕಾಲು ಹಾದಿಯಲ್ಲಿ ಕಾಲು ಮೈ... ಮುಂದೆ ಕಟ್ಟಿದೆವು. ಈ ಬಾರಿ ಕೊಪ್ಪರಿಗೆಯ ಕೆಳಗಿನ ಗುಂಡಿಯನ್ನು ದೊಡ್ಡ... ಮಾಡಿಕೊಂಡು ನಾನು ಮತ್ತು ಮ್ಯಾಕ್ ಕುಳಿತುಕೊಳ್ಳಲು ನಿರ್ಧರಿಸಿದ... ಮ್ಯಾಕ್ ಬಲಿಗೆ ಮುಖಮಾಡಿ ಕುಳಿತಿದ್ದ. ಹೀಗೆ ಮೂರು ರಾತ್ರಿಗ... ನಿದ್ದೆಯಿಲ್ಲದೆ ಕಳೆದರೂ ಹುಲಿಗಳು ನಮ್ಮ ಕೈಗೆ ಸಿಗಲಿಲ್ಲ.

(ಮುಂದುವರೆಯುವು...

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಶಿವನ ವಂಶಜ ಪ್ರಾಗಮೂಲಜಿ

ಟಿಪ್ಪೂ ಸುಲ್ತಾನನ ವಂಶಸ್ಥರೆಂದು ಹೇಳಿಕೊಳ್ಳುವ ಕುಟುಂಬವನ್ನು ಈಗ ನೋಡಿದ್ದೇವೆ. ಹೈದರಾಬಾದಿನ ನವಾಬನ ಸಾಲವನ್ನು ಅವನ ವಂಶಸ್ಥರು ತೀರಿಸಬೇಕು ಎಂದು ಬ್ಯಾಂಕಿನವರು ಹುಡುಕಿಕೊಂಡು ಹೋದಾಗ ನವಾಬನ ವಂಶದ ಕುಡಿಯೊಂದು ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಿಕೊಂಡಿದ್ದು, ಕೋಟ್ಯಾಂತರ ರೂಪಾಯಿಗಳ ಸಾಲವನ್ನು ತೀರಿಸೆಂದು ಕೇಳಿದಾಗ ಆತ ತನ್ನ ಬಡತನದ ನಗೆಯೊಂದನ್ನು ಪಾವತಿ ಮಾಡಿ ಬ್ಯಾಂಕಿನವರನ್ನು ಹಿಂದಕ್ಕೆ ಕಳುಹಿಸಿದ ಕಥೆಯೂ ನಡೆದಿದೆ. ಇವೆಲ್ಲವೂ ಆಶ್ಚರ್ಯವೆಂದೆನಿಸೊಲ್ಲ. ಆದರೆ ನಾನು ಸಣ್ಣವನಿರುವಾಗ ಒಂದು ಹೆಣ್ಣು ಮಗು ತಾನು ಹಿಂದಿನ ಜನ್ಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮಳಾಗಿದ್ದೆ ಎಂದು ಘೋಷಿಸಿಕೊಂಡಾಗ ಅಪಾರ ಜನಸಂಖ್ಯೆಯು ಅವಳನ್ನು ಆರಾಧಿಸುತ್ತಾ, ಕೊಂಡಾಡುತ್ತಾ, ತಂಡೋಪತಂಡಗಳಲ್ಲಿ ಸಂದರ್ಶಿಸುತ್ತಾ ಅನೇಕ ದಿನಗಳ ಕಾಲ ಅವಳನ್ನು ಸುದ್ದಿಯಲ್ಲಿಟ್ಟಿದ್ದರು. ಬೆಳಗಾವಿಯ ಹಳ್ಳಿಯೊಂದರಲ್ಲಿ ಈ ಪಾಟಿ ಕಾರ್ಯತಂತ್ರ ಮಾಡಿದ್ದ ಜಕೆಯ ಮಂದಿ ಅಷ್ಟೇನೂ ಚಾಲೂಗಳಾಗದೇ ಮುಗ್ಧರೂ ಮತ್ತು ಮೂರ್ಖರೂ ಆಗಿದ್ದರಿಂದ ಆ ಸುದ್ದಿ ಅಂತೆಯೇ ಬಿದ್ದು ಹೋಯಿತು. ಅಂತೆಯೇ ಸತ್ತೂ ಹೋಯಿತು. ಇದೇ ರೀತಿ ನಾನು ಸಣ್ಣವನಿರುವಾಗ ತನ್ನದು ಗಾಂಧೀಜಿಯ ಮರುಜನ್ಮ ಎಂದು ಯಾರೋ ಘೋಷಿಸಿಕೊಂಡ ಸುದ್ದಿಯೂ ನನ್ನ ಸ್ಮೃತಿಪಟಲದಲ್ಲಿ ಮಸುಕುಮಸುಕಾಗಿದೆ.

ಶಿವನ ವಂಶಜ

"ಪ್ರೇಮ ಸ್ವರೂಪಲಾರಾ" ಎಂದು ತನ್ನ ಭಕ್ತರನ್ನು ಉದ್ದೇಶಿಸಿ ಮಾತಾಡುತ್ತಾ, ಗಾಳಿಯಲ್ಲಿ ಏನನ್ನೋ ಬರೆಯುವಂತೆ ಕೈಯಾಡಿಸುತ್ತಾ ಗುಂಗುರು ಕೂದಲಿನ, ಕೇಸರಿ ನಿಲುವಂಗಿಯ ಸತ್ಯ ಸಾಯಿಬಾಬಾ ತಾನು ಶಿರಡಿ ಬಾಬಾನ ಪುನರಾವತಾರ ಎಂದು ಘೋಷಿಸಿಕೊಂಡಿದ್ದರು. ವಿಷ್ಣು ಕೃಷ್ಣನಾಗಿ ಹುಟ್ಟಬಹುದೆಂದರೆ, ಕಿತ್ತೂರು ಚೆನ್ನಮ್ಮ ಆ ಹಳ್ಳಿಯ ಹುಡುಗಿಯಾಗಿಯೂ ಹುಟ್ಟಬಹುದು, ಶಿರಡಿ ಬಾಬಾ ಸತ್ಯ ಸಾಯಿಬಾಬಾ ಆಗಿಯೂ ಹುಟ್ಟಬಹುದು.

ಅದೇರೀತಿ ಶಿವನ ಅವತಾರಗಳ ಕಥೆಗಳೂ ನಮ್ಮ ಸಂಸ್ಕೃತಿಯಲ್ಲಿ ಹೇರಳವಾಗಿ ದೊರಕುತ್ತವೆ. ಆದರೆ, ಅವುಗಳನ್ನು ನಾವು ಶಿವ ಆಂಶಿಕ ರೂಪಗಳೆಂದು ಕರೆಯುವೆವಾದರೂ ನೇರವಾಗಿ ಆ ದೇವರ ವಂಶದವರೆಂದು ಹೇಳಿರುವುದನ್ನು ನಾವು ಕೇಳಿಲ್ಲ. ಆದರೆ, ಭರತ್ ದೇಸಾಯಿ ಟೈಮ್ಸ್ ಆಫ್ ಇಂಡಿಯಾದಲ್ಲಿ ಮಾರ್ಚ್ 9, 2005ರಲ್ಲಿ ಬರೆದ ಸುದ್ದಿಯ ಕನ್ನಡಾನುವಾದ ಓದಿ.

ಅಹಮದಾಬಾದ್: ಶಿವರಾತ್ರಿಯಂದು ಶಿವನ ಜೊತೆ ಸಂಭಾಷಣೆ ಮಾಡಲು ಸಾಧ್ಯವಾಗದಿದ್ದರೇನಂತೆ ಮನಸ್ಸು ಮಾಡಿದರೆ ಶಿವನ ವಂಶಿಕರ ಜೊತೆ ಖಂಡಿತ ಮಾತನಾಡಬಹುದು. ವಂಶಿಕರು? ನಿಜ, ಪ್ರಾಗಮೂಲಜಿ ತನ್ನ ಕುರಿತು ಹಾಗೆಯೇ ಪ್ರತಿಪಾದಿಸುತ್ತಾರೆ. ಇದನ್ನು ಪ್ರಶ್ನಿಸುವುದನ್ನು ಅವರು ಇಷ್ಟ ಪಡುವುದಿಲ್ಲ.

ಕಛ್ ಪ್ರದೇಶದ ಮಹಾರಾಜರಾಗಿದ್ದ ಪ್ರಾಗಮೂಲಜಿ ಇಂದಿಗೂ ಸ್ವತಂತ್ರ ರಾಜ್ಯದ ಸ್ಥಾನಮಾನವು ಬೇಕೆಂದು ಕನಸು ಕಾಣುತ್ತಿದ್ದಾರೆ. ಭುಜ್ ಪ್ರದೇಶದಲ್ಲಿರುವ ರಣಜಿತ್ ವಿಲಾಸ ಮತ್ತು ಮಾಂಡವಿಯ ವಿಜಯ ವಿಲಾಸ ಅರಮನೆಯಿಂದ ಈ ಕರೆ ಕೊಡುತ್ತಾರೆ.

ಪ್ರಾಗಮೂಲಜಿ, 69 (ಈಗ 2014ಕ್ಕೆ 78 ವರ್ಷಗಳು) ವರ್ಷ ವಯಸ್ಸಿನವರಾಗಿದ್ದು, ಶಿವನ ವಂಶಜರೆಂದು, 182ನೆಯ ಸಂತತಿ ಎಂದು ನಂಬಿದ್ದಾರೆ. ಶಿವ ಮತ್ತು ಪಾರ್ವತಿಯರ ಇಬ್ಬರು ಮಕ್ಕಳಾದ ಗಣೇಶನಿಂದ ಬಂದ ಸಂತತಿಯೋ, ಷಣ್ಮುಖನಿಂದ ಬಂದ ಸಂತತಿಯೋ ಎಂಬ ಬಗ್ಗೆ ಖಚಿತ ಅಭಿಪ್ರಾಯ ಹೊಂದಿಲ್ಲ. ಅವರು ಹೇಳುತ್ತಾರೆ

"ತಮಗಿಂತ ಹಿಂದಿನ 54ನೆಯ ತಲೆಮಾರಿನವರು ಇರುವಾಗ ಶ್ರೀಕೃಷ್ಣ ಅವತಾರ ಈ ಭೂಮಿ ಮೇಲಾಯಿತು. ನಿಜ, ಶಿವ ಮತ್ತು ನಂತರ ಬಂದ ಶ್ರೀಕೃಷ್ಣ ನಮ್ಮ ಪೂರ್ವಜರು ಎಂದು ಗೊತ್ತಿದ್ದರೂ ದುರ್ದೈವದಿಂದ ಇದನ್ನು ಸಾಧಿಸಲು ನನ್ನ ಬಳಿ ಪುರಾವೆಗಳಿಲ್ಲ, ನಮ್ಮ ಅರಮನೆಯಲ್ಲಿ ಮೊದಲು ದಾಖಲೆಗಳು ಇದ್ದಿರಬಹುದು. ಆದರೆ ಭೂಕಂಪದಲ್ಲಿ ಎಲ್ಲವೂ ನಾಶವಾಗಿವೆ. ಶಿವ ಮತ್ತು ಕೃಷ್ಣರಿಗೆ ಹೋಲಿಸಿದ್ದಲ್ಲಿ ನಾನು ಬಹಳ ಸಣ್ಣವನು."

ಶಿವರಾತ್ರಿಯ ದಿವಸ ಪ್ರಾಗಮೂಲಜಿ ಶಿವ ದೇವಾಲಯದ ದರ್ಶನಕ್ಕೆ ಹೋಗುತ್ತಾರೆ. ಅಲ್ಲಿಂದ 25 ಕಿ.ಮೀ. ದೂರದಲ್ಲಿರುವ ಪಶ್ಚಿಮೇಶ್ವರ ಮಹಾದೇವ ದೇವಾಲಯಕ್ಕೆ ಹೋಗುತ್ತಾರೆ. ಅದು ದಟ್ಟವಾದ ಕಾಡಿನಲ್ಲಿದ್ದು, ಹೆಚ್ಚಿನ ಜನಸಂದಣಿಯನ್ನು ಹೊಂದಿರುವುದಿಲ್ಲ. ಅವರು ಮುಂದುವರಿದು ಹೇಳುತ್ತಾರೆ, "ಇದು ಪಾರ್ವತಿಯ ಪ್ರದೇಶ. ದಕ್ಷ ರಾಜನು ವಾಸಿಸುತ್ತಿದ್ದ ಸ್ಥಳ. ಪಾರ್ವತಿಯ ತಂದೆ ಆತ. ಶಿವರಾತ್ರಿಯಂದು ಅವರ ವಿವಾಹವಾಯಿತು. ದಕ್ಷಬ್ರಹ್ಮನ ಮಗಳು ದಾಕ್ಷಾಯಣಿ. ಪಾರ್ವತಿ ಪರ್ವತರಾಜ (ಗಿರಿಜನರು, ಬುಡಕಟ್ಟು ಜನಾಂಗ)ನ ಮಗಳು. ಪರ್ವತರಾಜ ಸ್ವಯಂ ಇಷ್ಟದಿಂದ ಮಗಳನ್ನು ಮದುವೆ ಮಾಡಿಕೊಡುತ್ತಾರೆ. ದಕ್ಷಬ್ರಹ್ಮನು ಮಗಳನ್ನು ಶಿವನಿಗೆ ಕೊಡಲು ಇಷ್ಟಪಡುವುದಿಲ್ಲ, ಆಕೆಯೇ ಸ್ವಯಂ ಪ್ರೀತಿಯಿಂದ ಶಿವನನ್ನು ವಿವಾಹ ಆದುದ್ದಕ್ಕೆ ತಂದೆ ತಾಯಿ ಅವಳನ್ನು ತಿರಸ್ಕಾರದಿಂದ ಕಾಣುತ್ತಾರೆ. ಯಾಗಕ್ಕೆ ಬಂದ ಮಗಳನ್ನು ಅವಮಾನಿಸಿದಾಗ ಆಕೆ ಅಗ್ನಿಕುಂಡಕ್ಕೆ ಹಾರುತ್ತಾಳೆ. ನಂತರ ಪಾರ್ವತಿಯನ್ನು ಶಿವ ಮದುವೆಯಾಗುತ್ತಾನೆ."

- ಇದು ಪತ್ರಿಕಾ ವರದಿ

ಇದು ನಮ್ಮ ದೇಶದಲ್ಲಿ ಮಾತ್ರ ಕಾಣುವಂತಹದ್ದು ಎಂದು ನನ್ನ ಗ್ರಹಿಕೆ.

ಪುರಾಣೇತಿಹಾಸ

ಇತಿಹಾಸವನ್ನೂ ಮತ್ತು ಪುರಾಣವನ್ನೂ ಒಟ್ಟಾಗಿ ವಾಸ್ತವದಲ್ಲಿ ನಾನು ಇರುವಷ್ಟೇ ಅವೂ ಸತ್ಯವಾದವು ಎಂದು ಹೇಳುವ ಪರಿಗೆ ನಾನು ಈಗ ದಂಗಾಗುವುದಿಲ್ಲ, ಅವುಗಳನ್ನು ಪ್ರತ್ಯೇಕಿಸಿ ನೋಡುವ ಕ್ರಮವೊಂದಿದೆ ಎಂದು ತಿಳಿಯುವ ಮುನ್ನವೇ, ಬಾಲ್ಯದಲ್ಲೇ ಪುರಾಣೇತಿಹಾಸದ ಒಟ್ಟು ಪರಿಚಯವಾಗಿರುವುದರಿಂದ ದಂಗು ಬಡಿಸಿಕೊಳ್ಳುವ ಪ್ರಮೇಯವೇ ಇಲ್ಲ.

ಪೌರಾಣಿಕದ ಶಿವನಾಗಲಿ, ವೇದಗಳ ಕಾಲದ ರುದ್ರನಾಗಲಿ ಪ್ರಾಗಮೂಲಜಿಯ ಅಂದಾಜಿನ ಕಾಲಕ್ಕೆ ಹೊಂದಿಕೆಯಾಗುವುದಿಲ್ಲ, ನಮ್ಮ ದೇಶದಲ್ಲಿ ಇತಿಹಾಸವೂ ನಂಬುಗೆಯ ಮೇಲೆಯೇ ಆಧಾರಿತವಾಗಿರುವಷ್ಟರ ಮಟ್ಟಿಗೆ ಗೊಂದಲಮಯವೂ, ಅಯೋಮಯವೂ ಆಗಿರುವುದರಿಂದ ಯಾರು ಏನನ್ನೇ ಹೇಳಿದರೂ ಆತನಿಗಿಷ್ಟ ಬಂದರೆ ನಂಬ ಬಹುದು, ಇಷ್ಟವಿಲ್ಲದಿದ್ದರೆ ಇಲ್ಲ ಎನ್ನುವಷ್ಟರಮಟ್ಟಿಗೆ ಅತಂತ್ರ ಸ್ಥಿತಿಯಲ್ಲಿಯೇ ಬಹುಪಾಲು ಐತಿಹಾಸಿಕ ದಾಖಲೆಗಳಿವೆ.

ಪ್ರಾಗಮೂಲಜಿಯ ಘೋಷಣೆಯಲ್ಲಿ ಏನೂ ಹುರುಳಿಲ್ಲ, ಯಾರೇನೂ ನಂಬಿದರೂ ನಂಬದಿದ್ದರೂ ಆತನಿಗೆ ಏನೂ ಆಗಬೇಕಿಲ್ಲ, ಆತನೇ ಈ ವಿಷಯವನ್ನು ಪ್ರಶ್ನಾತೀತವನ್ನಾಗಿ ಮಾಡಿಬಿಟ್ಟಿದ್ದಾನೆ.

ಸತ್ಯನಾರಾಯಣ ರಾಜು ಸತ್ಯ ಸಾಯಿಬಾಬಾ ಆದದ್ದು

ಸತ್ಯ ಸಾಯಿಬಾಬಾ ತಾನು ಸಣ್ಣವನಿರುವಾಗ ತನ್ನ ಪುಟ್ಟ ಹಳ್ಳಿಯಾದ ಪುಟ್ಟಪರ್ತಿಯಲ್ಲಿ ತನ್ನ ಸ್ವಾಮಿತ್ವವನ್ನು ಒಂದು ಸಣ್ಣ ಪ್ರಮಾಣದಲ್ಲಿ ಸ್ಥಾಪಿಸಿಕೊಂಡು, ಕೊಂಚಮಟ್ಟಿಗೆ ಅನುಕೂಲಕರವಾದ ಜೀವನವನ್ನು ನಡೆಸಲು ಯತ್ನಿಸಿದ್ದವರು. ಅದಕ್ಕಾಗಿ ಪ್ರೇಕ್ಷಕರನ್ನಾಗಿ ಮತ್ತು ಶ್ರೋತೃಗಳನ್ನಾಗಿ ಆರಿಸಿಕೊಂಡಿದ್ದು ಮುಗ್ಧ ಮತ್ತು ಸರಳವಾದ ಹಳ್ಳಿಯ ಹೆಂಗಸರನ್ನು. ಅವರ ನಡುವೆ ಅವರಿಗಿಂತ ಹೆಚ್ಚು ತಿಳಿದಿರುವ ವಿಷಯಗಳನ್ನು ಆಡುತ್ತಾ, ಅವರಿಗೆ ಭಯ ಮತ್ತು ಆಸೆಗಳಿರುವ ವಿಷಯಗಳ ಬಗ್ಗೆ ದೇವರ ವಿಚಾರಗಳನ್ನೂ ಸೇರಿಸುತ್ತಾ, ಅವರಲ್ಲಿ ಏನೋ ಒಂದು ಬಗೆಯ ಸಾಂತ್ವನ, ಸಮಾಧಾನ ಮತ್ತು ಭರವಸೆಗಳನ್ನು ಉಂಟುಮಾಡುತ್ತಾ, ಅವರ ನಂಬುಗೆಯನ್ನು ಬಲಗೊಳಿಸಲು ಸತ್ಯನಾರಾಯಣ ರಾಜು ಎಂಬ ಆ ಹುಡುಗ ತಾನು ಶಿರಡಿ ಸಾಯಿಬಾಬಾನ ಅವತಾರವೆಂದು ಸುಮ್ಮನೆ ರೀಲು ಬಿಟ್ಟಿದ್ದಾನೆ. ಆ ಪಾಪದವುಗಳಾದ ಹೆಂಗಸರು ಅದನ್ನು ನಂಬಿಕೊಂಡು ನಮ್ಮ ಭಾರತೀಯ ಮಾನದಂಡದ ರೀತಿಯಾದ ಪವಾಡಗಳಿಂದಲೂ ನಂಬಲು ಇಚ್ಛಿಸಿದ್ದರು. ಭಗವಾನ್ ಬಾಬಾ ಅವರ ಆ ಇಚ್ಛೆಯನ್ನೂ ಪೂರೈಸಿದ್ದಾರೆ. ಮಕ್ಕಳನ್ನು ಆಕರ್ಷಿಸಲು ಮಿಠಾಯಿಗಳನ್ನು ಕೊಡುವಂತೆ, ಮಹಿಳಾ ಭಕ್ತ ಮಂಡಲಿಯನ್ನು ಆಕರ್ಷಿಸಲು ಸಣ್ಣ ಪುಟ್ಟ ಜಾದುಗಳನ್ನು ಮಾಡುತ್ತಾ ಅವರ ನಂಬುಗೆಯನ್ನು ಗಟ್ಟಿಗೊಳಿಸಿದ್ದಾರೆ. ಸಲಿಂಗ ಕಾಮದ ಬಗ್ಗೆ ಒಲವಿದ್ದಿರಬಹುದಾದ ಸತ್ಯ ಸಾಯಿಬಾಬಾನಿಂದಾಗಿ ಯಾವ ಮಹಿಳೆಗೂ ಯಾವ ಲೈಂಗಿಕ ಕಿರುಕುಳವೂ ಆಗದೇ ಇದ್ದುದರಿಂದ ಮಹಿಳಾ ಭಕ್ತ ಮಂಡಲಿಯಲ್ಲಿ ಏನೂ ಪ್ರಮಾದಗಳು ಜರುಗಲಿಲ್ಲ. ಇಷ್ಟೇ ಆಗಿದ್ದರೆ ಏನೂ ಆಗುತ್ತಿರಲಿಲ್ಲ. ಬೆಳಗಾವಿಯ ಹಳ್ಳಿಯ ಹೆಣ್ಣೊಬ್ಬಳು ತಾನು ಕಿತ್ತೂರು ಚೆನ್ನಮ್ಮನ ಅವತಾರವೆಂದು ಹೇಳಿ ನಂತರ ಸತ್ತ ಸುದ್ದಿಯಾಗಬಹುದಾಗಿತ್ತು. ಆದರೆ, ನಮ್ಮ ಸತ್ಯನ ವಿಷಯದಲ್ಲಿ ಹಾಗಾಗಲಿಲ್ಲ.

ಮಹಿಳಾ ಭಕ್ತ ಮಂಡಲಿಯ ರಚನೆಯಾದ ಮೇಲೆ ಯಾವಾಗಲೂ, ತಡವಾಗಿಯಾದರೂ ಅವರವರ ಗಂಡಂದಿರು ಹಿಂಬಾಲಿಸುತ್ತಾರೆ. ಹಾಗೆ ಬರದೇ ವಿಧಿಯೇ ಇರುವುದಿಲ್ಲ. ಮನೆಯಲ್ಲಿ ಆ ಮಹಿಳೆಯರ ಒತ್ತಾಯಕ್ಕಾದರೂ, ಆ ಹೆಂಗಸರ ಸಮಾಧಾನಕ್ಕಾದರೂ ಒಂದಲ್ಲ ಒಂದು ದಿನ ಅವರ ಆರಾಧನಾ ಮೂರ್ತಿಯ ಕಡೆಗೆ ಬರುತ್ತಾರೆ. ಹಾಗೆ ಬಂದಾಗ ಸೌಜನ್ಯಕ್ಕಾದರೂ ಬಾಗಿ ಏಳುವ ಕೆಲಸಗಳು ನಡೆಯುತ್ತವೆ. ಅದೇ ರೀತಿಯಲ್ಲಿ ತಮ್ಮ ಹೆಂಡತಿಯ ಆರಾಧ್ಯರಿಗೆ ಏನಾದರೂ ಕೆಲಸ ಮಾಡಿಸಿಕೊಡುವ ಪ್ರಮೇಯವು ಒದಗಿದಾಗ ಅವರು ಮಾಡೇ ತೀರುತ್ತಾರೆ.

ಯಾವುದೇ ಯಶಸ್ವೀ ಸ್ವಾಮೀಜಿಯ ಅಥವಾ ದೇವಮಾನವನ ಹಿಂದೆ ಮಹಿಳಾ ಭಕ್ತ ಮಂಡಲಿ ಇದ್ದೇ ಇರುತ್ತದೆ. ಹೆಂಗಸರೇ ಮೊದಲ ಭಕ್ತರೂ ಕೂಡ. ತಮ್ಮ ಸಂತಾನಕ್ಕೆ, ಪತಿದೇವರಿಗೆ, ಮನೆಗೆ, ತವರುಮನೆಗೆ, ಮಕ್ಕಳ ಮದುವೆಗೆ, ಮನೆಯ ತಾಪತ್ರಯ ನಿವಾರಣೆಗೆ ಎಂದು ಯಾವಾಗಲೂ ತಮ್ಮ ಬದುಕನ್ನು ಮತ್ತು ಆಲೋಚನೆಗಳನ್ನು ಸದಾ ಮುಡಿಪಿಡುವ ಅವರುಗಳಿಗೆ ಯಾವ ಕಡೆಯಿಂದಾದರೂ ಒಳ್ಳೆಯದಾಗಲಿ ಎಂಬ ಆಸೆ.

ತನ್ನೂರಿನಲ್ಲಿ ಸ್ವಲ್ಪಮಟ್ಟಿಗೆ ಏನೋ ಮಾಡಿಕೊಂಡಿದ್ದು ಬದುಕಬೇಕೆಂದಿದ್ದ ಸತ್ಯನಿಗೆ ಆಶಯಕ್ಕೆ ಮೀರಿ, ಅಗತ್ಯಕ್ಕಿಂತ ಹೆಚ್ಚಾದ ಪ್ರಚಾರ ಮತ್ತು ಸಂಪರ್ಕಗಳು ಸಿಕ್ಕಿಬಿಟ್ಟವು. ಆತನಿಗೇ ಗೊತ್ತಿಲ್ಲದಂತೆ ಅತಿ ದೊಡ್ಡ ವ್ಯವಸ್ಥೆಯಲ್ಲಿ ಸಿಲುಕಿ ಅದರಿಂದ ಹೊರಬರಲು ಆಗದೇ ತಾನೊಂದು ಕಾಲದಲ್ಲಿ ಬಿಟ್ಟಿದ್ದ ಬುರುಡೆಯನ್ನು ಶತಾಯಗತಾಯ ಸಾಧಿಸಿಕೊಂಡು ಬರಬೇಕಾಗಿತ್ತು. ಅದೆಷ್ಟು ಎತ್ತರಕ್ಕೆ ಮುಟ್ಟಿತೆಂದು ಹೇಳುವ ಉದ್ದೇಶ ಈ ಲೇಖನದಲ್ಲ.

ಬಾಲಮುರಳಿಯ ಕಂಠಸ್ಥ

ಇನ್ನೊಂದು ತೀರಾ ಸಮೀಪದ ಉದಾಹರಣೆಯಿಂದ ಈ ವಿಷಯ ಮತ್ತಷ್ಟು ಅರ್ಥವಾಡಿಕೊಳ್ಳಲು ಸಹಾಯವಾದೀತು. ಬೆಂಗಳೂರಿನಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತದ ವಿದ್ವಾಂಸರೊಬ್ಬರಿದ್ದಾರೆ. ಅವರ ವರ ಮತ್ತು ಶಾಪವೆಂದರೆ ಅವರ ಕಂಠವು ಡಾ.ಎಂ.ಬಾಲಮುರಳೀ ಕೃಷ್ಣರದ್ದಕ್ಕೆ ಬಹುಪಾಲು ಹೋಲುತ್ತದೆ. ಬಾಲಮುರಳಿಯ ಪ್ರತಿಭೆಯು ಅದರಲ್ಲಿ ಧ್ವನಿಸದಿದ್ದರೂ, ಧ್ವನಿ ಅವರದಂತೆಯೇ ಸದ್ದು ಮಾಡುತ್ತದೆ. ಅವರಿಗೂ ಅಲ್ಪ ಪ್ರಮಾಣದ ಶಿಷ್ಯ ಸಮೂಹವೂ ಅಬ್ಬರದ ಅಹಂಕಾರವೂ ಇದೆ. ಅವರಿಗೆ ಮರುಳಾದವರಲ್ಲಿ ಬಹುಪಾಲು ಜನರು ಅವರ ದನಿ ಬಾಲಮುರಳಿ ಕೃಷ್ಣರದ್ದೆಂದೇ.

ತಮ್ಮ ಗುರುಗಳದ್ದು ಬಾಲಮುರಳಿ ಕೃಷ್ಣರವರ ದನಿಯಂತಿದೆ ಎಂದು ಉಬ್ಬುತ್ತಿದ್ದ ಅವರ ಶಿಷ್ಯರಲ್ಲಿ ಈ ವಿದ್ವಾಂಸರು ಯಾವಾಗಲೋ ಒಂದು ಸಣ್ಣ ರೀಲು ಬಿಟ್ಟುಬಿಟ್ಟರು. ಅದೇನೆಂದರೆ ರಾಜೇಂದ್ರ ಸಿಂಗ್ ಬಾಬುರವರ ಮುತ್ತಿನ ಹಾರ ಚಿತ್ರದಲ್ಲಿ, ಹಂಸಲೇಖಾರ ಸಂಗೀತ ನಿರ್ದೇಶನದಲ್ಲಿ 'ದೇವರು ಹೊಸೆದ ಪ್ರೇಮದ ದಾರ' ಹಾಡನ್ನು ತಾನೇ ಹಾಡಿದ್ದು, ಅದರ ಖ್ಯಾತಿಯ ಕ್ರೆಡಿಟ್ ತೆಗೆದುಕೊಳ್ಳಲು ಬಾಲ ಮುರಳಿಯದ್ದೆಂದು ಪ್ರಚಾರ ಮಾಡಿದ್ದಾರೆಂದು ನಾಲ್ಕು ಗೋಡೆಗಳ ಮಧ್ಯೆ ಹೇಳಿಕೊಂಡಿದ್ದಾರೆ. ಆದರೆ ಅವರನ್ನು ನಂಬುವ ಶಿಷ್ಯರಲ್ಲಾರೋ ತಮ್ಮ ಗುರುಗಳಿಗೆ ಬಾಬು ಮತ್ತು ಹಂಸಲೇಖ ಮೋಸ ಮಾಡಿದ್ದಾರೆಂದು ಟಿವಿ ಚಾನೆಲ್ಲುಗಳಿಗೆ ವಿಷಯ ಒಯ್ದಿದ್ದಾರೆ. ವಿಷಯವು ದಿಢೀರನೆ ಸಾರ್ವಜನಿಕ ವಲಯಕ್ಕೆ ಬಿದ್ದುಬಿಟ್ಟಿತು. ಇಂತಹ ವಿಷಯಗಳಿಗಾಗಿಯೇ ಕಾಯುತ್ತಿದ್ದ ಚಾನೆಲ್ಲುಗಳು ಪೂರ್ವಾಪರಗಳನ್ನು ವಿಚಾರಿಸದೇ ವಿವಾದವೆಬ್ಬಿಸಿಬಿಟ್ಟವು. ಆಗ ಆ ವಿದ್ವಾಂಸರು ಚಾನೆಲ್ಲಿಗೆ ಬರಲೇ ಬೇಕಾಯ್ತು. ಬಿಡಪ್ಪಾ ನಾನು ಆಗ ಏನೋ ಸುಮ್ಮನೆ ರೀಲುಬಿಟ್ಟೆ ಎಂದು ಹೇಳಲಾಗದಷ್ಟು ಗಂಭೀರವಾಗಿ ಪ್ರಕರಣವು ಬಂದು ನಿಂತಿದ್ದಾಗ ಆತ 'ನಾನೇ ಅದನ್ನು ಹಾಡಿದ್ದು, ಹಂಸಲೇಖ ಹಾಡಿಸಿದ್ದು' ಎಂದು ಒಂದೇ ರಾಗವನ್ನು ಹಾಡುತ್ತಿದ್ದರು.

ಇದನ್ನು ಬಾಬು ನೇರವಾಗಿ ನಿರಾಕರಿಸಿದ್ದರು ಮತ್ತು ಇದು ಸುಳ್ಳು ಹೇಳಿ ಸಿಕ್ಕಿಹಾಕಿಕೊಂಡಂತಹ ಪರಿಸ್ಥಿತಿಯಾಗಬಾರದೆಂದು ಆ ವಿದ್ವಾಂಸರು ಹೆಣಗಾಡುತ್ತಲೇ ಇದ್ದರು. ಇಂತಹದ್ದೊಂದು ಪರಿಸ್ಥಿತಿಯನ್ನೇ ಸತ್ಯ ಸಾಯಿಬಾಬಾ ಅದಷ್ಟು ಯಶಸ್ವಿಯಾಗಿ ಎದುರಿಸಿಕೊಂಡು ಬಂದಿದ್ದು.


ಸಣ್ಣ ಗುಂಪುಗಳಲ್ಲಿ ಹೇಳುವ ಸುಳ್ಳುಗಳು ನಂಬಿಕಸ್ಥರ ಮತ್ತು ವಿಶ್ವಾಸಿಗಳ ಕಿವಿಗೆ ಬಿದ್ದು, ಅವರು ಅದನ್ನು ನಂಬಿಕೊಂಡು ಬಲು ನಿಷ್ಠೆಯಿಂದ ಪ್ರಚಾರಕೊಟ್ಟು ಬಿಡುತ್ತಾರೆ.

ನಮ್ಮ ದೇಶದಲ್ಲಿ ಈ ಬಗೆಯಲ್ಲಿಯೇ ಪೌರಾಣಿಕ ಕಲ್ಪನೆಗಳು ವಾಸ್ತವ ಇತಿಹಾಸಕ್ಕೆ ಸೇರಿಹೋಗಿರುವುದು ಏನೂ ಹೊಸತಲ್ಲ. ಹೆಚ್ಚು ಜನರು ಒಂದು ಸುಳ್ಳನ್ನು ನಿಜವೆಂದು ನಂಬಿದರೆ, ನಿಜವನ್ನು ತಿಳಿದವರೂ ಮಾತಾಡಲಾರರು. ಅಲ್ಪ ಸಂಖ್ಯೆಯ ಸತ್ಯಾನ್ವೇಷಿಗಳು ಬಹುಸಂಖ್ಯಾತ ಮುಗ್ಧರ ಅಥವಾ ಮೂರ್ಖರ ಆಗ್ರಹವನ್ನು ಎದುರಿಸಲಾರರು.


















ಕಪ್ಪುಹಣ ತರುವೆವೆಂದವರ ಲೊಳಲೊಟ್ಟೆ

ನೆನಪಿದೆಯೇ, ಯುಪಿಎ ಸರ್ಕಾರ ಕಾಳ ಧನಿಕರ ಹೆಸರು ಬಹಿರಂಗಪಡಿಸಿದರೆ ಮಾಡುತ್ತಿಲ್ಲವೆಂದು ಆರೋಪಿಸಿ ಬಿಜೆಪಿ ಅಂದು ಸಂಸತ್ತಿನ ಒಳಗೂ ಹೊರಗೂ ಭಾರಿ ದೊಡ್ಡ ರಂಪವನ್ನೆ ಮಾಡಿತ್ತು. "ಮಾ, ಬೇಟಾ" ಸರ್ಕಾರ ಲೈಚೆನ್‌ಸ್ಟೈನ್ ಬ್ಯಾಂಕ್‌ನಲ್ಲಿ ಕಪ್ಪುಹಣ ಕೂಡಿಟ್ಟಿರುವವರೆನ್ನಲಾದ ವ್ಯಕ್ತಿಗಳ ಹೆಸರುಗಳನ್ನು ಹಂಚಿಕೊಂಡಿತ್ತು. ಈ ಮಾಹಿತಿಯನ್ನು ಮೂರು ವರ್ಷಗಳ ಕಾಲ ತಡೆಹಿಡಿದ ಸರ್ಕಾರ ಕೊನೆಗೂ ಏಪ್ರಿಲ್ 29ರಂದು ಪಟ್ಟಿಯನ್ನು




ಸುಪ್ರೀಂಕೋರ್ಟಿಗೆ ಸಲ್ಲಿಸಿದರೂ ಹೆಸರುಗಳನ್ನು ಬಹಿರಂಗಪಡಿಸದಲ್ಲಿ ಅನ್ಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳಿಗೆ ಧಕ್ಕೆಯಾಗಲಿದೆಯೆಂದು ರಾಗ ಎಳೆದಿತ್ತು. ಕ್ರಿಮಿನಲ್‌ಗಳನ್ನು ರಕ್ಷಿಸುತ್ತಿದೆ ಎಂದೆಲ್ಲ ಆಕಾಶ ಪಾತಾಳ ಒಂದಾಗುವಂತೆ ಬೊಬ್ಬೆ ಹೊಡೆದಿತ್ತು. ಮೋದಿಯನ್ನು ಗೆಲ್ಲಿಸಿದರೆ ನೂರು ದಿನಗಳೊಳಗಾಗಿ ವಿದೇಶದಲ್ಲಿರುವ ಒಂದೊಂದು ಪೈಸೆ ಕಪ್ಪು ಹಣವನ್ನು ವಾಪಸ್ ತಂದು ದೇಶವನ್ನು ಇನ್ನಿಲ್ಲದಂತೆ ಅಭಿವೃದ್ಧಿ ಮಾಡುತ್ತೇವೆಂದು ಹೇಳಿತ್ತು. ಮೋದಿ, ಬಾಬಾ, ಬೇಡಿಯಂಥವರು ಹೋದಲ್ಲಿ ಬಂದಲ್ಲಿ ಕಾಳಧನ ಕುರಿತು ವೀರಾವೇಶದಿಂದ ಗಂಟೆಗಟ್ಟಲೆ ಮಾತಾಡಿ ಚೆಟ್ಟದಷ್ಟು ಬೂಸಿ ಬಿಟ್ಟಿದ್ದರು. ಹೀಗೆ ಅಂಗೈಯಲ್ಲಿ ಅರಮನೆ ತೋರಿಸಿ ಮತದಾರ ಪ್ರಭುಗಳಿಗೆ ಮಂಕುಬೂದಿ ಎರಚಿ ಬಹುಮತದಿಂದ ಆರಿಸಿ ಬಂದು ಸರ್ಕಾರ ರಚಿಸಿರುವ ಅದೇ ಬಿಜೆಪಿ ಈಗ ತಿಪ್ಪರಲಾಗ ಹಾಕುತ್ತಿರುವ ತಮಾಷೆ ನೋಡಿದಿರಾ. ಹಿಂದೆ ಯುಪಿಎ ಸರ್ಕಾರ ಕೊಟ್ಟ ಕಾರಣಗಳನ್ನೇ ಮುಂದಿಡುತ್ತಿರುವ ಮೋದಿ ಸರ್ಕಾರವೀಗ ಏನೇನೋ ಸಬೂಬು ಕೊಟ್ಟು ಎಲ್ಲಾ ಮಾಹಿತಿಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎನ್ನುತ್ತಿದೆ! ಯುಪಿಎ ಆಡಳಿತದ ಕಾಲದಲ್ಲಿ ಜರ್ಮನಿಯ ಸರ್ಕಾರ

ಇದೀಗ ಮೋದಿ ಸರ್ಕಾರವೂ ಇದೇ ಡಯಲಾಗ್ ಪುನರುಚ್ಚರಿಸುತ್ತಿರುವುದರ ಅರ್ಥ ಬಿಜೆಪಿಗರು ಮತದಾರರನ್ನು ಶುದ್ಧ ಮೂರ್ಖರೆಂದು ಪರಿಗಣಿಸಿದ್ದಾರೆ ಎಂದಲ್ಲವೇ? ಇದಕ್ಕಿಂತ ದೊಡ್ಡ ವಂಚನೆ ಇನ್ನಾವುದಿದೆ? ಸಾಲದ್ದಕ್ಕೆ ಪಟ್ಟಿಯನ್ನು ಬಹಿರಂಗಪಡಿಸಿದರೆ ಕಾಂಗ್ರೆಸ್‌ಗೆ ಮುಜುಗರವಾಗಲಿದೆ ಎಂಬ ಸಮಜಾಯಿಷಿ ಬೇರೆ. ಅಲ್ಲ ಸ್ವಾಮಿ, ನೀವು ಕಾಂಗ್ರೆಸ್ ಅನ್ನು ನಿರ್ನಾಮ ಮಾಡಲು ಹೊರಟವರಲ್ಲವೇ? ಇದ್ದಕ್ಕಿದ್ದ ಹಾಗೆ ಕಾಂಗ್ರೆಸ್ ಮೇಲೆ ನಿಮಗ್ಯಾಕೆ ಇಷ್ಟೊಂದು ಅನುಕಂಪ?! ವಾಸ್ತವ ಏನೆಂದರೆ ಪಟ್ಟಿಯಲ್ಲಿರುವವರ ಹೆಸರುಗಳನ್ನು ಬಯಲುಗೊಳಿಸಿದರೆ ಕಾಂಗ್ರೆಸ್‌ಗಷ್ಟೆ ಅಲ್ಲ ಬಿಜೆಪಿಗೂ ಸಮಸ್ಯೆ! ಮೂಲಗಳು ಹೇಳುವಂತೆ ಲೈಚೆನ್‌ಸ್ಟೈನ್ ಬ್ಯಾಂಕ್‌ನಲ್ಲಿ ಕಪ್ಪುಹಣ ಕೂಡಿಟ್ಟಿರುವವರಲ್ಲಿ ಕನಿಷ್ಠ 16 ಜನ ಗುಜರಾತಿಗಳು ಇದ್ದಾರೆ!

ಅಂದು ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರವೇ ಖುದ್ದು ಆಸಕ್ತಿ ವಹಿಸಿ ಕಾಳದಂಧೆಕೋರರಿಗೆ ಸಕಲ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ. ಆಗ ಎರಡೆರಡು ಬಾರಿ ತೆರಿಗೆ ಪಾವತಿಯಾಗುವುದನ್ನು ತಪ್ಪಿಸುವದಕ್ಕಾಗಿರುವ ಡಿಟಿಎ ಒಪ್ಪಂದವನ್ನು (DTAA) ದುರುಪಯೋಗಪಡಿಸಿದ ಭಾರತೀಯ ವಾಣಿಜ್ಯೋದ್ಯಮಿಗಳು ಶೂನ್ಯ ತೆರಿಗೆಯ ಸೌಲಭ್ಯವಿರುವ ಮಾರಿಷಿಯಸ್‌ನಲ್ಲಿ ನಕಲಿ ಕಂಪೆನಿಗಳನ್ನು ಹುಟ್ಟುಹಾಕಿ ಆ ಕಂಪೆನಿಗಳ ಮೂಲಕ ಭಾರತದಲ್ಲಿ ಹೂಡಿಕೆ ಮಾಡಿ ಇಲ್ಲೂ ತೆರಿಗೆ ವಿನಾಯಿತಿ ಪಡೆದು ಕೋಟ್ಯಂತರ ರೂಪಾಯಿ ಕಪ್ಪು ಹಣ ಶೇಖರಿಸತೊಡಗಿದ್ದರು! ಆದರೆ ಈ ರಹಸ್ಯ ಡೀಲಿಂಗ್ ಮೇಲೆ ಆದಾಯ ಕರ ಇಲಾಖೆಯ ಹದ್ದಿನ ಕಣ್ಣು ಬಿದ್ದಾಕ್ಷಣ ತನಿಖೆ ಆರಂಭವಾಯಿತು. ಆಗ ಕಂಗಾಲಾದ ಕಾಳಧನಕೋರರೆಲ್ಲ ವಾಜಪೇಯಿ ಸರ್ಕಾರದ ಕಾಲಿಗೆ ಬಿದ್ದು ತಮ್ಮ ನೆರವಿಗೆ ಬರುವಂತೆ ಗೋಗರೆದರು. ಇದು 2001-02ರಲ್ಲಿ ನಡೆದ ವಿದ್ಯಮಾನ. ಸರ್ಕಾರ ಆಗ ಅವರಿಗನುಕೂಲವಾಗುವಂತೆ ಕೆಲವು ನಿಯಮಗಳನ್ನು ಬದಲಾಯಿಸಿತು. ಆ ಸಂದರ್ಭದಲ್ಲಿ ಇದರ ವಿರುದ್ಧ 'ಆಜಾದಿ ಬಚಾವೊ ಆಂದೋಲನ್' ಸಲ್ಲಿಸಿದ ಆಕ್ಷೇಪಣೆಗಳನ್ನು ದೆಹಲಿ ಉಚ್ಚನ್ಯಾಯಾಲಯ ಎತ್ತಿಹಿಡಿಯಿತು. ಈ ತೀರ್ಪನ್ನು ಪ್ರಶ್ನಿಸಿ ಎನ್‌ಡಿಎ ಸರ್ಕಾರ ಮತ್ತು ಅಂತಾರಾಷ್ಟ್ರೀಯ ಹೂಡಿಕೆದಾರರ ಪ್ರತಿನಿಧಿಯಾದ ಗ್ಲೋಬಲ್ ಬಿಸ್‌ನೆಸ್ ಇನ್ಸಿಟ್ಯೂಟ್ ಒಟ್ಟಾಗಿ ಅಕ್ಟೋಬರ್ 2002ರಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದವು. 'ಆಜಾದಿ ಬಚಾವೊ ಆಂದೋಲನ್' ಪರವಾಗಿ ಪ್ರಶಾಂತ್ ಭೂಷಣ್ ವಾದಿಸಿದರೆ ಪ್ರತಿವಾದಿ ಲಾಯರ್ ಮಹಾಶಯ ತಿರುಚು ವಾದಗಳ ಮೂಲಕ ತನ್ನ ಕಕ್ಷಿದಾರರಿಗೆ ಜಯ ಗಳಿಸಿಕೊಟ್ಟ ಪರಿಣಾಮವಾಗಿ ಕಾಳಧನಕೋರರ ಹಾದಿ ಸುಗಮವಾಯಿತು. ಆತ ಇನ್ಯಾರೂ ಅಲ್ಲ, ಈಗಿನ ನಮ್ಮ ಘನತೆವೆತ್ತ ಹಣಕಾಸು ಸಚಿವ ಅರುಣ್ ಜೇಟ್ಲಿ!


ಈಗ ಸುಪ್ರೀಂಕೋರ್ಟಿಗೆ ಅಫಿಡವಿತ್ ಸಲ್ಲಿಸಲು ಹೊರಟ ಮೋದಿ ಸರ್ಕಾರದ ಕ್ರಮವನ್ನು ಮೂಲ ಅರ್ಜಿದಾರರೂ ಮಾಜಿ ಬಿಜೆಪಿಗರೂ ಆಗಿರುವ ರಾಂ ಜೇಠ್ಮಲಾನಿ ತೀಕ್ಷ್ಣವಾಗಿ ಟೀಕಿಸಿದ್ದಾರೆ. ಸುಪ್ರೀಂಕೋರ್ಟಿಗೆ ಹೀಗೊಂದು ಅರ್ಜಿ ಸಲ್ಲಿಸಬೇಕಾದುದು ಅಪರಾಧಿಗಳ ಹೊರತು ಪ್ರಜಾತಾಂತ್ರಿಕವಾಗಿ ಚುನಾಯಿತವಾದ ಸರ್ಕಾರ ಅಲ್ಲ ಎಂದಿರುವ ಜೇಠ್ಮಲಾನಿ, ಮೋದಿ ಸರ್ಕಾರ ವಿದೇಶಗಳಲ್ಲಿ ಕಪ್ಪು ಹಣ ಬಚ್ಚಿಟ್ಟಿರುವವರನ್ನು ಬಚಾಯಿಸಲು ಯತ್ನಿಸುತ್ತಿರುವುದಾಗಿ ಆರೋಪಿಸಿದ್ದಾರೆ. ಅವರು ಅರುಣ್ ಜೇಟ್ಲಿಗೆ ಒಂದು ಪತ್ರ ಬರೆದು "......ನೀವೀಗ ಇಂಥಾ ಅರ್ಜಿ ಹಿಡಿದುಕೊಂಡು ಕೋರ್ಟಿಗೆ ಹೋಗಿರುವುದು ಅತ್ಯಂತ ಅವಿವೇಕದ ಕೃತ್ಯ...... ಇತರ ಅನೇಕರ ಹಾಗೆ ನಿಮಗೂ ಸತ್ಯ ಹೊರಬರುವುದು ಬೇಕಿಲ್ಲವೆಂಬ ಬಲವಾದ ಅನುಮಾನ ನನ್ನದು. ನಿಮ್ಮ ಮನಸ್ಸಾಕ್ಷಿ ಕಲಕಿದೆ. ನಿಮ್ಮ ಮನಸ್ಸಿನಲ್ಲಿ ಗೊಂದಲಗಳಿವೆ. ಇವೆರಡರ ಮಾರಕ ಮಿಶ್ರಣದ ಫಲವಾಗಿ ಒಂದೊಂದು ದಿನ ಒಂದೊಂದು ವಿಧದ ಸಾರ್ವಜನಿಕ ಹೇಳಿಕೆ ನೀಡುತ್ತಿರುವಿರಿ' ಎಂದು ವಾಗ್ಬಾಣ ಎಸೆದಿದ್ದಾರೆ.

ನೀತಿಪಾಠ: ಸ್ವದೇಶಿ ಕಪ್ಪುಹಣದ ಅಂಗಳ ಹಾರಲೊಲ್ಲದವರು ವಿದೇಶಿ ಕಪ್ಪುಹಣದ ಗಗನವನೆಂತು ಹಾರುವರಯ್ಯಾ?



ಕುರುಕ್ಷೇತ್ರ ಯುದ್ಧ ನಡೆದಿದ್ದು ಸುಳ್ಳು

ಅಕ್ಟೋಬರ್ 29, 2014ರ ಸಂಚಿಕೆಯಲ್ಲಿ ಪ್ರವೀಣ್ ಎಸ್ ಶೆಟ್ಟಿ ಅವರು ಬರೆದಿರುವ 'ಕುರುಕ್ಷೇತ್ರ ಯುದ್ಧ ನಡೆದದ್ದು ನಿಜವೇ?' ಎಂಬ ಲೇಖನ ಓದಿದ ಮೇಲೆ ಕುತೂಹಲದಿಂದ ಸತ್ತ ಆನೆಗಳ ಮೃತ ದೇಹಗಳನ್ನು





ಹೇಗೆ ಹೂಳುತ್ತಾರೆ ಎಂಬುದನ್ನು ನೋಡಲು ನಾನು ಗೂಗಲ್‌ನಲ್ಲಿ ಇಮೇಜಸ್‌ಗಾಗಿ ಹುಡುಕಾಡಿದೆ. ಅವುಗಳ ಭಯಂಕರ ಭೀಭತ್ಸ ಫೋಟೋಗಳನ್ನು ಇಂಟರ್ನೆಟ್ಟಿನಲ್ಲಿ ನೋಡಿದಾಗ ಲೇಖಕರು ಬರೆದ ವಿಷಯ ನಿಜವೆನಿಸಿತು.

ಹದಿನೆಂಟು ದಿನದಲ್ಲಿ ನಾಲ್ಕು ಲಕ್ಷ ಆನೆಗಳ ಭಾರಿ ದೇಹ - ಅಂದರೆ ಒಂದು ದಿನಕ್ಕೆ ಇಪ್ಪತ್ತು ಸಾವಿರ ಆನೆಗಳ ಕೊಳೆತ ದೇಹ-ಯುದ್ಧ ಭೂಮಿಯಲ್ಲಿ ಹೂಳುವುದು ಅಸಾಧ್ಯದ ಮಾತು ಹಾಗೂ ಕುರುಕ್ಷೇತ್ರ ಯುದ್ಧ ನಡೆದಿದ್ದು ಸುಳ್ಳು ಎಂದು ಮನದಟ್ಟಾಯಿತು. ನೂರಾರು ಭೀಭತ್ಸ ಇಮೇಜಸ್‌ಗಳಲ್ಲಿ ಎರಡನ್ನು ಹೆಕ್ಕಿ ಪತ್ರಿಕೆಯ ಓದುಗರಿಗೆ ತೋರಿಸಲು ಇಲ್ಲಿ ಅಟಾಚ್ ಮಾಡಿದ್ದೇನೆ.

-ವೀರಪ್ಪ ದಿ ನಾಯ್ಕ್, ಬೆಂಗಳೂರು.

ಗೀತೆಯೆಂಬ ವೈದಿಕರ ಕ್ಯಾತೆ


ಪ್ರವೀಣ್ ಎಸ್ ಶೆಟ್ಟಿಯವರು ಬರೆದ 'ಕುರುಕ್ಷೇತ್ರ ನಡೆದದ್ದು ನಿಜವೇ?' ಎಂಬ ಲೇಖನ ವಿಚಾರ ಪ್ರಚೋದಕವಾಗಿತ್ತು. ಲೇಖನದ ಒಂದೆಡೆ ಅವರು 'ಸುದೀರ್ಘವಾದ ಭಗವದ್ಗೀತೆಯನ್ನು ಯುದ್ಧರಂಗದಲ್ಲಿ ಅರ್ಜುನನಿಗೆ ಶ್ರೀಕೃಷ್ಣ ಬೋಧಿಸುವಾಗ ಉಳಿದವರೇನು ಭಜನೆ ಮಾಡುತ್ತಿದ್ದರೇ?' ಎಂದು ಪ್ರಶ್ನಿಸಿದ್ದಾರೆ. ಅದು ನಿಜಕ್ಕೂ ಸತ್ಯ. ಆದರೆ ಇದು ಪ್ರಶ್ನಿಸಬಾರದಂತಹ ಸತ್ಯ. ಯಾಕೆಂದರೆ ಗೀತೆಯ ಬಗೆಗೆ ಹಾಗೆಲ್ಲ ಮಾತನಾಡಬಾರದು.

ಸುಮಾರು 10 ವರ್ಷಗಳ ಹಿಂದೆ ಮಂಜೇಶ್ವರದ ಬಳಿಯ ಕಡಂಬಾರ ಎಂಬಲ್ಲಿ ಮದುವೆಗೆಂದು ಹೋಗಿದ್ದೆ. ಅಲ್ಲಿ ನಿವೃತ್ತ ಪ್ರಾಚಾರ್ಯರಾದ ಪ್ರೊ. ಸಿ. ಹೊಸಬೆಟ್ಟು ಎನ್ನುವ ಖ್ಯಾತ ಹಿರಿಯ ಚಿಂತಕರು (ಗೌರೀಶ್ ಕಾಯ್ಕಿಣಿ ಹಾಗು ಮೂರ್ತಿರಾಯರಂತೆ ಇವರೂ ವೈದಿಕ ಹಿನ್ನೆಲೆಯವರಾಗಿದ್ದು ಆಳವಾದ ಪಾಂಡಿತ್ಯವುಳ್ಳವರಾಗಿಯೂ ಇದ್ದದ್ದನ್ನ ಇದ್ದಂತೆ ಹೇಳಲು ಹಿಂಜರಿಯುತ್ತಿರಲಿಲ್ಲ) ಸಿಕ್ಕಿದ್ದರು. ಅವರಲ್ಲಿ ಮಾತಾಡುತ್ತಾ "ದಿನಪತ್ರಿಕೆಯೊಂದರಲ್ಲಿ ಬಂದ ನಿಮ್ಮ 'ಭಗವದ್ಗೀತೆ ಯುದ್ಧ ಪ್ರಚೋದಕವೇ?' ಲೇಖನ ಚೆನ್ನಾಗಿತ್ತು" ಎಂದಾಗ ಅವರು ಮುಖ ಸಪ್ಪೆ ಮಾಡಿಕೊಂಡರು. ಕಾರಣ ಆನಂತರ ಅದರ ಬಗ್ಗೆ ತುಂಬಾ ವಿರೋಧ ವ್ಯಕ್ತವಾಗಿತ್ತೆಂದು ಅವರೇ ಹೇಳಿದರು. ಈ ಸೆಂಟಿಮೆಂಟ್‌ಗಳನ್ನೆಲ್ಲ ಬದಿಗಿಟ್ಟು ಸ್ವಲ್ಪವೇ ಸ್ವಲ್ಪ ಯೋಚಿಸಿದರೆ ಸಾಕು ಪ್ರವೀಣ್ ಶೆಟ್ಟಿಯವರು ಹೇಳಿದಂತೆ ಯಾಕೋ ಕುರುಕ್ಷೇತ್ರ ಯುದ್ಧಕ್ಕೂ ಮತ್ತು ಗೀತೋಪದೇಶ ಪ್ರಸಂಗಕ್ಕೂ ತಾಳೆಯಾಗುವುದೇ ಇಲ್ಲವೆಂಬುದು ಎಂಥವರಿಗೂ ತಿಳಿಯುತ್ತದೆ.

ಇನ್ನೂ ಅನೇಕ ಪುರಾಣ ಗ್ರಂಥಗಳಿಗಿಂತ ಭಗವದ್ಗೀತೆಗೇ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಇದು ವಾಲ್ಮೀಕಿಯ ರಚನೆ ಎನ್ನುವುದಕ್ಕಿಂತ ಭಗವಾನ್ ಉವಾಚ ಎಂದೂ, ಸ್ವತಃ ಶ್ರೀಕೃಷ್ಣನೇ ಉಪದೇಶಿಸಿದ್ದೆಂದೂ ಇದು ಪ್ರಶ್ನಾತೀತ ಧರ್ಮಶಾಸನವೆನಿಸಿಬಿಟ್ಟಿದೆ. ಮಹಾಭಾರತದ ಮೂಲ ಕಾವ್ಯದಲ್ಲಿ ಇರದಿದ್ದ ಇದನ್ನು ಕಾಲಕ್ರಮೇಣ ಯುದ್ಧಕಾಲದಲ್ಲಿ ಪಾರ್ಥಸಾರಥಿಯಾಗಿ ಬಂದ ಕೃಷ್ಣನ ಕೈ(ಬಾಯಿ)ಯಲ್ಲಿ ಗಲಿಬಿಲಿಗೊಂಡ ಅರ್ಜುನನಿಗೆ ಸೈನಿಕರು ಹಾಗು ಆನೆಕುದುರೆಗಳ ಗೌಜುಗದ್ದಲಗಳ ನಡುವೆಯೇ ಹೇಳಿಸಲಾಯ್ತು. ಮಹಾಭಾರತ ಕಾವ್ಯದಲ್ಲಿ ಅನೇಕಾನೇಕ ಪ್ರಕ್ಷೇಪ(ನಂತರದ ಸೇರ್ಪಡೆ)ಗಳನ್ನು ವಿದ್ವಾಂಸರು ಗುರುತಿಸಿದ್ದರೂ ಇದ್ದುದರಲ್ಲೇ ಪ್ರಮುಖ ಹಾಗು ದೊಡ್ಡದಾಗಿರುವ ಈ ಗೀತಾ ಪ್ರಕ್ಷೇಪವನ್ನು ಮಾತ್ರ ಉದ್ದೇಶಪೂರ್ವಕವಾಗಿ ಮರೆಸಲಾಗಿದೆ.

ಶ್ರೀಕೃಷ್ಣ ಹುಟ್ಟಿದ ದಿನದಿಂದಲೇ ಪವಾಡ ಹಾಗು ಸಾಮರ್ಥ್ಯವನ್ನು ತೋರುತ್ತಾ ಬಂದಂತವನು. ಬಾಲ್ಯವಿರಲಿ, ಯೌವ್ವನವೇ ಇರಲಿ ಆತನ ಕಾರ್ಯಗಳಲ್ಲಿ ಸೋಲೆಂಬುದೇ ಇರಲಿಲ್ಲ. ಆದರೂ ಪ್ರಸಿದ್ಧ ಭಗವದ್ಗೀತೆಯ ಗೀತಾಚಾರ್ಯನಾಗಿ ಮಾತ್ರ ಆತ ಸೋಲುಣ್ಣಬೇಕಾಯಿತು. ಯಾಕೆಂದರೆ, ಅತ್ಯಂತ ಸುದೀರ್ಘವಾಗಿ ಸಾರಭರಿತವಾಗಿ ಹಾಗು ಪರಿಣಾಮಕಾರಿಯಾಗಿ ಜೊತೆಗೆ ಮುಂದೆ ಸಂಭವಿಸುವ ಘಟನೆಗಳ (ಕರ್ಣಾದಿಗಳ ಸಾವು) ಜೊತೆಗೆ ತನ್ನ ವಿಶ್ವರೂಪವನ್ನೂ ಅರ್ಜುನನಿಗೆ ತೋರಿ ಸ್ವಯಂದೇವರ ದೇವನೇ ಎಲ್ಲವನ್ನು ಮನದಟ್ಟು ಮಾಡಿಸಿದ್ದರೂ ಅರ್ಜುನ ಮಾತ್ರ ನಂತರ ಈ ಗೀತೆಯ ಸಾರಕ್ಕೆ ತದ್ವಿರುದ್ಧವಾಗೇ ನಡಕೊಂಡಿದ್ದ. ಸುಖ-ದುಃಖ ಜಯಾಪಜಯಗಳಿಂದ ವಿಚಲಿತನಾಗದೇ ಸಮತ್ವದಲ್ಲಿರಬೇಕು, ಎಲ್ಲರೂ ಅವರವರ ಕರ್ಮಫಲಗಳ ಅಧೀನರು, ಆತ್ಮನಿಗೆ ಸಾವೆಂಬುದಿಲ್ಲ ದೈಹಿಕ ಮರಣವೇ ನಿಜವಾದ ಸಾವಲ್ಲ, ಸತ್ತವರ ಬಗ್ಗೆ ಯೋಚಿಸುವುದರಲ್ಲಿ ಯಾವುದೇ ಅರ್ಥವಿಲ್ಲ, ನಮ್ಮ ಕರ್ತವ್ಯಗಳಿಗೆ ನಾವು ಅಧೀನರೇ ವಿನಃ ಫಲಗಳಿಗಲ್ಲ ಎಂಬಂತಹ ಗೀತೆಯ





ಸಂದೇಶಗಳನ್ನು ಚಾಚೂತಪ್ಪದೇ ಪಾಲಿಸಿದವನಿದ್ದರೆ ಅದು ಕರ್ಣನೇ ವಿನಃ ಗೀತೆ ಕೇಳಿಸಿಕೊಂಡನೆನ್ನುವ ಅರ್ಜುನನಲ್ಲ.

ಸಂಧಾನಕಾಲದಲ್ಲಿ ಶತ್ರುಗಳೇ ನಿನ್ನ ಸಹೋದರರೆನ್ನುವ ಜನ್ಮರಹಸ್ಯ ಹೇಳಿದರೂ ಸ್ಥಿಮಿತ ಕಳಕೊಳ್ಳದೇ ಸಮ[illegible] ಕಾಯ್ದುಕೊಂಡ ಹಾಗು ಅರ್ಜುನನಂತಹ ತಮ್ಮ[illegible] ಬಾಣಕ್ಕೆದುರಾಗಿ ನಿಂತಾಗ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದ ಕರ್ಣನೆಲ್ಲಿ? ಅಭಿಮನ್ಯು ಸತ್ತಾಗ ಹುಚ್ಚು[illegible] ಶಪಥ (ಜಯದ್ರಥನನ್ನು ಸೂರ್ಯಾಸ್ತದೊಳಗೆ ಕೊಲ್ಲು[illegible])ಗೈದ ಹಾಗು ಕರ್ಣನನ್ನು ಕೊಲ್ಲದೇ ಬಂದ ಕಾರ[illegible] ತನ್ನ ಗಾಂಡೀವವನ್ನು ಜರೆದಂತ ಅಣ್ಣ ಧರ್ಮರಾಯನ[illegible] ಕೊಲ್ಲಹೋದ ಅರ್ಜುನನೆಲ್ಲಿ? ಇದರರ್ಥ ಅರ್ಜುನ[illegible] ಯಾವ ದೈವೀಕ ಉಪದೇಶಗಳೂ ನಡೆದಿರಲಿಲ್ಲ ಎಂ[illegible] ತಾನೇ? ನಡೆದಿದ್ದರೆ ಆತನ ಈ ರೀತಿಯ ವರ್ತನೆ ಸ್ವ[illegible] ಗೀತಾಚಾರ್ಯ ಶ್ರೀಕೃಷ್ಣನಿಗೆ ಶೋಭೆ ತರುವಂತದ್ದೆ[illegible]

ವಾಸ್ತವದಲ್ಲಿ ಮಹಾಭಾರತದ ಕಥೆಯಂತೆ, ಕುರು[illegible] ಯುದ್ಧಕಾಲದಲ್ಲಿ ಶ್ರೀಕೃಷ್ಣ ಒಬ್ಬ ಚಾಣಾಕ್ಷ ತಂತ್ರಗಾರ[illegible] (ಸಂಧಾನ ಕಾಲದಲ್ಲಿ ಕರ್ಣ ಜನ್ಮರಹಸ್ಯ ಹೇಳಿ ಗೊಂ[illegible] ಸೃಷ್ಟಿಸುವುದರಿಂದ ಹಿಡಿದು ಯುದ್ಧದ ಕೊನೆ[illegible] ದುರ್ಯೋಧನನ ತೊಡೆಗೆ ಹೊಡೆಯಲು ಭೀಮ[illegible] ಸೂಚಿಸುವ ತನಕ) ವರ್ತಿಸಿದನೇ ಹೊರತು ನೀತಿಬೋ[illegible] ಕನಂತಲ್ಲ, ಯುದ್ಧದ ಬಳಿಕ ದ್ರೋಣ, ಭೀಷ್ಮ, ಕ[illegible] ದುರ್ಯೋಧನ, ಜಯದ್ರಥರಂತವರನ್ನು ನೇರ ದಾರಿ[illegible] ಬದಲು ತಂತ್ರದಿಂದಲೇ ಕೊಲ್ಲಲಾಯಿತೆಂಬುದನ್ನು ಅ[illegible] ಒಪ್ಪಿಕೊಳ್ಳುತ್ತಾನೆ.

ಮೂಲತಃ ನೀತಿ-ಧರ್ಮ ಬೋಧಿಸುವ ಒ[illegible] ಪ್ರತ್ಯೇಕ ಶಾಸ್ತ್ರವಾಗಿದ್ದ ಈ ಗೀತೆ (ಕೆಲ ಪುರಾಣ ಶಾಸ್ತ್ರ[illegible] ಇದೇ ಭಾವವಿರುವ ಉಲ್ಲೇಖಗಳು ಕಾಣಸಿಗುತ್ತವೆ) [illegible] ಅದರಲ್ಲಿ ಧಾರ್ಮಿಕ ಕಟ್ಟುಕಟ್ಟಳೆಗಳನ್ನೂ ಸೇರಿಸಿಕೊ[illegible] "ಚಾತುರ್ವರ್ಣಾಂ ಮಯಾ ಸೃಷ್ಟ್ಯಾಂ ಗುಣ ಕ[illegible] ವಿಭಾಗಶಃ" ಎಂಬಂತಹ ಅನೇಕಾನೇಕ ಧರ್ಮ ಶಾ[illegible] ಕರ್ಮಫಲ ಸಿದ್ಧಾಂತಗಳನ್ನೆಲ್ಲ ಕೃಷ್ಣನ ಬಾಯಿಂದ ಬರು[illegible] ಮುದ್ರೆ ಒತ್ತಿ ಮಹಾಭಾರತದೊಡನೆ ಸೇರಿಸು[illegible]

ಚಾರ್ಲಿ ಚಾಪ್ಲಿನ್: ಒಂದು ಅನುಭವ ಕೋಶ

'ದಿ ಕಿಡ್', 'ಮಾಡರ್ನ್ ಟೈಮ್ಸ್', 'ಗ್ರೇಟ್ ಡಿಕ್ಟೇಟರ್', 'ಲೈಮ್ ಲೈಟ್', 'ದಿ ಗೋಲ್ಡ್ ರಶ್', ಸಿಟಿ ಲೈಟ್ಸ್', 'ದಿ ಸರ್ಕಸ್' ಮುಂತಾದ ಚಿತ್ರಗಳ ಮೂಲಕ ಜಗತ್ತಿನ ಅಗ್ರಮಾನ್ಯ ಕಲಾವಿದರ ಪೈಕಿ ಒಬ್ಬನಾಗಿ ಬೆಳೆದು ನಿಂತ, ಕಾಲ ತಂದೊಡ್ಡುವ ನೋವುಗಳ, ಸವಾಲುಗಳ, ಪರೀಕ್ಷೆಗಳ ನಡುವೆಯೇ ಬದುಕಿನ ಒಂದೊಂದು ಕ್ಷಣವನ್ನೂ ಅನುಭವಿಸುತ್ತ ತನ್ನದೇ ಆದ ಮಾಂತ್ರಿಕ ಶಕ್ತಿಯಿಂದ ಇಡೀ ಲೋಕವನ್ನೇ ಬೆಚ್ಚಿ ಬೀಳಿಸಿದ ಮಹಾನ್ ನಟ, ನಿರ್ದೇಶಕ ಚಾರ್ಲಿ ಚಾಪ್ಲಿನ್ ತಾನು ಹಿಂದೊಮ್ಮೆ ಪತ್ರಕರ್ತರೊಬ್ಬರೊಂದಿಗೆ ಹಂಚಿಕೊಂಡಿದ್ದ ಮಾತುಗಳನ್ನು ಇಲ್ಲಿ ಕನ್ನಡಕ್ಕೆ ಅನುವಾದಿಸಿಕೊಡಲಾಗಿದೆ...

ಪ್ರಶ್ನೆ: ಸರ್ ಚಾರ್ಲಿ ಸ್ಪೆನ್ಸರ್ ಚಾಪ್ಲಿನ್ ಅಂದ್ರೆ ನೀವೇನಾ?

ಚಾರ್ಲಿ: ಈ ರೀತಿ ವಿಚಿತ್ರ ಡ್ರೆಸ್ ಮಾಡಿಕೊಳ್ಳುವ, ಈ ರೀತಿ ಫನ್ನಿ ಮೀಸೆ ಬಿಡುವ ಆಸಕ್ತಿ ಬೇರೆ ಯಾರಿಗಿರಲು ಸಾಧ್ಯ? ಅವನು ನಾನೇ...

ಪ್ರಶ್ನೆ: ತುಂಬಾ ದಿನಗಳಿಂದ ನಿಮ್ಮ ಸಂದರ್ಶನ ಮಾಡಬೇಕೆಂಬ ಆಸೆಯಿತ್ತು ಸರ್ ಚಾರ್ಲಿ... ಐ ಮೀನ್, ಚಾರ್ಲಿ.

ಚಾರ್ಲಿ: ನನಗೆ ಗೊತ್ತು. ಅದಕ್ಕಾಗಿ ನಿಮ್ಮನ್ನು ಭೇಟಿಯಾದೆ. ನೀವು ಕಳಿಸಿದ್ದ ಮೆಸೇಜ್ ನನಗೆ ಸಿಕ್ಕಿತ್ತು, ನಿಮ್ಮನ್ನು ಕಾಣುವಂತೆ ಗೆಳೆಯ ಬ್ರೂಸ್ ಲೀ ಕೂಡ ನನಗೆ ಹೇಳಿದ್ದ. ನನ್ನ ಬದುಕಿನ ಮತ್ತು ವೃತ್ತಿ ಜೀವನದ ಹಲವು ಅನುಭವಗಳನ್ನು ನಿಮ್ಮೊಂದಿಗೆ ಮುಕ್ತವಾಗಿ ಹಂಚಿಕೊಳ್ಳಲು ಇಷ್ಟ ಪಡ್ತೀನಿ.

ಪ್ರಶ್ನೆ: ಹಾಗಾದರೆ ಒಂದು ಕೆಫೆಗೆ ಹೋಗೋಣ. ನಿಮಗೆ ಅಂತಲೇ ಒಂದು ಕಪ್ ಕಾಫಿ ಕೊಡಿಸುವೆ... ಯಾಕಂದ್ರೆ ನೀವು ಆಲ್ಕೋಹಾಲ್ ಸ್ವೀಕರಿಸುವುದಿಲ್ಲ ಅಂತ ನನಗೆ ಬಲ್ಲೆ.

ಚಾರ್ಲಿ: ನನ್ನ ಬದುಕಿನ ಬಗ್ಗೆ ನಿಮಗೆಷ್ಟು ಗೊತ್ತು?

ಪ್ರಶ್ನೆ: ನಾನು ಓದಿಕೊಂಡಿರುವುದರ ಪ್ರಕಾರ, ನೀವು 1889ರಲ್ಲಿ ಲಂಡನ್ನಿನಲ್ಲಿ ಜನಿಸಿದಿರಿ. ನಿಮ್ಮ ತಾಯಿಯೊಬ್ಬ ಗಾಯಕಿ ಹಾಗೂ ಹಾಸ್ಯಗಾರ್ತಿ. ನಿಮ್ಮ ತಂದೆಯೂ ಒಬ್ಬ ನಟ. ಆಮ್ ಐ ರೈಟ್?

ಚಾರ್ಲಿ: ನಿಮ್ಮ ಮಾತು ನಿಜ. ನನ್ನ ತಾಯಿ ಹಾಡುಗಾರ್ತಿ ಹಾಗೂ ನಟಿ. ನನ್ನ ತಂದೆ ಕೂಡ ಕುಡಿತದ ಚಟ ಹತ್ತಿಸಿಕೊಂಡಿದ್ದ ಒಬ್ಬ ನಟ. ನನಗೆ ಮೂರು ವರ್ಷವಿದ್ದಾಗ ನನ್ನ ತಂದೆ ನಮ್ಮಿಂದ ದೂರವಾದ. ಯಾಕೆಂದರೆ ನಮ್ಮಮ್ಮ ಬೇರೊಬ್ಬ ನಟನೊಂದಿಗೆ ಸಂಬಂಧವಿರಿಸಿಕೊಂಡು ಆತನ ಒಂದು ಮಗುವಿಗೆ ಜನ್ಮ ನೀಡಿದ್ದಳು. ಆಮೇಲೆ ನನ್ನನ್ನು ಮತ್ತು ನನ್ನ ಸಹೋದರ ಸಿಡ್ನಿಯನ್ನು ಸಾಕುವ ಸಲುವಾಗಿ ಅಮ್ಮ ಸ್ಟೇಜ್‌ಗಳಲ್ಲಿ ಹಾಡಲು ಶುರುವಿಕ್ಕಿಕೊಂಡಳು.

ಪ್ರಶ್ನೆ: ನಿಮ್ಮ ಬಣ್ಣದ ಬದುಕು ಆರಂಭವಾಗಿದ್ದು ಹೇಗೆ?

ಚಾರ್ಲಿ: ನಮ್ಮಮ್ಮ ತಾನು ನಡೆಸಿಕೊಡುತ್ತಿದ್ದ ಸಂಗೀತ ರಸರಂಜಿ ಕಾರ್ಯಕ್ರಮಗಳಿಗೆ ಪ್ರತಿರಾತ್ರಿ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದಳು. ಒಂದು ದಿನ ಏನಾಯಿತೆಂದರೆ ಎಂದಿನಂತೆ ಹಾಡುತ್ತಿದ್ದ ನನ್ನ ತಾಯಿಗೆ ಇದ್ದಕ್ಕಿದ್ದಂತೆ ಗಂಟಲು ಕೆಟ್ಟುಹೋಗಿ ಹಾಡಲು ಸಾಧ್ಯವಾಗಲಿಲ್ಲ. ಆಗ ಜನ ನಮ್ಮಮ್ಮನ ಮೇಲೆ ಕಲ್ಲು ತೂರಲು ಆರಂಭಿಸಿದರು. ಕೇವಲ ಐದು ವರ್ಷದ ಹುಡುಗನಾಗಿದ್ದ ನಾನು ನನ್ನ ತಾಯಿಯ ದಾರುಣ ಸ್ಥಿತಿ ಕಂಡು ದುಃಖಿತನಾದೆ. ತಕ್ಷಣ ಧೈರ್ಯಮಾಡಿ ನಾನೇ ಸ್ಟೇಜಿಗೆ ಹೋಗಿ ಅರ್ಧಕ್ಕೆ ನಿಂತಿದ್ದ ಆ ಹಾಡನ್ನು ನಾನೇ ಹಾಡಿ ಪೂರ್ಣಗೊಳಿಸಿದೆ. ಜನ ನನ್ನ ಹಾಡುಗಾರಿಕೆ ಕಂಡು ಖುಷಿಯಿಂದ ಚಪ್ಪಾಳೆ ಹೊಡೆದರು. ಆದರೆ ಆ ಘಟನೆಯಿಂದ ನನ್ನ ಅಮ್ಮನಿಗೆ ನನ್ನ ಮೇಲೆ ಭಯಂಕರ ಸಿಟ್ಟು ಬಂದು ಆಮೇಲೆ ಯಾವತ್ತಿಗೂ ಆಕೆ ಸ್ಟೇಜ್ ಮೇಲೆ ನಿಂತು ಹಾಡಿದ ಉದಾಹರಣೆಗಳೇ ಇಲ್ಲ.

ಪ್ರಶ್ನೆ: ನೀವು ಚಿಕ್ಕಂದಿನಿಂದಲೂ ಸಾಕಷ್ಟು ಕಷ್ಟಗಳನ್ನು ಅನುಭವಿಸುತ್ತಲೇ ಬೆಳೆದವರು ಅಂತ ಕೇಳಿದ್ದೀನಿ. ಅದರ ಬಗ್ಗೆ ಹೇಳ್ತೀರಾ?

ಚಾರ್ಲಿ: ನನಗೆ ಹತ್ತು ವರ್ಷವಿದ್ದಾಗ ನನ್ನ ತಂದೆ ನನ್ನನ್ನು ಒಂದು ಕಡೆ ಡಾನ್ಸ್ ಕಲಿಯಲು ಸೇರಿಸಿದ್ದರು. ಆದರೆ ಆ ಕನಸು ನನಸಾಗಲಿಲ್ಲ. ಯಾಕೆಂದರೆ ನನಗೆ ಹನ್ನೆರಡು ವರ್ಷವಿದ್ದಾಗ ಅಸ್ತಮಾ ಅಟ್ಯಾಕ್ ಆಗಿ ಆಸ್ಪತ್ರೆ ಸೇರಿದೆ. ಅದಾದ ಸ್ವಲ್ಪ ಕಾಲದಲ್ಲೇ ನಮ್ಮ ಅಪ್ಪ ಕೂಡ ಲಿವರ್ ಸಮಸ್ಯೆಗೆ ಗುರಿಯಾಗಿ ತೀರಿಕೊಂಡರು. ಆಮೇಲೆ ನನ್ನ ಸಹೋದರ ಕ್ಯಾಬಿನ್ ಬಾಯ್ ಆಗಿ ಕೆಲಸ ಗಿಟ್ಟಿಸಿಕೊಂಡ. ನಾನೂ ಸಹ ಬೇರೆ ನಿರ್ವಾಹವಿಲ್ಲದೆ ಕ್ಷೌರಿಕನ ಸಹಾಯಕನಾಗಿ, ಮುದ್ರಕನ ಅಸಿಸ್ಟೆಂಟ್ ಆಗಿ



ಇತ್ಯಾದಿ ಕೆಲಸಗಳನ್ನು ಮಾಡಬೇಕಾಯಿತು.

ಪ್ರಶ್ನೆ: ಮತ್ತೆ ಸ್ಟೇಜ್ ಕಡೆ ಬಂದಿದ್ದು ಹೇಗೆ?

ಚಾರ್ಲಿ: ನನಗೆ ಹದಿನಾಲ್ಕು ವರ್ಷವಿದ್ದಾಗ 'ಶೆರ್ಲಾಕ್ ಹೋಮ್ಸ್'ನಲ್ಲಿ ಪುಟ್ಟದೊಂದು ಪಾತ್ರ ಸಿಕ್ಕಿತು. ಅದರ ನಂತರ ನನ್ನ ಸಹೋದರ ಕಾಮಿಡಿಯನ್ನಾಗಿ ಕೆಲಸ ಮಾಡುತ್ತಿದ್ದ ಕಡಿಮೆ ಬೆಲೆಯ ಟಿಕೆಟ್ಟಿನ ಸಂಗೀತ ಕಾರ್ಯಕ್ರಮಗಳಲ್ಲಿ ನಾನೂ ಪಾಲ್ಗೊಂಡೆ.

ಪ್ರಶ್ನೆ: ಕಾಮಿಡಿಯನ್ನಾಗಿ ನೀವು ನಿಮ್ಮದೇ ಒಂದು ಸ್ಟೈಲ್ ಅಂತ ಕಂಡುಕೊಂಡಿದ್ದು ಯಾವಾಗ?

ಚಾರ್ಲಿ: 'ರಿಪೇರ್ಸ್' ಮೂಲಕ ನಾನು ಪ್ಲಂಬರ್ ಅಸಿಸ್ಟೆಂಟ್ ಆಗಿ ನಟಿಸಿದೆ. ಅದಾದ ನಂತರ ನನ್ನ ತಾಯಿಯಿಂದ ಪಡೆದ ದಟ್ಟವಾದ ಅನುಭವ ಮತ್ತು ತಂದೆಯ ಕುಡುಕುತನ... ಇವುಗಳಿಂದ ಪ್ರಭಾವಿತನಾಗಿ ನನ್ನದೇ ಸ್ಟೈಲ್ ಕಂಡುಕೊಳ್ಳಲು ಯತ್ನಿಸಿದೆ. ಆ ನಿಟ್ಟಿನಲ್ಲಿ ನನ್ನ ಹದಿನೆಂಟನೆ ವಯಸ್ಸಿನಲ್ಲಿ ಒಂದು ಟ್ರೂಪ್‌ಗಾಗಿ ನಟಿಸಬೇಕಿತ್ತು. ಒಮ್ಮೆ ಇದ್ದಕ್ಕಿದ್ದಂತೆ ನನ್ನ ಗಂಟಲು ಗೊರಗೊರ ಅನ್ನಲು ಶುರು ಮಾಡಿತು ಥೇಟು ನನ್ನ ತಾಯಿಗೆ ಆದಂತೆಯೇ. ಆಗ ಅಲ್ಲಿದ್ದ ನಟನಾವರ್ಗ, ಪ್ರೇಕ್ಷಕ ವೃಂದ ಎಲ್ಲರೂ ಏಕಕಾಲಕ್ಕೆ ಆತಂಕ ಮತ್ತು ರಸಭಂಗಕ್ಕೆ ಒಳಗಾದರು. ಆಗ ನನ್ನ ಸಹೋದರನ ಸಲಹೆ ಮೇರೆಗೆ ಕುಡುಕನಂತೆ ನಟಿಸಲು ಶುರು ಮಾಡಿದೆ. ನನ್ನ ತೂರಾಟ, ತೊದಲು ಮಾತು ಇತ್ಯಾದಿಗಳು ಜನಕ್ಕೆ ಇಷ್ಟವಾದವು. ನನ್ನ ನಟನೆಯನ್ನು, ಆಂಗಿಕ ಅಭಿನಯವನ್ನು ಜನ ಬಹುವಾಗಿ ಮೆಚ್ಚಿಕೊಂಡುದರ ಪರಿಣಾಮ 'ಎ ನೈಟ್ ಇನ್ ಆನ್ ಇಂಗ್ಲಿಷ್ ಮ್ಯೂಸಿಕ್ ಹಾಲ್' ಎನ್ನುವ ಆ ಶೋ ಹಿಟ್ ಆಯಿತು!

ಪ್ರಶ್ನೆ: ಆಮೇಲೆ ನಿಮ್ಮ ಟ್ರೂಪ್ ಅಮೆರಿಕದ ಯಾವ್ಯಾವ ಸ್ಥಳಗಳಲ್ಲಿ ಪ್ರದರ್ಶನ ಕೊಟ್ಟಿತು?

ಚಾರ್ಲಿ: 1910ರಲ್ಲಿ ಜೆರ್ಸಿ ಸಿಟಿಯಲ್ಲಿ ಪ್ರದರ್ಶನ ನೀಡಿದೆವು. ಹಾಗೆಯೇ ಕ್ಲೀವ್‌ಲ್ಯಾಂಡ್, ಸೆಂಟ್ ಲೂಯಿಸ್, ಕನಾಸ್ ಸಿಟಿ, ಬಿಲ್ಲಿಂಗ್ ಅಂಡ್ ಡೆನ್ವರ್ ಸೇರಿದಂತೆ ಅಮೆರಿಕಾದ್ಯಂತ ಸಂಚರಿಸಿ ಪ್ರದರ್ಶನ ಕೊಟ್ಟೆವು. ಆಮೇಲೆ 1912ರಲ್ಲಿ ನಾನು ಎರಡನೇ ಬಾರಿ ಅಮೆರಿಕಗೆ ಹೋದೆ. ಅಷ್ಟರಲ್ಲಿ ನಾನು ಮೊದಲು ನಟಿಸುತ್ತಿದ್ದ ಟ್ರೂಪ್ ಜೊತೆಗಿನ ಕಾಂಟ್ರಾಕ್ಟ್ ಮುಗಿಯುವ ಹಂತದಲ್ಲಿತ್ತು, ಅಷ್ಟರಲ್ಲಿ ಒಂದಿಷ್ಟು ಮೂಕಿ ಚಿತ್ರಗಳಲ್ಲಿ ನಟಿಸುವ ಅವಕಾಶಗಳು ಒದಗಿಬಂದವು. 'ಕಿಡ್ ಆಟೋ ರೇಸಸ್ ಅಟ್ ವೆನಿಸ್' ನಾನು ನಟಿಸಿದ ಮೊದಲ ಶಾರ್ಟ್ ಫಿಲಂ. ಆ ಶಾರ್ಟ್ ಫಿಲಂನಲ್ಲಿ ಬ್ಯಾಗಿ ಪ್ಯಾಂಟ್, ದೊಡ್ಡ ದೊಡ್ಡ ಷೂ, ಟೈಟ್ ಕೋಟು, ತಲೆಗೊಂದು ಪುಟಾಣಿ ಟೋಪ್ಪಿಗೆ, ಕೈಗೊಂದು ಕೋಲು... ಇವೆಲ್ಲವೂ ಈಗ ನೆನಪಿಗೆ ಬರುತ್ತವೆ!

ಪ್ರಶ್ನೆ: ನೀವು ನಿರ್ದೇಶಕರಾಗಿದ್ದು ಯಾವಾಗ?

ಚಾರ್ಲಿ: ಆ ದಿನಗಳಲ್ಲಿ ನಾನು ನಟಿಸುತ್ತಿದ್ದ ಚಿತ್ರಗಳ ನಿರ್ದೇಶಕರು ನಾನು ನೀಡುತ್ತಿದ್ದ ಉಪಯುಕ್ತ ಸಲಹೆಗಳಿಗೆ ಸೊಪ್ಪು ಹಾಕುತ್ತಿರಲಿಲ್ಲ, ಆಮೇಲೆ ನಾನೇ ನಿರ್ದೇಶಕನಾಗಬೇಕು ಅಂತ ತೀರ್ಮಾನಿಸಿದೆ. ಆ ಹಠದಲ್ಲಿ 1914ರಲ್ಲಿ 'ಕಾಟ್ ಟು ದಿ ರೇನ್' ಎಂಬ ಚಿತ್ರವನ್ನು ಪ್ರಥಮ ಬಾರಿಗೆ ನಿರ್ದೇಶಿಸಿದೆ. ಹದಿನಾರು ನಿಮಿಷಗಳ ಆ ಸಿನಿಮಾದಲ್ಲಿನ ನನ್ನ ಅಭಿನಯ ಮತ್ತು ನಿರ್ದೇಶನ ಬಹಳ ಜನಕ್ಕೆ ಇಷ್ಟವಾಯಿತು. ಅದರಿಂದ ನನ್ನ ಆತ್ಮವಿಶ್ವಾಸವೂ ಹೆಚ್ಚಿತು. ಆಮೇಲೆ ಅನೇಕ ಚಿತ್ರಗಳನ್ನು ನಿರ್ದೇಶಿಸಿದೆ.

ಪ್ರಶ್ನೆ: ನಿಮ್ಮ ಹೆಂಡತಿ ಬಗ್ಗೆ ಹೇಳ್ತೀರಾ?

ಚಾರ್ಲಿ: 1918ರಲ್ಲಿ ಇಪ್ಪತ್ತೊಂಭತ್ತು ವರ್ಷದವನಾಗಿದ್ದ ನಾನು ಹದಿನಾರು ವರ್ಷದ ಮಿಲ್ಡ್ರೆಡ್ ಹ್ಯಾರಿಸ್ ಎಂಬ ಸುಂದರ ತರುಣಿಯನ್ನು ಪಾರ್ಟಿಯೊಂದರಲ್ಲಿ ಭೇಟಿಯಾದೆ. ಕೆಲಕಾಲ ಒಟ್ಟಿಗೆ ಸುತ್ತಾಡಿದೆವು. ಅಷ್ಟರಲ್ಲಿ ಮಿಲ್ಡ್ರೆಡ್ ತಾನು ಬಸುರಿಯಾಗಿರುವುದಾಗಿ ಹೇಳಿದಳು. ಈ ಘಟನೆಯ ಸುತ್ತ ನನ್ನ ಬಗ್ಗೆ ಅಪಪ್ರಚಾರ ಶುರುವಾಗುವ ಮೊದಲೇ ಆಕೆಯನ್ನು ಮದುವೆಯಾಗಿಬಿಟ್ಟೆ. ಆಮೇಲೆ ಗೊತ್ತಾಯಿತು ಆಕೆ ನಿಜಕ್ಕೂ ಬಸುರಿಯಾಗಿರಲಿಲ್ಲ! ಮುಂದೊಮ್ಮೆ ಆಕೆ ಬಸುರಿಯಾದರೂ ಮಗು ಹುಟ್ಟಿದ ಕೂಡಲೇ ತೀರಿಕೊಂಡಿತು. ಆಮೇಲೆ ಅವಳೊಂದಿಗೆ ವೈವಾಹಿಕ ಸಂಬಂಧ ಕಡಿದುಕೊಳ್ಳಲು 100,000 ಡಾಲರ್ ಆಫರ್ ಕೊಟ್ಟೆ, ಅದಕ್ಕೆ ಒಪ್ಪದ ಆಕೆ 1,000,000 ಡಾಲರ್ ಬೇಡಿಕೆಯೊಡ್ಡಿದಳು- ಕಡೆಗೆ 200,000 ಡಾಲರ್‌ಗೆ ಒಪ್ಪಂದವಾಗಿ 1920ರಲ್ಲಿ ಆಕೆಗೆ ಡೈವೋರ್ಸ್ ನೀಡಿದೆ.

ಪ್ರಶ್ನೆ: ಎರಡನೇ ಪತ್ನಿಯ ಬಗ್ಗೆ ಹೇಳಿ ಹಾಗಾದರೆ...

ಚಾರ್ಲಿ: 1924ರಲ್ಲಿ ಆಗಷ್ಟೇ ಹದಿನಾರನೇ ವಯಸ್ಸಿಗೆ ಕಾಲಿಟ್ಟಿದ್ದ ಲಿಟಾ ಗ್ರೇ ಎಂಬಾಕೆಯನ್ನು ಭೇಟಿಯಾದೆ. ಆಕೆ ನನ್ನ 'ದಿ ಗೋಲ್ಡ್ ರಶ್' ಚಿತ್ರದಲ್ಲಿ ಪಾತ್ರ ಮಾಡಿದ್ದಳು. ಯಾವಾಗ ಆಕೆಯೂ ಬಸುರಿಯಾದಳೋ ಆಕೆ ನನ್ನ ಸಿನಿಮಾದಿಂದ ಹೊರಬಿದ್ದು ನನ್ನ ಎರಡನೇ ಹೆಂಡತಿಯಾದಳು; ನಮಗೆ ಇಬ್ಬರು ಮಕ್ಕಳು. 1928ರಲ್ಲಿ ಅವಳಿಗೂ 825,000 ಡಾಲರ್ ನೀಡಿ ಡೈವೋರ್ಸ್ ಕೊಟ್ಟುಬಿಟ್ಟೆ. ಅಷ್ಟರಲ್ಲಾಗಲೇ ನನ್ನ ತಲೆಗೂದಲು ನಿಧಾನವಾಗಿ ಬೆಳ್ಳಗಾಗತೊಡಗಿದ್ದವು- ನನಗಾಗ ಮೂವತ್ತ?ೈದು ವರ್ಷದ ಯಂಗ್ ಮ್ಯಾನ್.

ಪ್ರಶ್ನೆ: ಈಗ ಮೂರನೇ ಹೆಂಡತಿಯ ಬಗ್ಗೆ ಹೇಳುವ ಸರದಿ...

ಚಾರ್ಲಿ: ನನ್ನ 'ಮಾಡರ್ನ್ ಟೈಮ್ಸ್' ಹಾಗೂ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರಗಳಲ್ಲಿ ನಟಿಸಿದ್ದ ಗೊಡಾರ್ಡ್ ಆ ಕಾಲಕ್ಕೆ ಇಪ್ಪತ್ತೆರಡು ವಯಸ್ಸಿನ ಚೆಲುವೆ. ಆಕೆ ಮತ್ತು ನಾನು 1932ರಿಂದ 1940ರ ನಡುವೆ ಒಟ್ಟಿಗೆ ಬಾಳಿದೆವು. ಆಮೇಲೆ ಒಂದು ದಿನ 'ನಾವು 1936ರಲ್ಲೇ ಒಬ್ಬರಿಗೊಬ್ಬರು ಮದುವೆಯಾಗಿದ್ದೇವೆ' ಎಂಬುದಾಗಿ ಸಾರ್ವಜನಿಕವಾಗಿ ಘೋಷಿಸಿಕೊಂಡೆವು. ಆದರೆ ಒಂದು ಮಾತು, 'ಎಲ್ಲಿ ನಿಮ್ಮ ಮ್ಯಾರೇಜ್ ಸರ್ಟಿಫಿಕೆಟ್ ತೋರಿಸಿ' ಅಂತ ನೀವೇನಾದರೂ ಕೇಳಿದರೆ ನನ್ನ ಬಳಿ ಉತ್ತರವಿಲ್ಲ!


ಪ್ರಶ್ನೆ: ಇನ್ನು ನೀವು ಹೇಳಬೇಕಿರೋದು ನಿಮ್ಮ ಸೆಕ್ಸ್ ಲೈಫ್ ಬಗ್ಗೆ...

ಚಾರ್ಲಿ: ನಾನು ಅನೇಕ ಯುವತಿಯರನ್ನು ಪ್ರೀತಿಸಿದ್ದೀನಿ, ಅನೇಕ ಹೆಣ್ಣುಗಳೊಂದಿಗೆ ಸಂಬಂಧವಿರಿಸಿಕೊಂಡಿದ್ದೀನಿ, ಈ ಕುರಿತು ಕೆಲವು ಬಾರಿ ಕಾನೂನಿನ ಯುದ್ಧದಲ್ಲಿಯೂ ಹೋರಾಡಿದ್ದೀನಿ... ಆದರೆ ಇವೆಲ್ಲವುಗಳ ನಂತರ ನಾನು 1943ರಲ್ಲಿ ಹದಿನೆಂಟು ವರ್ಷದ ಓನ ಓ ನೇಲ್ ಎಂಬಾಕೆಯನ್ನು ಮದುವೆಯಾದೆ. ಆಕೆ ನಾಟಕಕಾರ ಯೂಗೆನ್ ಓ ನೇಲ್‌ನ ಮಗಳು. ನಮಗೆ ಎಂಟು ಮಕ್ಕಳು- ನಮ್ಮ ಕೊನೆಯ ಮಗು ಹುಟ್ಟಿದಾಗ ನನಗೆ ಬರೋಬ್ಬರಿ ಎಪ್ಪತ್ಮೂರು ವರ್ಷ!

ಪ್ರಶ್ನೆ: ಕೊನೆಯದಾಗಿ ನಿಮ್ಮ ಇತರ ಆಸಕ್ತಿಗಳೇನು ಅಂತ ಹೇಳ್ತೀರಾ?

ಚಾರ್ಲಿ: ವಯಲಿನ್ ಪ್ರಾಕ್ಟೀಸ್ ಮಾಡೋದು, ಪುಸ್ತಕ ಓದೋದು ಅಂದರೆ ನನಗಿಷ್ಟ... ಸೆಲ್ಫ್ ಎಜುಕೇಶನ್‌ನಲ್ಲಿ ನನಗೆ ಆಸಕ್ತಿ, ಅದಕ್ಕಾಗಿ ಯಾವಾಗಲೂ ಏನಾದರೂ ಕಲಿಯುವ ತವಕ ನನ್ನದು. ಬದುಕಿನ ಶಾಲೆಯಲ್ಲಿ ಎಷ್ಟು ಕಲಿತರೂ ಕಡಿಮೇನೆ....

● ಹೃದಯಶಿವ



...ಮೂಲಕ ಮತ್ತಷ್ಟು ಅದನ್ನು ಗಟ್ಟಿಗೊಳಿಸಲಾಯ್ತು. ಯುದ್ಧದಂತಹ ಘನ ಗಂಭೀರ ಸನ್ನಿವೇಶದಲ್ಲಿ ಸಮಯ ವ್ಯರ್ಥದ ಅನವಶ್ಯಕ ಜಾತಿ-ನೀತಿಯ ಉಪದೇಶಗಳನ್ನೆಲ್ಲ ಯಾರಾದರೂ ಮಾಡುವುದುಂಟೇ? ಮಹಾಭಾರತದಲ್ಲಿ ಸೇರಿಸಿಕೊಂಡ ಈ ಗೀತೆಗೆ ನಂತರ ಜಬರ ತಾಕತ್ತನ್ನು ಕೊಟ್ಟವನೆಂದರೆ ಅದು ಶಂಕರಾಚಾರ್ಯ. ಶಂಕರಾಚಾರ್ಯ ನಿಂದ ಹಿಡಿದು, ಬುದ್ಧ, ಗಾಂಧಿ, ತಿಲಕ್, ಇಸ್ಕಾನ್ ಸ್ಥಾಪಕ ಪ್ರಭುಪಾದ, ಓಶೋ ರಜನೀಶ್ ಹೀಗೆ ಅನೇಕಾನೇಕ ಮಂದಿ ಭಗವದ್ಗೀತೆಗೆ ಭಾಷ್ಯ ಬರೆದಿದ್ದಾರೆ. ಎಲ್ಲರೂ ಅವರವರ ಮೂಗಿನ ನೇರಕ್ಕೆ ಬರೆದಿರುವ ಕಾರಣ ಎಲ್ಲವೂ ಬಿಡುತೇಕ ಪ್ರತ್ಯೇಕ ಗ್ರಂಥಗಳಂತೆಯೇ ತೋರುತ್ತವೆ (ಗಾಂಧೀಜಿ ತನ್ನ ಭಾಷ್ಯದಲ್ಲಿ ಗೀತೆಯ ಚಾತುರ್ವರ್ಣ್ಯಂ... ಸಾಲನ್ನು ವಿವರಿಸಹೋಗದೇ ಬಿಟ್ಟಿದ್ದಾರೆ).

ಒಟ್ಟಾರೆ ಮನು ಮೊದಲಾದ ಧರ್ಮಶಾಸ್ತ್ರ ಕರ್ತರು ಗಿಂತ ಪರಿಣಾಮಕಾರಿಯಾಗಿ ಸ್ವಯಂ ಶ್ರೀಕೃಷ್ಣನ ಬಾಯಿಂದಲೇ ಹೇಳಿಸಿದಂತೆ ಮಾಡಲ್ಪಟ್ಟ ಈ ಭಗವದ್ಗೀತೆ ಕೇ ಹೆಚ್ಚು ಪರಿಣಾಮಕಾರಿಯಾಗಿ ವೈದಿಕ ಶಾಸನವನ್ನು ಜನರ ಮೇಲೆ ಹೇರುವಲ್ಲಿ ಯಶಸ್ವಿಯಾಗಿತ್ತೆಂಬುದರಲ್ಲಿ ಅನುಮಾನವೇ ಇಲ್ಲ.

-ಶಶಿ ಪುತ್ತೂರು, ದಕ

ಪ್ರವೀಣ ಶೆಟ್ಟಿಯವರ ಕುರುಕ್ಷೇತ್ರ ಯುದ್ಧದ ಬಗೆಗಿನ ಲೇಖನ ಚೆನ್ನಾಗಿತ್ತು, ಅವರು ಎತ್ತಿದ ಪ್ರಶ್ನೆಗಳು ತರ್ಕಬದ್ಧವಾಗಿಯೇ ಇದೆ. ಇವುಗಳಿಗೆ ಸಾಕ್ಷಾತ್ ಶ್ರೀಕೃಷ್ಣನೇ ಉತ್ತರಿಸಲು ಅಸಾಧ್ಯ. ಮೂಲತಃ ಮಹಾಭಾರತ, ರಾಮಾಯಣಗಳು ಸುಂದರವಾದ ಕಥನ ಕಾವ್ಯಗಳು. ಅವುಗಳನ್ನು ಸಾಹಿತ್ಯಕ ಕುತೂಹಲದಿಂದ ಓದಿದರೇನೇ ಚೆನ್ನ. ಅಲ್ಲಿರುವ ವ್ಯಕ್ತಿಗಳು ಮತ್ತು ಸಂಗತಿಗಳನ್ನು ಒರೆಗೆ ಹಚ್ಚುವುದೆಷ್ಟು ಸರಿ? ಬೈಬಲ್‌ನಲ್ಲಿ ಕೂಡಾ ಇದೇ ತರಹ ಅನೇಕ ಸಂಗತಿಗಳಿವೆ.

ಪೌರಾಣಿಕ ವಿಷಯಗಳನ್ನು ವರ್ತಮಾನದೊಂದಿಗೆ ತಾಳೆ ಹಾಕಿ ತಮ್ಮ ಬೇಳೆ ಬೇಯಿಸಿಕೊಳ್ಳುವುದು ಬಿದ್ದಿಗಳ ಹುನ್ನಾರ. ಇದೇ ಅವರ ಹೊಟ್ಟೆಪಾಡು. ನಮ್ಮ ಇತಿಹಾಸದಲ್ಲಿ ಅನೇಕ ಸ್ಥಳಗಳನ್ನು (ಉದಾ: ನಾಸಿಕ್, ರಾಮರ ಮಹಿಮೆ, [illegible] ಬೆಟ್ಟ) ಪೌರಾಣಿಕ ಘಟನೆಗಳಿಗೆ ಸಾಕ್ಷಿಯೆಂಬಂತೆ ಬಿಂಬಿಸಲಾಗುತ್ತಿದೆ. ಇದು ಕೆಲವೊಮ್ಮೆ ಅತಿರೇಕಕ್ಕೂ ಹೋಗುತ್ತದೆ. ಉದಾಹರಣೆಗೆ ಹೇಳುವುದಾದರೆ ಕಾಗಕ್ಕ-ಗುಬ್ಬಕ್ಕ [illegible]. ಅಯೋಧ್ಯೆಯ ಒಂದು ಭಾಗದಲ್ಲಿ ಹುಟ್ಟಿದ್ದೊಂದು [illegible] ಕರೆಯಲಾಗುತ್ತದಂತೆ. ಹಾಗಾಗಿ ಅದು ರಾಮನ ಜನ್ಮಸ್ಥಳವಂತೆ. ಹಾಗೇನೇ ಬೇಲೂರಿನ ಚನ್ನಕೇಶವ ದೇವಾಲಯಕ್ಕೆ ಗೋಪುರವಿಲ್ಲದ್ದಕ್ಕೆ ಇದೇ ತರಹ ಕಥೆಯನ್ನು ಹುಟ್ಟಿಸಿದ್ದಾರೆ.

ಅದೇನೆಂದರೆ ಜಕ್ಕಣಾಚಾರಿ ಒಂದೇ ರಾತ್ರಿಯಲ್ಲಿ ಆ ದೇವಸ್ಥಾನವನ್ನು ಕಟ್ಟುವೆನೆಂದು ಪ್ರತಿಜ್ಞೆ ಮಾಡಿದ್ದನಂತೆ. ಆದರೆ ಕೆಳಗಿನ ಭಾಗ ಮುಗಿಯುವಷ್ಟರಲ್ಲಿ ಬೆಳಕಾಯಿತಂತೆ. ಹಾಗಾಗಿ ಗೋಪುರದ ಕೆಲಸ ಉಳಿದೇ ಬಿಟ್ಟಿತ್ತಂತೆ. ಈ ತರಹ ಅನೇಕ ಅವೈಜ್ಞಾನಿಕ ನಂಬಿಕೆಗಳಿವೆ.

ಲಂಕೇಶರು ಒಮ್ಮೆ 'ಜಗತ್ತಿನಲ್ಲಿ ಏಷಿಯಾ ಖಂಡದ ಜನರ ವೈಚಾರಿಕ ಬೆಳವಣಿಗೆ ಬಹಳ ಮಂದಗತಿಯದ್ದು' ಎಂದು ಬರೆದಿದ್ದರು. ಅದು ನಿಜವಾಗಲೂ ಸರಿ!

- ಪ್ರಕಾಶ ಬಿಸ್ನಾಗರ, ಬೆಂಗಳೂರು

ನವಂಬರ್ ಒಂದರಿಂದ ಕನ್ನಡೀಕರಣಗೊಳ್ಳಲಿರುವ ಮೈಸೂರು ನಗರದ ಹೆಸರನ್ನು ಇಂಗ್ಲಿಷ್ ಅಕ್ಷರಗಳಲ್ಲಿ ಹೇಗೆ ಬರೆಯಬೇಕೆಂದು ಪಂಡಿತಾರಾಧ್ಯ ಅವರು ಸೂಚಿಸಿರುವುದು ಸರಿ (ನವೆಂಬರ್ 5, 2014 ಸಂಚಿಕೆ).

ಕರ್ನಾಟಕದ ನಗರಗಳ ಹೆಸರುಗಳು ಕನ್ನಡ ಭಾಷಾ ಉಚ್ಚಾರಕ್ಕೆ ಅನುಗುಣವಾಗಿ ಇಂಗ್ಲಿಷ್ ಸ್ಪೆಲ್ಲಿಂಗ್ ಹೇಗಿರಬೇಕು ಎಂದು ಕರ್ನಾಟಕ ಸರಕಾರವೇ ಅಧಿಕೃತವಾಗಿ ಸೂಚಿಸಬಹುದು. ಅದರಂತೆ ಹಿಂದಿ/ದೇವನಾಗರಿ ಲಿಪಿಯಲ್ಲೂ ಈ ಕನ್ನಡ ನಗರಗಳ ಹೆಸರು ಹೇಗೆ ಬರೆಯಬೇಕೆಂದು ಸಹ ಕರ್ನಾಟಕ ಸರಕಾರವೇ ನಿರ್ಣಯಿಸಿದರೆ ಉತ್ತಮ. ಯಾಕೆಂದರೆ ದೇವನಾಗರಿಯಲ್ಲಿ ಳ-ಕಾರ ಮತ್ತು ಣ-ಕಾರ ಇದ್ದರೂ ಕೇಂದ್ರ ಸರಕಾರದ ಅಧೀನವಿರುವ ಬ್ಯಾಂಕುಗಳು ಅಂಚೆ- ಕಚೇರಿ ರೇಲ್ವೆ-ನಿಲ್ದಾಣ ವಿಮಾನ-ನಿಲ್ದಾಣಗಳೆಲ್ಲ ಳ- ಣ ಅಕ್ಷರಗಳ ಬದಲು ಲ- ನ ಅಕ್ಷರಗಳನ್ನು ಉಪಯೋಗಿಸಿ ನಗರಗಳ ಹೆಸರನ್ನು ಹಿಂದಿಯಲ್ಲಿ ತಪ್ಪಾಗಿ ಬರೆಯುತ್ತವೆ. ಬೆಂಗಳೂರು ಮಂಗಳೂರು ಬೆಳಗಾವಿ ಬಳ್ಳಾರಿ ಹುಬ್ಬಳ್ಳಿ ಇವನ್ನೆಲ್ಲಾ ಹಿಂದಿಯಲ್ಲಿ ಬೆಂಗಲೂರು ಮಂಗಲೂರು ಬೆಲಗಾವಿ ಬಲ್ಲಾರಿ ಹುಬಲಿ ಎಂದು ಮಗುವಿನ ತೊದಲು ನುಡಿಯಂತೆ ಬರೆಯಲಾಗುತ್ತದೆ. ಅಂತೆಯೇ ರೋಣ, ಪೀಣ್ಯ, ಪಡುಕೋಣೆ ಇವನ್ನು ರೋನ, ಪೀನ್ಯಾ, ಪದುಕೋನ ಎಂದು ತಪ್ಪಾಗಿ ಬರೆಯಲಾಗುತ್ತಿದೆ. ಕರ್ನಾಟಕದ ರಾಜಧಾನಿಯ ಹೆಸರನ್ನೇ ಹಿಂದಿಯವರು ತಪ್ಪಾಗಿ ಬರೆಯುವುದನ್ನು ನೋಡಿಕೊಂಡು ನಾವು ಸುಮ್ಮನಿರುವುದು ಸರಿಯಲ್ಲ. ಕನ್ನಡ ಸಂಘಟನೆಗಳು ನವಂಬರ್ ಒಂದಕ್ಕೆ ಮೊದಲು ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳು ಕಡೇ ಪಕ್ಷ ಬೆಂಗಳೂರಿನ ಹೆಸರನ್ನಾದರೂ ತಮ್ಮ ಹಿಂದಿ ಬೋರ್ಡಿನಲ್ಲಿ ಸರಿಪಡಿಸುವಂತೆ ಒತ್ತಡ ಹೇರಬೇಕು.

ಅಣ್ಣಾ ಹಜಾರೆಯವರ ಹೆಸರನ್ನು ಹಿಂದಿ ಟಿವಿ ಹಾಗೂ ಹಿಂದಿ ಪತ್ರಿಕೆಗಳವರು ಬಾಲಿಶವಾಗಿ 'ಅನ್ನಾ' ಹಜಾರೆ ಎಂದು ಬರೆಯುವುದು ರಾಷ್ಟ್ರೀಯ ಅವಮಾನ, ಆದರೆ ರಾಷ್ಟ್ರ ಮಟ್ಟದಲ್ಲಿ ಯಾರೂ ಇದನ್ನು ಆಕ್ಷೇಪಿಸದಿರುವುದು ಖೇದಕರ.

-ವೀರಪ್ಪ ಡಿ. ಎನ್, ಮಡಿಕೇರಿ

ಅಕ್ಟೋಬರ್ 29, 2014ರ ಸಂಚಿಕೆಯಲ್ಲಿ ವಿಕಾಸ ಆರ್ ಮೌರ್ಯ ಅವರು ಬರೆದಿರುವ ಕವನ 'ಕಂಬಾಲಪಲ್ಲಿಯ ಕವಿತೆ' ಮನ ಕಲಕಿತು. ಹದಗೆಟ್ಟು ಹೋಗಿರುವ ರಾಜಕೀಯ, ಸಾಮಾಜಿಕ, ನ್ಯಾಯಾಂಗ ವ್ಯವಸ್ಥೆಯ ಕುರಿತು ಬೆಳಕು ಚೆಲ್ಲಿರುವ ಕವನ ಜೊತೆಗೆ ಈ ವ್ಯವಸ್ಥೆಯನ್ನು ಎಚ್ಚರಿಸುವ, ಸರಿ ಮಾಡುವ ಜವಾಬ್ದಾರಿ ಹೊತ್ತಿರುವ ಕೆಲವು ಸಂಘಟನೆಗಳು ನಿಷ್ಕ್ರಿಯತೆಯಿಂದ ಎದ್ದು ಹೋರಾಟ ಮಾಡಿ ನೊಂದವರಿಗೆ ನ್ಯಾಯ ಕೊಡಿಸುತ್ತವೆ ಎಂಬ ಆಶಾವಾದವನ್ನು ಹೊಂದಿದೆ. ಇಂತಹ ಚಿಂತನಾರ್ಹ ಕವನ ಬರೆದವರಿಗೆ ಮತ್ತು ಪ್ರಕಟಿಸಿದ ನಿಮಗೆ ಶರಣು.

-ಲಕ್ಷ್ಮೀಕಾಂತ ಮಿರಜಕರ, ಶಿಗ್ಗಾಂವ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಮುಕುಂದರಾಜ್ ನಿರ್ದೇಶನದಲ್ಲಿ 'ಕಾಡ ಹಾದಿಯ ಹೂಗಳು'



'ಕಾಡ ಹಾದಿಯ ಹೂಗಳು' ಎಂಬುದೊಂದು ಚಿತ್ರ ಕನ್ನಡದಲ್ಲಿ ಬರುತ್ತಿರುವುದು ನಿಮಗೆಲ್ಲಾ ಗೊತ್ತಿರುವಂಥದ್ದೇ. ಸೂಚ್ಯವಾಗಿ ಅನೇಕ ಅರ್ಥಗಳಿಗೆ, ಗಂಭೀರ ಚಿಂತನೆಗೆ, ವಿವಿಧ ಮಗ್ಗಲುಗಳ ಬಗ್ಗೆ ಧ್ಯಾನಕ್ಕೆ ಚಿತ್ರದ ಹೆಸರೇ ಇಂಬು ನೀಡುತ್ತದೆ.

ಇದೊಂದು ಕಾದಂಬರಿಯಾಧಾರಿತ ಚಿತ್ರ ಎಂಬುದು ಅಷ್ಟು ವಿಶೇಷವೇನಲ್ಲ, ಆದರೆ ಆ ಕಾದಂಬರಿಯನ್ನು ಬರೆದಿರುವುದು ಮುದ್ದು ತೀರ್ಥಹಳ್ಳಿ ಎಂಬ ಹದಿನಾರು ವರ್ಷದ ಬಾಲೆ ಎಂಬುದೇ ವಿಶೇಷ. ಇನ್ನೂ ಎಳೆಯ ಮನಸಿನ ಮುಗ್ಧತೆ, ಆರ್ದ್ರತೆ, ಸೂಕ್ಷ್ಮತೆ, ಪ್ರಾಮಾಣಿಕತೆಗಳನ್ನು ಕಾಯ್ದುಕೊಂಡಿರುವ ಮುದ್ದು ತೀರ್ಥಹಳ್ಳಿ ತಮ್ಮ ಕಾದಂಬರಿಯಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಮತ್ತು ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳ ನಡುವಣ ಆಲೋಚನಾ ಕ್ರಮ, ಜೀವನ ಕ್ರಮಗಳ ಬಗ್ಗೆ ತೀರಾ ಸೂಕ್ಷ್ಮವಾಗಿ ಚರ್ಚಿಸಿದ್ದಾರೆ. ಆಂಗ್ಲಮಾಧ್ಯಮದಲ್ಲಿ ಓದಿದ ಮಾತ್ರಕ್ಕೆ ತಮ್ಮ ಮಕ್ಕಳು ಮಹತ್ತರವಾದುದೇನನ್ನೋ ಸಾಧಿಸುತ್ತಾರೆ, ಕನ್ನಡ ಮಾಧ್ಯಮದಲ್ಲಿ ಓದಿದರೆ ಬದುಕಿನ ಸವಾಲುಗಳನ್ನು ಎದುರಿಸುವಲ್ಲಿ, ಸುಂದರ ಜೀವನವನ್ನು ಕಟ್ಟಿಕೊಳ್ಳುವಲ್ಲಿ ಹಿಂದೆ ಬೀಳುತ್ತಾರೆ ಎಂಬ ಭ್ರಮೆಯಲ್ಲಿರುವ ಅದೆಷ್ಟೋ ವಿದ್ಯಾವಂತ, ಪೂರ್ವಾಗ್ರಹಪೀಡಿತ ಜನಸಮೂಹಕ್ಕೆ ತಕ್ಕ ಉತ್ತರ ನೀಡಬಲ್ಲ, ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳು ಮುಗ್ಧರೂ, ಪ್ರಾಮಾಣಿಕರೂ, ಸಮಾನತೆಯ ಬದುಕಿನತ್ತ ಕನಸಿನ ಕಣ್ಣು ನೆಟ್ಟಿರುವ ಮನೋಧರ್ಮವುಳ್ಳವರೂ ಆಗಿದ್ದಾರೆ ಎಂಬ ಸಂದೇಶವನ್ನು ಸಮಾಜಕ್ಕೆ ರವಾನಿಸಬಲ್ಲ ಆಶಯ ಹೊತ್ತ ಈ ಕಾದಂಬರಿ ಸಿನಿಮಾ ರೂಪದಲ್ಲಿ ಜನತೆಯನ್ನು ತಲುಪಲು, ಆ ಮೂಲಕ ಪ್ರಜ್ಞಾವಂತ ಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸುವುದು ಮೆಚ್ಚುವಂಥದ್ದು.



ಪ್ರಸ್ತುತ ದಿನಗಳಲ್ಲಿ ಹಣ ಮಾಡುವುದೇ ಸಿನಿಮಾ ನಿರ್ಮಾಪಕರ ಗುರಿಯಾಗಿದ್ದು ಸಾಮಾಜಿಕ ಕಾಳಜಿ ಇಲ್ಲದಂತಾಗಿದೆ. ಇಂತಹ ವಾತಾವರಣದಲ್ಲಿ 'ಕಾಡ ಹಾದಿಯ ಹೂಗಳು' ತರಹದ ಚಿತ್ರಗಳನ್ನು ನಿರ್ಮಿಸುವವರೇ ಇಲ್ಲದಂತಾಗಿದೆ. ಆದ್ದರಿಂದ ಈ ಚಿತ್ರವನ್ನು ನಿರ್ದೇಶಿಸುತ್ತಿರುವ ಎಲ್.ಎನ್.ಮುಕುಂದರಾಜ್ ಅವರು 'ಕ್ರೌಡ್ ಫಂಡ್' ದಾರಿಯನ್ನು ಹಿಡಿದಿದ್ದಾರೆ.

"ಪುಸ್ತಕಗಳು ಕೆಲವೇ ಮಂದಿಯನ್ನು ತಲುಪಲು ಸಮರ್ಥವಾಗಿರುತ್ತವೆ. ಆದರೆ ಸಿನಿಮಾ ಜನರನ್ನು ವ್ಯಾಪಕವಾಗಿ ತಲುಪುವ ಮಾಧ್ಯಮ. 'ಕಾಡ ಹಾದಿಯ ಹೂಗಳು' ಗಾಂಧಿನಗರದ ಥಾರ್ಮುಲಾದ ನಿರ್ಮಾಪಕರು ಅಥವಾ ರಿಯಲ್ ಎಸ್ಟೇಟ್ ಮಂದಿಯಿಂದ ನಿರ್ಮಾಣವಾಗದೆ ಕನ್ನಡ ಭಾಷೆಯ ಬಗ್ಗೆ ಆಸ್ಥೆಯಿರುವ ಕನ್ನಡ ಶಿಕ್ಷಕರುಗಳಿಂದಲೇ ನಿರ್ಮಾಣವಾಗುತ್ತಿದೆ. ಈ ಕ್ಷಣಕ್ಕೂ ಸರ್ಕಾರಿ ಶಾಲೆಯ ಕನ್ನಡ ಶಿಕ್ಷಕರು ವಂತಿಗೆ ಹಣವನ್ನು ಸಂಗ್ರಹಿಸಿ ಚಿತ್ರ ನಿರ್ಮಾಣಕ್ಕೆ ಸಹಕರಿಸುತ್ತಿದ್ದಾರೆ. ಅವರೆಲ್ಲ ಮಾತೃಭಾಷಾ ಮಾಧ್ಯಮದ ಮಹತ್ವವನ್ನು ತಿಳಿಸಿಕೊಡುವ 'ಕಾಡ ಹಾದಿಯ ಹೂಗಳು'ವಿನಂತಹ ಚಿತ್ರ ನಿರ್ಮಾಣ ತಮ್ಮ ಅನಿವಾರ್ಯ ಕರ್ತವ್ಯ ಎಂದೇ ಭಾವಿಸಿದ್ದಾರೆ" ಎಂದು ಮುಕುಂದರಾಜ್ ಹೇಳುತ್ತಾರೆ.

ವೃತ್ತಿಯಲ್ಲಿ ಅಧ್ಯಾಪಕರಾಗಿರುವ ಮುಕುಂದರಾಜ್ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಪ್ರಗತಿಪರರು. ಅವರು ಈಗ ಈ ಚಿತ್ರದ ಮೂಲಕ ನಿರ್ದೇಶಕರಾಗಲು ಹೊರಟಿದ್ದಾರೆ. ಅವರ ಪ್ರಯತ್ನಕ್ಕೆ ತಕ್ಕ ಫಲ ದೊರೆಯಲಿ ಎಂಬ ಹಾರೈಕೆ ನಮ್ಮದು.

ದ್ವಾರಕೀಶ್ ವಿತ್ ಚೈತನ್ಯ

ಕನ್ನಡ ಪ್ರೇಕ್ಷಕರಿಗೆ ಅದೆಷ್ಟೋ ಒಳ್ಳೊಳ್ಳೆಯ ಚಿತ್ರಗಳನ್ನೂ ರೀಮೇಕ್ ಸಿನಿಮಾಗಳನ್ನೂ ನೀಡಿರುವ ದ್ವಾರಕೀಶ್ ಇದೀಗ ಹೊಸದೊಂದು ಸಾಹಸಕ್ಕೆ ಕೈಹಾಕಿದ್ದಾರೆ. ಈ ಬಾರಿ ತಮ್ಮ ನಿರ್ಮಾಣದ ಚಿತ್ರಕ್ಕೆ ಕೆ.ಎಂ.ಚೈತನ್ಯ ಅವರನ್ನು ನಿರ್ದೇಶಕರಾಗಿ ದ್ವಾರಕೀಶ್ ಆಯ್ಕೆ ಮಾಡಿಕೊಂಡಿದ್ದಾರೆ.

ಇನ್ನೂ ಹೆಸರಿಡದ ಈ ಚಿತ್ರ ಈಗಾಗಲೇ ಆರಂಭವಾಗಿದು ಚಿರಂಜೀವಿ ಸರ್ಜಾ ಮತ್ತು ಮೇಘನಾ ರಾಜ್ ಜೋಡಿಯಾಗಿದ್ದಾರೆ. ಶ್ರೀಲಂಕಾದಲ್ಲೂ ಚಿತ್ರೀಕರಣ ನಡೆಸುವ ಯೋಜನೆಯಿದ್ದು ಈಗಾಗಲೇ ಆ ನಿಟ್ಟಿನಲ್ಲಿ ಎಲ್ಲಾ ಸಿದ್ಧತೆಗಳು ನಡೆಯುತ್ತಿವೆಯಂತೆ.



ತಮ್ಮ ವೃತ್ತಿಜೀವನದುದ್ದಕ್ಕೂ ಸೋಲು-ಗೆಲುವುಗಳನ್ನು ನೋಡುತ್ತಲೇ ಬೆಳೆದಿರುವ ದ್ವಾರಕೀಶ್ ಕನ್ನಡ ಚಿತ್ರರಂಗದ ಸುವರ್ಣ ಯುಗದಲ್ಲಿ ಇದ್ದವರು ಎಂಬುದು ಬೇರೆ ಮಾತು. ವಿಷ್ಣುವರ್ಧನ್ ಜೊತೆಗಿನ ಸ್ನೇಹಕ್ಕೆ ಹೆಸರಾಗಿದ್ದ ದ್ವಾರಕೀಶ್ ಅದೇ ವಿಷ್ಣುವರ್ಧನ್ ಅವರ ಹೆಸರನ್ನು ಬಂಡವಾಳವಾಗಿಸಿಕೊಂಡು ಲಾಭ ಮಾಡಲು ಪ್ರಯತ್ನಿಸಿದ್ದೂ ಇದೆ.

ಅದೇನೇ ಇರಲಿ, ಈಗ ಹಳೆ ತಲೆಮಾರಿನ ದ್ವಾರಕೀಶ್ ಮತ್ತು ಹೊಸ ತಲೆಮಾರಿನ ಚೈತನ್ಯ ಜೊತೆಗೂಡಿ ಹೊಸ ಸಿನಿಮಾ ಮಾಡುತ್ತಿದ್ದಾರೆ. ದ್ವಾರಕೀಶ್ ಅವರ ಹಲವು ದಶಕಗಳ ಅನುಭವ ಮತ್ತು ಚೈತನ್ಯರ ಹೊಸ ಹುಮ್ಮಸ್ಸು ಕನ್ನಡ ಚಿತ್ರಲೋಕಕ್ಕೆ ಹೊಸ ಬಗೆಯ ಸಿನಿಮಾ ಕೊಡುವಂತಾಗಲಿ.

ಜಯಮಾಲಾರ 'ಕತೆ ಅಲ್ಲ ಜೀವನ'

ಒಂದು ಕಾಲದ ಬೇಡಿಕೆಯ ನಟಿ, ಮತ್ತೊಂದು ಕಾಲದ ಲವಲವಿಕೆಯ ಚೇಂಬರ್ ಅಧ್ಯಕ್ಷೆ ಜಯಮಾಲಾ ಈಗ ಇನ್ನೊಂದು ಬಗೆಯಲ್ಲಿ ಪಬ್ಲಿಕ್ ಮುಂದೆ ಬರಲಿದ್ದಾರೆ. ಅದೇನೆಂದರೆ ತನ್ನ ಎರಡನೇ ಸೀಸನ್ ಶುರುಮಾಡಿಕೊಳ್ಳಲು ತುದಿಗಾಲಿನಲ್ಲಿ ನಿಂತಿರುವ 'ಕಥೆ ಅಲ್ಲ ಜೀವನ' ಎಂಬ ರಿಯಾಲಿಟಿ ಶೋ ನಡೆಸಿಕೊಡುವ ಜವಾಬ್ದಾರಿಯನ್ನು ಜಯಮಾಲಾ ಹೊತ್ತಿದ್ದಾರೆ.


ಈ ಹಿಂದೆ ಸುವರ್ಣ ವಾಹಿನಿ ಸಾದರಪಡಿಸಿದ್ದ ಈ ಕಾರ್ಯಕ್ರಮ ತನ್ನ ಮೊದಲ ಸೀಸನ್‌ನಲ್ಲಿ ನಟಿ ಲಕ್ಷ್ಮಿಯವರ ಆಕರ್ಷಕ ನಿರೂಪಣೆಯ ಮೂಲಕ ಫೇಮಸ್ ಆಗಿತ್ತು, ಆದರೆ ಅದೇಕೋ ಆ ಕಾರ್ಯಕ್ರಮ ಎಷ್ಟು ಬೇಗ ಜನಪ್ರಿಯವಾಯಿತೋ ಅಷ್ಟೇ ಬೇಗ ನಿಂತುಹೋಗಿತ್ತು, ಈಗ ಸೀಸನ್- 2 ಶುರುವಾಗುತ್ತಿದೆ. ಈಗಾಗಲೇ ಈ ರಿಯಾಲಿಟಿ ಶೋನ ತಾಂತ್ರಿಕ ತಂಡ ಜಯಮಾಲ ಅವರನ್ನು ಒಳಗೊಂಡಂತಹ ಒಂದಿಷ್ಟು ಫೋಟೋ ಶೂಟ್, ಕೆಲವೊಂದು ಎಪಿಸೋಡ್‌ಗಳ ಚಿತ್ರೀಕರಣ ಇತ್ಯಾದಿಗಳನ್ನು ಮುಗಿಸಿದ್ದು ಇದೇ ನವೆಂಬರ್ ಒಂದನೇ ತಾರೀಖಿನಿಂದ 'ಕಥೆ ಅಲ್ಲ ಜೀವನ-2' ರಾತ್ರಿ ಎಂಟಕ್ಕೆ ಸುವರ್ಣ ಟಿವಿಯಲ್ಲಿ ಪ್ರಸಾರವಾಗಲಿದೆ.

ಲಕ್ಷ್ಮಿ ಅವರಂತೆ ಜಯಮಾಲಾ ಅವರು ಕೂಡ ತಮ್ಮ ವೃತ್ತಿ ... ಖಾಸಗಿ ಬದುಕಿನಲ್ಲಿ ಹಲವಾರು ಏರುಪೇರುಗಳನ್ನೂ, ಸುಖದುಃಖಗಳ... ಕಂಡಿರುವವರು, ಅನುಭವಿಸಿರುವವರು. ಅಂತಹ ದಟ್ಟ ಅನುಭವ ಇದ್ದರೆ... 'ಕತೆ ಅಲ್ಲ ಜೀವನ' ತರಹದ ಶೋಗಳಿಗೆ ನಿರೂಪಕರು ಅರ್ಥವನ್ನು, ದಟ್ಟತೆಯ... ಮತ್ತು ದಿಕ್ಕನ್ನು ಕೊಡಲು ಸಾಧ್ಯ.

ಜಯಮಾಲಾ ಅವರು ತಮ್ಮ ಈ ಹೊಸ ಯತ್ನದಲ್ಲಿ ಲಕ್ಷ್ಮಿ ಅವರಂತೆ... ಯಶಸ್ಸನ್ನು ಕಾಣಲಿ.

ಉಪ್ಪಿಯಿಂದ ಮತ್ತೊಂದು ಹಾಡು

ಡಾ. ರಾಜ್‌ಕುಮಾರ್ ಅವರಿಗೆ ರಂಗಭೂಮಿಯ ಹಿನ್ನೆಲೆ ... ಗಾಯನದಲ್ಲಿ ತರಬೇತಿ ಇತ್ತು, ಆದ್ದರಿಂದ ನಟರಾಗಿದ್ದ ಅವರು ಇದ್ದಕ್ಕಿ... ಹಿನ್ನೆಲೆ ಗಾಯಕರೂ ಆಗಿ ಯಶಸ್ವಿಯಾಗಿದ್ದು ಅಚ್ಚರಿಯ ಸಂಗತಿಯ... ಅಂದಹಾಗೆ ರಾಜ್‌ಕುಮಾರ್ ಅವರು ಸಿನಿಮಾ ಲೋಕಕ್ಕೆ ಸಲ್ಲಿಸಿದ್ದ ಸೇವೆಯಿಂ... ಅವರಿಗೆ ಪದ್ಮಭೂಷಣ ಮತ್ತು ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ... ಲಭಿಸಿದ್ದವಲ್ಲದೆ, 'ಜೀವನ ಚೈತ್ರ' ಸಿನಿಮಾದಲ್ಲಿನ 'ನಾದಮಯ' ಹಾಡಿ... ಅತ್ಯುತ್ತಮ ಹಿನ್ನೆಲೆ ಗಾಯಕ ಎಂಬ ರಾಷ್ಟ್ರೀಯ ಪ್ರಶಸ್ತಿಯೂ ಸಿ... ಇಲ್ಲಿಯವರೆಗೂ ಅತ್ಯುತ್ತಮ ಹಿನ್ನೆಲೆ ಗಾಯನಕ್ಕೊಂದು ಕನ್ನಡ ಚಿತ್ರೋದ್ಯಮ... ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುವವರು ಬಾಲಮುರಳಿಕೃಷ್ಣ ('ಹಂಸ... ಶಿವಮೊಗ್ಗ ಸುಬ್ಬಣ್ಣ (ಕಾಡು ಕುದುರೆ') ಮತ್ತು ಎಸ್.ಪಿ.ಬಾಲಸುಬ್ರಮಣ್ಯಂ ('ಗಾನಯೋಗಿ ಪಂಚಾಕ್ಷರಿ ಗವಾಯಿ') ಅಷ್ಟೇ.



ಅದೆಲ್ಲ ಈ ಹಿಂದೆ ನಡೆದಿರುವಂತಹದ್ದು ಬಿಡಿ. ಈಗ ಜನಪ್ರಿಯ ನಟನೊಬ್ಬನಿಗೆ ರಾಗ, ತಾಳಗಳ ಬಗ್ಗೆ ಗೊತ್ತಿರದಿದ್ದರೂ, ಆತನಿಗೆ ಹಾಡುವ ದನಿ ಇಲ್ಲದಿದ್ದರೂ ಸಂಗೀತ ಎಂಬ ನೆಪದಲ್ಲಿ ಒಂದಿಷ್ಟು ಡೈಲಾಗ್ ಮಾದರಿಯ ಸಾಲುಗಳನ್ನು ಬರೆದು ಅವುಗಳನ್ನು ಆ ಜನಪ್ರಿಯ ನಟನಿಂದ ಹಾಡಿಸಿ ಪುಕ್ಕಟೆ ಪ್ರಚಾರವನ್ನು, ಒಂದಿಷ್ಟು ಯಶಸ್ಸನ್ನು ಕಾಣುವ ಜಮಾನ ಸೃಷ್ಟಿಯಾಗಿದೆ. ಇಲ್ಲವೆಂದರೆ 'ಪ್ರೀತಿ ಯಾಕೆ ಭೂಮಿ ಮೇಲಿದೆ?' ಎಂಬ ಸಿನಿಮಾದ ಟೈಟಲ್ ಸಾಂಗ್‌ಅನ್... ಚಿತ್ರದ ನಿರ್ದೇಶಕ ಮತ್ತು ಪ್ರಮುಖ ನಟ ಪ್ರೇಮ್ ಸ್ವತಃ ತಾವೇ ಹಾ... ಮೂಲಕ ಕನ್ನಡ ಸಿನಿಮಾ ಸಂಗೀತ ಕೇಳುಗರ ಮೇಲೆ ದಾಳಿ ಮಾ... ಧೈರ್ಯ ತೋರುತ್ತಿರಲಿಲ್ಲ!

ಆ ಆಘಾತದ ನಂತರವೂ ನಟರಿಂದ ಹಾಡು ಹಾಡಿಸುವ ಖ... ಕನ್ನಡದಲ್ಲಿ ಜಾಸ್ತಿಯಾಗುತ್ತಿದೆ. ಇದಕ್ಕೆ ಇತ್ತೀಚಿಗಿನ ನಿದರ್ಶನ 'ಕೃಷ್ಣ... ಎಂಬ ಚಿತ್ರದ ನಿರ್ದೇಶಕ ಶಶಾಂಕ್ ಮೊನ್ನೆ ನಟ ಉಪೇಂದ್ರರನ್ನು ... ತಮ್ಮ ಚಿತ್ರಕ್ಕೆ ಒಂದು ಹಾಡನ್ನು ಹಾಡಿಸಿರುವುದು.

ಹಾಗೆ ನೋಡಿದರೆ ಉಪೇಂದ್ರ ತಮ್ಮ ಅಭಿನಯದ ಚಿತ್ರಕ್ಕೆ ಒ... ಎರಡೋ ಹಾಡು ಬರೆಯುವುದು, ಒಮ್ಮೊಮ್ಮೆ ಹಾಡುವುದು ನಡೆಯು... (ಉಪ್ಪಿಯೇ ಪ್ರೇಮ್ ಅವರ ದಾಳಿಗೆ ಪ್ರೇರಣೆ ಆಗಿದ್ದರು ಎಂಬುದು ಮತ್ತೆ... ಆಘಾತಕಾರಿ ವಿಷಯ!) ಆದರೀಗ ಉಪೇಂದ್ರ ತಮ್ಮ ಚಿತ್ರಕ್ಕೆ ಮಾ... ಇತರರ ಚಿತ್ರಕ್ಕೂ ಹಾಡಲಾರಂಭಿಸಿದ್ದಾರೆ!!

ಉಪ್ಪಿ ತರಹದ ನಟರೂ ಹಾಡಲು ಶುರು ಮಾಡಿಕೊಂ... ಈ ಸಂದರ್ಭದಲ್ಲಿ ನಮ್ಮನ್ನು ಒಂದು ಪ್ರಶ್ನೆ ಕಾಡಲಾರಂಭಿ... ಈಗಾಗಲೇ ಸೋನು ನಿಗಮ್, ಟಿಪ್ಪು, ಕು... ಗಾಂಜಾವಾಲಾ, ಶಂಕರ್ ಮಹಾದೇವನ್, ಹರಿಹರನ್, ಕ... ಶ್ರೇಯಾ ಘೋಷಾಲ್ ಅಂತೆಲ್ಲಾ ಪರಭಾಷಿಕ ಗಾಯ... ಕರೆದು ಅವರಿಗೆಲ್ಲ ಮಣೆ ಹಾಕುತ್ತಿರುವ ನಮ್ಮ ಚಿತ್ರ... ಮಂದಿ ನಮ್ಮ ಸ್ಥಳೀಯ ಗಾಯಕ/ಗಾಯಕಿಯರಿಗೆ ... ಅವಕಾಶಗಳನ್ನು ಕೊಡುತ್ತಿಲ್ಲ, ಈ ಪರಭಾಷೆಯ ಗಾ... ಗಾಯಕಿಯರ ಜೊತೆಗೆ ನಮ್ಮವರೇ ಆದ ಹೀರೋ... ಹೀಗೆ ಹಾಡಲು ಶುರು ಮಾಡಿಬಿಟ್ಟರೆ ... ಪ್ರತಿಭೆಗಳ ಗತಿಯೇನು?

ಈ ಪ್ರಶ್ನೆಗೆ ಉಪ್ಪಿ ಮತ್ತು ಕೋ... ಕೊಡುವರೇ?!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427 Fax : 26604536, E-mail :lankesh70@rediffmail.com